SRIDEVI LAKE VIEW
PREMIUM RESIDENTIAL LAYOUT
OFF T. NARSIPURA ROAD MYSURU
ALLIANCE SQUARE | Safe Wheels | 0821-2541100 www.alliancesquare.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 18 ಭಾನುವಾರ 2025

ಸಂಪುಟ: 46 | ಸಂಚಿಕೆ: 32 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಯಶಸ್ವಿ ಕಂಚಿ ಸೀರೆ ಮಳಿಗೆ
D. D. Urs Road, MYSORE
Ph: 0821-2431830 / 4262458

ವೈದ್ಯಕೀಯ ಶುಲ್ಕ ಹೆಚ್ಚಳವಿಲ್ಲ



ಬೆಂಗಳೂರು, ಮೇ 17(ಕೆಎಂಶಿ)– ಖಾಸಗಿ ವೈದ್ಯಕೀಯ ಕಾಲೇಜುಗಳ ಒತ್ತಡದ ಹೊರತಾಗಿಯೂ, ಮುಂದಿನ ಶೈಕ್ಷಣಿಕ ವರ್ಷಕ್ಕೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ವಿಚಾರದಲ್ಲಿ ಯಾವುದೇ ಹೆಚ್ಚಳವಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಖಾಸಗಿ ವೈದ್ಯಕೀಯ ಕಾಲೇಜು ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸಚಿವರು ಈ ವಿಷಯ ಸ್ಪಷ್ಟಪಡಿಸಿದರು. ಖಾಸಗಿ ಕಾಲೇಜುಗಳು ಶೇ.10 ರಿಂದ 15ರಷ್ಟು ಶುಲ್ಕ ಹೆಚ್ಚಳಕ್ಕೆ ಮನವಿ ಮಾಡಿದ್ದವು. ಆದರೆ ■ 6ನೇ ಪುಟಕ್ಕೆ

ಎಂಬಿಎ, ಎಂಸಿಎ ಕೋರ್ಸ್‌ಗೆ ಜೂ.22ಕ್ಕೆ ಪ್ರವೇಶ ಪರೀಕ್ಷೆ

ಎಂ.ಟೆಕ್, ಎಂಇಗೆ ಮೇ 31ಕ್ಕೆ ಲಿಖಿತ ಪರೀಕ್ಷೆ

ಬೆಂಗಳೂರು,ಮೇ 17(ಕೆಎಂಶಿ)–ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶಕ್ಕೆ ಜೂನ್ 22ರಂದು ಪಿಜಿಸಿಇಟಿ ನಡೆಯಲಿದ್ದು, ಇದಕ್ಕೆ ಅರ್ಜಿ ಸಲ್ಲಿಸಲು ಮೇ 19ರವರೆಗೆ ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ದಿನಾಂಕ ವಿಸ್ತರಣೆ ಕೇವಲ ಎಂಬಿಎ, ಎಂಸಿಎಗೆ ಮಾತ್ರ ಅನ್ವಯವಾಗುತ್ತದೆ. ಎಂ.ಟೆಕ್, ಎಂಇ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಮುಗಿದಿದ್ದು, ಮೇ 31ರಂದು ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ಯಾರಂಟಿಗೆ ಇಲ್ಲಿವರೆಗೆ ಕೊಟ್ಟಿದ್ದು 90000 ಕೋಟಿ

- ಸಿಎಂ ಸಿದ್ದರಾಮಯ್ಯ ಮಾಹಿತಿ
- ವಾಣಿಜ್ಯ ತೆರಿಗೆಗಳ ಸೇವಾ ಸಂಘದ ಸುವರ್ಣ ಮಹೋತ್ಸವ
- ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ ನಂ.2

ಬೆಂಗಳೂರು, ಮೇ 17(ಕೆಎಂಶಿ)– ಇದುವರೆಗೆ ಗ್ಯಾರಂಟಿ ಯೋಜನೆಗಳಿಗೆ 90 ಸಾವಿರ ಕೋಟಿ ವಿನಿಯೋಗ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವಾ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈವರೆಗೆ 90,000 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ವೆಚ್ಚ ಮಾಡಲಾಗಿದೆ. ಗ್ಯಾರಂಟಿಗಳಿಗೆ ಹಣ ಪೂರೈಸಲಾಗದೇ ರಾಜ್ಯ ಆರ್ಥಿಕ ದಿವಾಳಿಯಾಗುತ್ತದೆ ಎಂದು ವಿರೋಧಪಕ್ಷದವರು ಟೀಕಿಸಿದ್ದರು. ಸರ್ಕಾರದ ಈ ಯಶಸ್ಸಿಗೆ ಇಲಾಖೆ ಅಧಿಕಾರಿಗಳ ಶ್ರಮ ಅಡಗಿದೆ ಎಂದರು.



ಸಿದ್ದರಾಮಯ್ಯ


ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿ ದ್ವಿತೀಯ ಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ ಮೊದಲ ಸ್ಥಾನಕ್ಕೆ ಬರಲು ಪ್ರಯತ್ನಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ತಿಳಿಸಿದರು.

ಸಂಘವು 50 ವರ್ಷಗಳ ಮೈಲಿಗಲ್ಲನ್ನು ಸಾಧಿಸಿದ್ದು, ಇದಕ್ಕಾಗಿ ಶ್ರಮಿಸಿದ ಸಂಘದ ಎಲ್ಲ ಪದಾಧಿಕಾರಿಗಳಿಗೆ ಅಭಿನಂದನೆಗಳು. ನಿಮ್ಮೆಲ್ಲರ ಸಹಕಾರದಿಂದ ನಾನು ಆರ್ಥಿಕ ಇಲಾಖೆ ಜವಾಬ್ದಾರಿಯನ್ನು ದೀರ್ಘ ಕಾಲದವರೆಗೆ ನಿಭಾಯಿಸಲು ಸಾಧ್ಯವಾಯಿತು. ನಾನು ಹಣಕಾಸು ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಹಾಗೂ ಮುಖ್ಯ ಮಂತ್ರಿಯಾಗಿ ಹಣಕಾಸು ಇಲಾಖೆ ಕಾರ್ಯಭಾರ ನಿರ್ವಹಿಸಿದ್ದೇನೆ. ಈಗ ಸರ್ಕಾರದ ಯಶಸ್ವಿ ಆಡಳಿತಕ್ಕೆ ಎರಡು ವರ್ಷ ಪೂರೈಸಿದ್ದು, ಮೇ 20ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಸಮಾವೇಶ ಏರ್ಪಡಿಸಲಾಗಿದೆ ಎಂದು ಹೇಳಿದರು.

> "ನಾನು ಹಣಕಾಸಿನ ಮಂತ್ರಿಯಾಗಿದ್ದರೂ ಸಹ ತೆರಿಗೆ ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಅನಗತ್ಯ ಮಧ್ಯ ಪ್ರವೇಶ ಮಾಡಲು ಬಯಸುವುದಿಲ್ಲ. ಆದರೆ ಅಧಿಕಾರಿಗಳು ಇಲಾಖೆಗೆ ನೀಡಿರುವ ತೆರಿಗೆ ಸಂಗ್ರಹಣೆ ಗುರಿ ಸಾಧಿಸಲು ಪ್ರಯತ್ನಿಸಬೇಕು. ಬೆಂಗಳೂರಿನಲ್ಲಿ ತೆರಿಗೆ ಸೋರಿಕೆ ಹೆಚ್ಚಿನ ಮಟ್ಟದಲ್ಲಿದೆ. ಕರ್ನಾಟಕ ತೆರಿಗೆ ಸಂಗ್ರಹಣೆಯಲ್ಲಿ ಮುಂಚೂಣಿಯಲ್ಲಿದೆ. ತೆರಿಗೆ ಪಾವತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಸುಧಾರಣೆಗಳನ್ನು ತರಲು ಸರ್ಕಾರ ಬದ್ಧವಾಗಿದೆ. ತೆರಿಗೆ ಅಧಿಕಾರಿಗಳ ಸಂಘದ ಬೇಡಿಕೆಗಳನ್ನು ಸರ್ಕಾರ ಪರಿಶೀಲಿಸಲಾಗುವುದು. ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳಿಗೆ ಸರ್ಕಾರ ಎಂದಿಗೂ ಸ್ಪಂದಿಸುತ್ತದೆ. ಅಂತೆಯೇ ಕರ್ತವ್ಯಲೋಪ ಎಸಗುವ ಅಧಿಕಾರಿ ನೌಕರರ ಮೇಲೆ ಶಿಸ್ತಿನ ಕ್ರಮವನ್ನೂ ಸರ್ಕಾರ ತೆಗೆದುಕೊಳ್ಳುತ್ತದೆ. **–ಸಿದ್ದರಾಮಯ್ಯ, ಮುಖ್ಯಮಂತ್ರಿ**

ತೆರಿಗೆ ಸಂಗ್ರಹಣೆಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಇದಕ್ಕಾಗಿ ಎಲ್ಲ ಅಧಿಕಾರಿಗಳಿಗೆ ಅಭಿನಂದನೆಗಳು. ಜವಾಬ್ದಾರಿಯುತ ಅಧಿಕಾರಿಗಳಿಂದ ಉತ್ತಮ ತೆರಿಗೆ ಸಂಗ್ರಹಣೆಯಾಗುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯಿಂದ ಹೆಚ್ಚಿನ ಮೊತ್ತದ ತೆರಿಗೆ ಸಂಗ್ರಹಣೆ ಸಾಧ್ಯವಾಗುತ್ತದೆ. ಕಳೆದ ವರ್ಷ ತೆರಿಗೆ ಸಂಗ್ರಹಣೆಗೆ 1,03,000 ಕೋಟಿ ರೂ.ಗಳ ಗುರಿ ನಿಗದಿಪಡಿಸಿದ್ದು, ಹೆಚ್ಚುವರಿ 17000 ಕೋಟಿ ತೆರಿಗೆ ಸಂಗ್ರಹಣೆಯನ್ನು ಸಾಧಿಸಲಾಗಿತ್ತು. ಈ ವರ್ಷ 1,20,000 ಕೋಟಿ ರೂ.ಗಳ ಗುರಿ ನೀಡಲಾಗಿದ್ದು, ಅಧಿ ಕಾರಿಗಳು ಗುರಿಮೀರಿ ಸಾಧನೆ ಮಾಡಬೇಕಿದೆ. ಈ ವರ್ಷ 4,09,000 ಕೋಟಿ ರೂ.ಗಳ ಬಜೆಟ್ ಮಂಡಿಸಲಾಗಿದ್ದು, ಇದರಲ್ಲಿ ಗ್ಯಾರಂಟಿ ಯೋಜನೆಗಳಿಗೆ 50,018 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಪಾಕ್ ಪ್ರಧಾನಿ ನಿದ್ದೆಗೆಡಿಸಿದ 'ಆಪರೇಷನ್ ಸಿಂಧೂರ'



ಇಸ್ಲಾಮಾಬಾದ್: 'ಆಪರೇಷನ್ ಸಿಂಧೂರ್' ಏಟಿನ ಎಫೆಕ್ಟ್ ಒಂದೊಂದಾಗಿ ಆಚೆ ಬರುತ್ತಿದೆ ಭಾರತೀಯ ಸೇನೆ ಕೊಟ್ಟ ಪ್ರತ್ಯುತ್ತರಕ್ಕೆ ಪಾಕಿಸ್ತಾನ ವಿಲವಿಲ ಒದ್ದಾಡುತ್ತಿದೆ. ವಿಶ್ವದ ಮುಂದೆ ಏನೂ ಆಗಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಕೊನೆಗೂ ಭಾರತದ ದಾಳಿ ಒಪ್ಪಿಕೊಂಡಿದ್ದಾರೆ. ■ 6ನೇ ಪುಟಕ್ಕೆ

ನಾಲ್ಕನೇ ವರ್ಷದ ಪುಣ್ಯ ಸ್ಮರಣೆ



ಚೆಲುವರಾಜ್
ನೀವು ನಮ್ಮನ್ನಗಲಿ ಇಂದಿಗೆ
ನಾಲ್ಕು ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು:
ಕುಟುಂಬವರ್ಗದವರು ದಾಸನಕೊಪ್ಪಲು, ಮೈಸೂರು

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯುವೆಲ್ಸ್ THOLASI JEWELS Fine Jewellers Since Generations
₹ 8,720/- ಇಂದಿನ ಚಿನ್ನದ ಬೆಲೆ
ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221–200926

WANTED
SALES EXECUTIVE
2-3 years Experienced Sales Executive to market Rooftop Solar Energy Solutions in and around Mysore. Handsome commission on sales. Part time OR Full time basis.
WhatsApp : 78927 30138
Email : replysemysore@gmail.com

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA, 1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

FOR SALE
2 ACRES
Mysore - H.D. Kote Highway
Call : 70194 70527

WEKREATE PROPERTIES
SITE FOR SALE
Premium Residential Plots for SALE behind Chamundi Hills with in Ring Road
Dimensions
30x40 / 30x50
For Site Visit & Details Call
9844 0090 49
#658, 3rd Floor, Vishwamanava Double Road, Saraswathipuram, Mysuru-09

HOUSE FOR SALE
Newly constructed house for sale, near Alanahalli ring road junction, Nadanahalli, Mysore. 30x40, duplex, 3 BHK, car parking, E katha ready.
Contact: 9986971822

HOUSE FOR SALE
Newly constructed house for sale, near golf course and race course, near chamundi hill foot steps, 30×40 corner property, 4 BHK. MCC limits E Khata.
Contact: 7760902091

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗೌರವಾನ್ವಿತ ನ್ಯಾಯಮೂರ್ತಿ
ಡಾ. ಹೆಚ್.ಎನ್.ನಾಗಮೋಹನ ದಾಸ್
ಏಕ ಸದಸ್ಯ ಆಯೋಗ
ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು.



ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು



ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025
ಸಮೀಕ್ಷೆ ಅವಧಿಯನ್ನು 25.05.2025 ರ ವರೆಗೆ ವಿಸ್ತರಿಸಲಾಗಿದೆ.
ಸಮೀಕ್ಷೆಗೆ ಸಹಕರಿಸಿ - ತಡಮಾಡದೆ ಮಾಹಿತಿ ನೀಡಿ
ನಿಮ್ಮ ಸಾಮಾಜಿಕ ಜವಾಬ್ದಾರಿಯಲ್ಲಿ ಪಾಲ್ಗೊಳ್ಳಲು ಒಂದು ಸುವರ್ಣಾವಕಾಶ

ಸಮೀಕ್ಷಾದಾರರಿಂದ ಮನೆ-ಮನೆ ಭೇಟಿ ಸಮೀಕ್ಷೆ	25-05-2025 ರ ವರೆಗೆ ವಿಸ್ತರಿಸಲಾಗಿದೆ
ವಿಶೇಷ ಶಿಬಿರ (ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ)	26-05-2025 ರಿಂದ 28-05-2025 ರ ವರೆಗೆ ಮರು ನಿಗದಿಪಡಿಸಲಾಗಿದೆ
ಆನ್‌ಲೈನ್ ಮೂಲಕ ಸ್ವಯಂ ಘೋಷಣೆ	19-05-2025 ರಿಂದ 28-05-2025 ರ ವರೆಗೆ ಮರು ನಿಗದಿಪಡಿಸಲಾಗಿದೆ

- ಮನೆ ಮನೆಗೂ ಭೇಟಿ ನೀಡುತ್ತಿದ್ದಾರೆ ಸಮೀಕ್ಷಾದಾರರು.
- ಸಮೀಕ್ಷಾದಾರರಿಗೆ ನಿಮ್ಮ ಮೂಲ ಜಾತಿಯ ಬಗ್ಗೆ ಮಾಹಿತಿ ನೀಡಿ, ಮೀಸಲಾತಿ ಸೌಲಭ್ಯ ಪಡೆಯಿರಿ.
- ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಪರಿಶಿಷ್ಟ ಜಾತಿಗಳಲ್ಲಿ (ಎಸ್‌ಸಿ) ಆಂತರಿಕ ಮೀಸಲಾತಿಯ ಬೇಡಿಕೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಒಂದು ಮಹತ್ವಾಕಾಂಕ್ಷಿ ಹಾಗೂ ದಿಟ್ಟ ಹೆಜ್ಜೆಯಾಗಿದೆ.
- ಸಮೀಕ್ಷೆಗೆ ಸಹಕರಿಸಿ, ನಿಖರವಾದ ಮಾಹಿತಿಗಳನ್ನು ನೀಡಿ.
- ನಿಮ್ಮ ಮುಂದಿನ ಪೀಳಿಗೆ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗದಿರಲಿ.
- ನ್ಯಾಯಯುತ ಮೀಸಲಾತಿ ಹಂಚಿಕೆಗಾಗಿ ಸಮೀಕ್ಷಾದಾರರಿಗೆ ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಮೂಲ ಜಾತಿ, ಶಿಕ್ಷಣ, ವರಮಾನ, ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವುದು ನಿಮ್ಮೆಲ್ಲರ ಆದ್ಯ ಕರ್ತವ್ಯ.

ಸಹಾಯವಾಣಿ : 9481359000

ನಿಮ್ಮ ಜಾತಿ,
ಆದಿ ಕರ್ನಾಟಕ
ಆದಿ ದ್ರಾವಿಡ
ಆದಿ ಆಂಧ್ರ,
ಎಂದು ಇದ್ದಲ್ಲಿ ಮೂಲ ಜಾತಿಯನ್ನು ಸಮೀಕ್ಷೆಗೆ ಒದಗಿಸುವುದು



ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ರವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು.

ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ 10kg | ಗೃಹಜ್ಯೋತಿ ಪ್ರತಿ ಮನೆಗೆ 200 | ಗೃಹಲಕ್ಷ್ಮಿ ₹2000 | ಯುವನಿಧಿ ₹3000 ₹1500

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ

ಮೈಸೂರು ಮಿತ್ರ ಭಾನುವಾರ 18 ಮೇ 2025

ಚೀನಾ ವಿರುದ್ಧ ಮೈಸೂರಲ್ಲಿ ಟಿಬೆಟನ್ನರ ಪ್ರತಿಭಟನೆ

11ನೇ ಪಂಚೆನ್ ಲಾಮಾ ಗೆಂಡುನ್ ಚೋಯ್ಕಿ ಬಿಡುಗಡೆಗೆ ಆಗ್ರಹ



11ನೇ ಪಂಚೆನ್ ಲಾಮಾ ಗೆಂಡುನ್ ಚೋಯ್ಕಿ ಅವರ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿ ಟಿಬೆಟಿಯನ್ ಯುವ ಕಾಂಗ್ರೆಸ್, ಪ್ರಾಂತೀಯ ಟಿಬೆಟಿಯನ್ ಮಹಿಳಾ ಸಂಘಟನೆ ಹಾಗೂ ಟಿಬೆಟಿಯನ್ ವಿದ್ಯಾರ್ಥಿ ಸಂಘಟನೆ ಸದಸ್ಯರು ಶನಿವಾರ ಚೀನಾ ವಿರುದ್ಧ ಪ್ರತಿಭಟನೆ ನಡೆಸಿದರು.


ಮೈಸೂರು, ಮೇ17(ಜಿಎ)–ಚೀನಾ ಸರ್ಕಾರ 11ನೇ ಪಂಚೆನ್ ಲಾಮಾ ಗೆಂಡುನ್ ಚೋಯ್ಕಿ ಅವರ ಮಾಹಿತಿ ನೀಡಬೇಕು ಹಾಗೂ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿ ಟಿಬೆಟಿಯನ್ ಯುವ ಕಾಂಗ್ರೆಸ್, ಪ್ರಾಂತೀಯ ಟಿಬೆಟಿಯನ್ ಮಹಿಳಾ ಸಂಘಟನೆ ಹಾಗೂ ಟಿಬೆಟಿಯನ್ ವಿದ್ಯಾರ್ಥಿ ಸಂಘಟನೆ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಟಿಬೆಟ್ ಬಾವುಟಗಳನ್ನು ಪ್ರದರ್ಶಿಸಿ ತಮ್ಮ ನಾಯಕ ಪಂಚೆನ್ ಲಾಮಾ ಗೆಂಡುನ್ ಬಗ್ಗೆ ಚೀನಾ ಸರ್ಕಾರ ಮಾಹಿತಿ ನೀಡುವಂತೆ ಆಗ್ರಹಿಸಿದರು. ಕೊಳ್ಳೇಗಾಲ, ಹುಣಸೂರು ಹಾಗೂ ಬೈಲಕುಪ್ಪೆಯ ಟಿಬೆಟನ್ನರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು.

ಚೀನಾ ಸರ್ಕಾರವು 1995ರಲ್ಲಿ ಪಂಚೆನ್ ಲಾಮಾ ಅವರನ್ನು ಅಕ್ರಮವಾಗಿ ಬಂಧಿಸಿತ್ತು. ನಮ್ಮ ಧರ್ಮಗುರುಗಳಾದ ದಲೈಲಾಮಾ ಅವರು ಗೆಂಡುನ್ ಚೋಯ್ಕಿ ಅವರನ್ನು 11ನೇ ಪಂಚೆನ್ ಲಾಮಾರನ್ನಾಗಿ ಗುರುತಿಸಿದ್ದರು. ಆ ಬಳಿಕ 7ನೇ ವಯಸ್ಸಿನಲ್ಲಿ ಕುಟುಂಬ ಸಮೇತ ಅವರನ್ನು ಚೀನಾ ಸರ್ಕಾರ ಅಪಹರಿಸಿತ್ತು. ಆ ಬಳಿಕ ಅವರ ಬಗ್ಗೆ ಸುಳಿವು ನೀಡಿಲ್ಲ' ಎಂದು ಆರೋಪಿಸಿದರು. 'ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಮಧ್ಯಸ್ಥಿಕೆ ನಡೆದರೂ, ಸರ್ಕಾರ ಮಾಹಿತಿ ನೀಡುತ್ತಿಲ್ಲ. ಅವರು ಬದುಕಿದ್ದರೆ 39 ವರ್ಷ ಆಗಿರುತ್ತದೆ. ಕಳೆದ 30 ವರ್ಷಗಳಿಂದ ಗೃಹಬಂಧಿಯಾಗಿದ್ದಾರೆ. ಬೌದ್ಧ ಧರ್ಮದ ಧಾರ್ಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸಮುದಾಯಕ್ಕಿರುವ ಸಂಶಯಗಳನ್ನು ಚೀನಾ ಬಗೆಹರಿಸಬೇಕು. ಅವರನ್ನು ಕೂಡಲೆ ಬಿಡುಗಡೆಗೊಳಿಸಿ ಸಹಜ ಜೀವನಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಆಗ್ರಹಿಸಿದರು.

ಇದರೊಂದಿಗೆ ಇನ್ನಿತರೆ ಟಿಬೆಟನ್ನರನ್ನೂ ಇದೇ ರೀತಿಯ ವ್ಯವಸ್ಥೆಯಲ್ಲಿ ಇರಿಸಲಾಗಿದೆ. ಈ ಬಗ್ಗೆಯೂ ಅನೇಕ ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಅವರನ್ನೂ ಬಿಡುಗಡೆ ಮಾಡಬೇಕು. ಬದುಕುವ ಸ್ವಾತಂತ್ರ್ಯವನ್ನು ನೀಡಬೇಕು. ದಲೈಲಾಮಾರ ಮಧ್ಯಸ್ಥಿಕೆ ಹಾಗೂ ಮಾತುಕತೆಗೆ ಅವಕಾಶ ಕೊಡುವ ಮೂಲಕ ಟಿಬೆಟ್‌ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಪ್ಪಿಕೊಳ್ಳಬೇಕು' ಎಂದು ಒತ್ತಾಯಿಸಿದರು. ಬೈಲಕುಪ್ಪೆ ಯುವ ಕಾಂಗ್ರೆಸ್‌ನ ತ್ಸೆರಿಂಗ್ ಲಾಕ್‌ಯಾಪ್ ಜಾನ್‌ಹೀಲ್, ಮಹಿಳಾ ಸಂಘದ ಚೆಮಿ ಲಾವೊ, ಕೊಳ್ಳೇಗಾಲ ಕ್ಯಾಂಪ್‌ನ ತ್ಸೆರಿಂಗ್ ದೋರ್ಜೆ ಚುಂಗ್, ತ್ಸೆರಿಂಗ್ ಚೊಡೊನ್, ಹುಣಸೂರಿನ ತಮ್‌ಡಿನ್ ತ್ಸೆವಾಂಗ್ ಭಾಗವಹಿಸಿದ್ದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹುಟ್ಟುಹಬ್ಬ ಸಂಬಂಧ ಇಂದು ಸೇವಾ ಕಾರ್ಯ



ಮೈಸೂರು: ಎಚ್.ಡಿ.ದೇವೇಗೌಡ ಅಭಿಮಾನಿ ಬಳಗ ಹಾಗೂ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗ ವತಿಯಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಮೇ 18ರಂದು ಸಂಜೆ 6 ಗಂಟೆಗೆ ಅರವಿಂದನಗರದಲ್ಲಿರುವ ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರಿಗೆ ಹಣ್ಣು ಹಂಪಲು, ಸೀರೆ, ಪಂಚೆ ವಿತರಿಸಲು ಉದ್ದೇಶಿಸಲಾಗಿದೆ. ಕಾರ್ಯಕ್ರಮದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ನಾಗರಾಜ, ಜೆಡಿಎಸ್ ನಗರ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವೈ.ಡಿ.ರಾಜಣ್ಣ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜೆಡಿಎಸ್ ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜನ ಕೇಂದ್ರಿತ ಅಭಿವೃದ್ಧಿಯಿಂದ ಉತ್ತಮ ಸಮಾಜ ನಿರ್ಮಾಣ

ಚಾ.ನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಮತ


ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಜೀವನೋತ್ಸಾಹ ಶಿಬಿರವನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಉದ್ಘಾಟಿಸಿದರು.

ಮೈಸೂರು, ಮೇ 17– ಜನ ಕೇಂದ್ರಿತ ಅಭಿವೃದ್ಧಿ ಮುಖ್ಯವಾದುದು ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯಪಟ್ಟರು.

ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಜೀವನೋತ್ಸಾಹ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಅಭಿವೃದ್ಧಿಯುಗವಾಗಿದ್ದು, ಜನ ಕೇಂದ್ರಿತ ಅಭಿವೃದ್ಧಿಯಿಂದ ಉತ್ತಮ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ. ಜನರು ಸಮಾಜದಲ್ಲಿ ಘನತೆ ಮತ್ತು ಸ್ವಾಭಿಮಾನದಿಂದ ಬದುಕಬೇಕು ಎನ್ನುವ ಆಶಯದಿಂದ ಪೂಜ್ಯರು ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಶಿಬಿರವು ಮನಸ್ಸನ್ನು ಶಾಂತವಾಗಿರಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಊಟಿಯ ಕರ್ನಾಟಕ ಸಿರಿ ತೋಟಗಾರಿಕೆ ಉದ್ಯಾನವನದ ಸಹಾಯಕ ನಿರ್ದೇಶಕ ಬಿ.ಕೆ.ಕೃಷ್ಣಮೂರ್ತಿ ಮಾತನಾಡಿ, ಮಾನವ ಜನ್ಮ ಬಹಳ ದೊಡ್ಡದು. ಇದು ಉತ್ಸಾಹದಿಂದ ಕೂಡಿರಬೇಕು. ನಮ್ಮ ಪರಿಸರ ಮತ್ತು ಮನಸ್ಥಿತಿಯನ್ನು ಹಾಳುಮಾಡಿಕೊಳ್ಳುತ್ತಿದ್ದೇವೆ. ಇಂದು ನಮ್ಮ ಜೀವನ ಪದ್ಧತಿ ಹಾಗೂ ಆಹಾರ ಸಂಸ್ಕೃತಿ ಬದಲಾವಣೆಯಾಗಿದೆ, ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮನೆಗಳಲ್ಲಿ ಜೊಮೊಟೊ ಸಂಸ್ಕೃತಿ ಬೆಳೆಯುತ್ತಿರುವುದು ಖೇದಕರ ಸಂಗತಿ. ಮನೆಯ ಆಹಾರ ಮತ್ತು ಪ್ರಕೃತಿಯ ಸಾಂಗತ್ಯದಿಂದ ಉತ್ತಮ ಆರೋಗ್ಯ ಹಾಗೂ ನೆಮ್ಮದಿ ಕಾಣಬಹುದು ಎಂದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಕೆ.ಅನಂತರಾಮು, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಾ.ಡಿ.ವಿ.ಗುರುಪ್ರಸಾದ್ ಮಾತನಾಡಿದರು. ಶಿಬಿರದಲ್ಲಿ ಮೈಸೂರು, ಬೆಂಗಳೂರು, ಚಾಮರಾಜ ನಗರ, ತುಮಕೂರು, ಶಿವಮೊಗ್ಗ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಗುಲ್ಬರ್ಗ, ಬೀದರ್, ವಿಜಯಪುರ ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಗಳಿಂದ 219 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

ನಿಧನ

ಡಾ.ಗೀತಾ ನಂದಕುಮಾರ್



ಮೈಸೂರು, ಮೇ 17–ಮೈಸೂರಿನ ಗೋಕುಲಂನಲ್ಲಿರುವ ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಗೀತಾ ನಂದಕುಮಾರ್ (63) ದೀರ್ಘಾವಧಿ ಕಾಯಿಲೆಯಿಂದ ಕೇರಳದ ಒಟ್ಟಾಪಲಂನಲ್ಲಿ ಶನಿವಾರ ನಿಧನರಾದರು. ಮೃತರು ಪತಿ ಎ.ನಂದಕುಮಾರ್, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಪಟ್ಟಾಂಬಿಯ ಪೂಮರಂನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಡಾ.ಗೀತಾ ನಂದಕುಮಾರ್ ಅವರ ನಿಧನಕ್ಕೆ ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಮತ್ತು ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಕೆ.ಎನ್.ಅನಂತಸ್ವಾಮಿ



ಭಾರತ ಸರ್ಕಾರದ ಸೆಂಟ್ರಲ್ ಎಕ್ಸೈಸ್ ಮತ್ತು ಕಸ್ಟಮ್ಸ್ ನಿವೃತ್ತ ಡೆಪ್ಯುಟಿ ಕಲೆಕ್ಟರ್ ಹಾಗೂ ಸರಸ್ವತಿಪುರಂ ನಿವಾಸಿ ಕೆ.ಎನ್.ಅನಂತಸ್ವಾಮಿ (94) ಮೇ 15ರಂದು ನಿಧನರಾದರು. ಶ್ರೀಯುತರು ಲೇಖಕರಾಗಿದ್ದು, ಸ್ವರ್ಣನಗರಿಯ ಸುವರ್ಣ ದಿನಗಳು, ಸುಳಿಯಿಂದ ಸುಳಿಗೆ, ಮಹಾಶ್ವೇತೆ ಮತ್ತು ಆಸೆಯ ಅಲೆಗಳು ಕಾದಂಬರಿಗಳನ್ನು ಬರೆದಿದ್ದಾರೆ. ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಂದೇ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಂದ್ರಂಡ ಕಿಶನ್



ಮೈಸೂರಿನ ಟಿ.ಕೆ. ಬಡಾವಣೆ ನಿವಾಸಿ ದಿವಂಗತ ಕೆ.ಎ. ಅಪ್ಪಚ್ಚು ಮತ್ತು ಗೌರಮ್ಮ (ಪೊನ್ನಚಂಡ) ಅವರ ಪುತ್ರ ಕುಂದ್ರಂಡ ಕಿಶನ್ (51) ಶುಕ್ರವಾರ ಸಂಜೆ ನಿಧನರಾದರು. ಮೃತರು ಸಹೋದರ ಕಿರಣ್, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೂಟಗಳ್ಳಿಯ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಟ್ಟೀರ ತಂಗಮ್ಮ (ಪಾಪು)



ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಇಟ್ಟೀರ ತಂಗಮ್ಮ (ಪಾಪು) ಅವರು ಇಂದು ನಿಧನರಾದರು. ಅವರಿಗೆ 98 ವರ್ಷ ವಯಸ್ಸಾಗಿತ್ತು. ಮೃತರು ದಿವಂಗತ ಇಟ್ಟೀರ ಅಚ್ಚಪ್ಪ ಅವರ ಹಿರಿಯ ಪುತ್ರಿ, ದಿ॥ ರಂಜನ್, ದಿ॥ ಅಯ್ಯಪ್ಪ, ಸರೋಜ ನಂಜಪ್ಪ, ಬೊಳ್ಳಮ್ಮ ದೇವಯ್ಯ ಅವರ ಸಹೋದರಿಯಾಗಿರುವ ತಂಗಮ್ಮ ಅಂತ್ಯಕ್ರಿಯೆ ನಾಳೆ (ಮೇ 18) ಬೆಳಗ್ಗೆ 11 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಓ.ಕೆ. ನಾಗೇಂದ್ರ



ಕೊಳ್ಳೇಗಾಲ ಪಟ್ಟಣದ ಓಕೆ ಫರ್ನೀಚರ್ಸ್ ಮಾಲೀಕರಾದ ಓ.ಕೆ.ನಾಗೇಂದ್ರ (52) ಅವರು ಶನಿವಾರ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನಿಧನರಾದರು. ಅವಿವಾಹಿತರಾದ ಅವರು ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ಕೊಳ್ಳೇಗಾಲದ ಕಾವೇರಿ ನದಿ ತೀರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೊಹಮ್ಮದ್ ಝುಲ್ಫಿಕರ್



ಮೈಸೂರಿನ ರಾಜೀವ್‌ನಗರ ನಿವಾಸಿ ಹಾಗೂ ಸಿವಿಲ್ ಕಂಟ್ರಾಕ್ಟರ್ ಮೊಹಮ್ಮದ್ ಜುಲ್ಫಿಕರ್ (50) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ಸ್ಮಶಾನ ಗೇಟ್ ನಂ.6ರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುರುದತ್ತ ಪ್ರಭು



ಮೈಸೂರಿನ ಶಿವರಾಂಪೇಟೆ ನಿವಾಸಿ ಗುರುದತ್ತ ಪ್ರಭು(49) ಅವರು ಶನಿವಾರ ಮುಂಜಾನೆ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮೈಸೂರಲ್ಲಿ ಸಿಲ್ಕ್ ಇಂಡಿಯಾ ಮೇಳಕ್ಕೆ ಚಾಲನೆ

17 ದಿನಗಳವರೆಗೆ ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಪ್ರದರ್ಶನ, ಮಾರಾಟ


ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ, ಮಾರಾಟ ಸಿಲ್ಕ್ ಇಂಡಿಯಾ–2025 ಮೇಳಕ್ಕೆ ನಟಿ ರಿಷಾಗೌಡ ಚಾಲನೆ ನೀಡಿದರು.

ಮೈಸೂರು, ಮೇ17(ಜಿಎ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಅಭಿವೃದ್ಧಿ ಸಂಸ್ಥೆ ವತಿಯಿಂದ ಆಯೋಜಿಸಿರುವ 17 ದಿನಗಳ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಸಿಲ್ಕ್ ಇಂಡಿಯ–2025 ಮೇಳಕ್ಕೆ ನಟಿ ರಿಷಾ ಗೌಡ ಚಾಲನೆ ನೀಡಿದರು.

ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಮೈಸೂರು ಜನತೆ ಮುಂದೆ ನಿತ್ಯ ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಪ್ರದರ್ಶಿಸಿ ಮಾರಾಟ ಮಾಡುವರು. ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್, ಮದುವೆ ಸೀರೆಗಳು, ರಾ ಸಿಲ್ಕ್, ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್‌ಚೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್ಸ್‌ಗಳು, ಸೀರೆಗಳು, ಬಾಗಲ್‌ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್‌ಬಾರಿ ಸಿಲ್ಕ್, ಕಲ್ಕೊತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿದೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್‌ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳನ್ನು ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿ ಮಾರಾಟ ಮಾಡುವರು. ಈ ವಸ್ತುಗಳನ್ನು ಉತ್ಪಾದಕರೆ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವುದರಿಂದ ವಸ್ತುಗಳು ನ್ಯಾಯಯುತ ಬೆಲೆಯಲ್ಲಿ ದೊರೆಯಲಿದೆ.

ಇಂದು ಕಣ್ಣಿನ ಉಚಿತ ತಪಾಸಣೆ

ಮೈಸೂರು, ಮೇ17(ಎಂಟಿವೈ)– ಮೈಸೂರಿನ ಜೆ.ಪಿ.ನಗರದಲ್ಲಿರುವ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಮೇ 18ರಂದು ಉಚಿತ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು ಸ್ನೇಹಜೀವಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚೆಲುವಯ್ಯ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ರೋಟರಿ ಜಯಪ್ರಕಾಶ ನಗರ, ಲಯನ್ಸ್ ಕ್ಲಬ್ ಆಫ್ ಈರೋಡ್ ಈಸ್ಟ್, ಜೆ.ಪಿ.ನಗರದ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಕ್ಲಬ್ ಜೆ.ಪಿ.ನಗರ, ಸ್ನೇಹನಿಧಿ ಪತ್ತಿನ ಸಹಕಾರ ಸಂಘ, ಅಷ್ಟೈಶ್ವರ್ಯ ಸಿದ್ಧಿ ವಿನಾಯಕ ದೇವಾಲಯ, ರೋಟರಿ ಕ್ಲಬ್ ಆಫ್ ಕೃಷ್ಣರಾಜ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಕಣ್ಣಿನ ತಪಾ ಸಣಾ ಹಾಗೂ ಚಿಕಿತ್ಸಾ ಶಿಬಿರವನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ ತಜ್ಞ ವೈದ್ಯರು ನಡೆಸಿಕೊಡಲಿದ್ದಾರೆ. ಶಿಬಿರಕ್ಕೆ ಸಂಪೂರ್ಣ ಸಹಕಾರ ನೀಡಿ, ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಲ್ಲಿ ಗೀಜು ಬರುವುದು, ಸಮೀಪ, ದೂರದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆಗಣ್ಣು, ರಾತ್ರಿ ಕುರುಡುತನದ ಸಮಸ್ಯೆಗಳಿಗೆ ತಪಾಸಣೆ ಮಾಡಿ ಚಿಕಿತ್ಸೆ ನೀಡಲಿದ್ದಾರೆ.

ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇದ್ದವರನ್ನು ಕೊಯಮತ್ತೂರಿನ ಅರವಿಂದ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿ, 3 ದಿನದ ಆರೈಕೆ ಬಳಿಕ ವಾಪಸ್ಸು ಕರೆದುಕೊಂಡು ಬರಲಿದ್ದಾರೆ. ಅಲ್ಲದೆ ಸಮೀಪ, ದೂರದೃಷ್ಟಿ ದೋಷವುಳ್ಳವರಿಗೆ ರೂ.300ರಿಂದ 400 ರೂ.ಗೆ ಉತ್ತಮ ದರ್ಜೆ ಕನ್ನಡಕ ವಿತರಿಸಲಾಗುತ್ತದೆ. ಅಗತ್ಯವುಳ್ಳವರು ಶಿಬಿರಕ್ಕೆ ಬಂದು ತಪಾಸಣೆ ಮಾಡಿಸಿಕೊಂಡು, ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಶಸ್ತ್ರಚಿಕಿತ್ಸೆಗೆ ಬರುವವರು ಆಧಾರ್ ಕಾರ್ಡ್ ಜೆರಾಕ್ಸ್, ಆರೋಗ್ಯವಂತರಾಗಿರುವ ದೃಢೀಕರಣ ಪತ್ರ ತರಬೇಕು. ಪ್ರತಿ ತಿಂಗಳು 3ನೇ ಭಾನುವಾರ ಉಚಿತವಾಗಿ ಕಣ್ಣಿನ ತಪಾಸಣಾ ಶಿಬಿರ ನಡೆಸುತ್ತಿದ್ದು, ಮಾಹಿತಿಗೆ ಮೊ. 9448413274, 8197072791 ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ರೋಟರಿ ಜಯಪ್ರಕಾಶ ನಗರ ಅಧ್ಯಕ್ಷ ರೋ. ಡಿ.ಕೃಷ್ಣೇಅರಸ್, ಕಾರ್ಯದರ್ಶಿ ಬಿ.ಎಂ.ನಾಗರಾಜ್, ಪ್ರಮೋದ ಚಂದರ್, ಸಿದ್ದಲಿಂಗಪ್ಪ ಇನ್ನಿತರರು ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 17–ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಅಂಕ ಪಟ್ಟಿ, ಜಾತಿ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಭಾವಚಿತ್ರವನ್ನು ಮೇ 21ರೊಳಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ 9886666787, 99018 02106

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.05.2025 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ ಮತ್ತು ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಘಟಕ :** ಸುಗಮ ಸಂಗೀತ ಕಲಿಕಾ ಶಿಬಿರ, ಸ್ಥಳ: ಶ್ರೀ ಅನಂತೇಶ್ವರ ಭವನ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ಬೆಳಗ್ಗೆ 10 ರಿಂದ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 6ಕ್ಕೆ ಮುಡಿ ಉತ್ಸವ, ಗರುಡೋತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ.

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ ಶ್ರೀ ಶಂಕರ ಮಠ :** 45ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ, ಬೆಳಗ್ಗೆ 7.30ಕ್ಕೆ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಏಕಾದಶವಾರ ರುದ್ರಾಭಿಷೇಕ, ರುಕಾದಶಿನಿ ಹೋಮ ಪ್ರಾರಂಭ, ಹೋಮದ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಸತ್ಯನಾರಾಯಣಸ್ವಾಮಿ ಸನ್ನಿಧಿಯಲ್ಲಿ ವಿಷ್ಣು ಸಹಸ್ರನಾಮದಿಂದ ದಶಸಹಸ್ರ (10000) ತುಳಸಿ ಅರ್ಚನೆ, ಪಾದುಕ ಪೂಜೆ, ಸಂಜೆ 7.30 ರಿಂದ ರುದ್ರ ಕ್ರಮಾರ್ಚನೆ, ವೇದಘೋಷ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ವಿದ್ವಾನ್ ಎಂ.ಜಿ. ರಂಗನಾಥ್, ವಿದ್ವಾನ್ ರತ್ನತೇಜ, ವಿದ್ವಾನ್ ರಾಜೇಶ್ ವೃಂದದವರಿಂದ ಸಂಗೀತ ಗಾಯನ, ಸ್ಥಳ: ಶೃಂಗೇರಿ ಶ್ರೀ ಶಂಕರಮಠ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಶ್ರೀ ಶಿರಡಿ ಸಾಯಿಬಾಬಾ ಉಪಾಸಕ ಗೋಪಾಲಸ್ವಾಮಿ, ಅಭಿನಂದನಾ ಭಾಷಣ : ಸಾಹಿತಿ ಮೋಹನ್ ವರ್ಣೇಕರ್, ಪುರಸ್ಕಾರ ಪ್ರದಾನ : ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಅತಿಥಿಗಳು : ಸಮಾಜ ಸೇವಕ ಶ್ರೀಕಂಠಮೂರ್ತಿ, ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಶ್ರೀ ಶಿರಡಿ ಸಾಯಿಬಾಬಾ ಮಂದಿರ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ದಿ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್ಸ್ :** 16ನೇ ವಾರ್ಷಿಕ ಬಹು ಜಿಲ್ಲಾ ಸಮಾವೇಶ 'ಸಪ್ತ ಸಂಪದ', ಮುಖ್ಯ ಅತಿಥಿಗಳು :ಅಂತರರಾಷ್ಟ್ರೀಯ ನಿರ್ದೇಶಕ ಲಯನ್ ಪಂಕಜ್ ಮೆಹ್ತಾ, ಮಾಜಿ ನಿರ್ದೇಶಕ ಲಯನ್ ಕೆ.ವಂಶಿಧರ್ ಬಾಬು, ಲಯನ್ ವಿ.ವಿ.ಕೃಷ್ಣ ರೆಡ್ಡಿ, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ, ಮುಕ್ತಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ರೆಕ್ಸ್ ಅವರ್ಸ್ ನಾಟಕ ಪ್ರದರ್ಶನ, ನಿರ್ದೇಶನ : ಶ್ರವಣ ಹೆಗ್ಗೋಡು, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ರೋಟರಿ ಜಯಪ್ರಕಾಶನಗರ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ :** ಕಣ್ಣಿನ ಉಚಿತ ತಪಾಸಣಾ ಶಿಬಿರ, ಸ್ಥಳ: ಸ್ಪೋರ್ಟ್ಸ್ ಕ್ಲಬ್ ಆವರಣ, ಜೆ.ಪಿ.ನಗರ, ಬೆಳಗ್ಗೆ 8 ರಿಂದ.

■ **ಚಾವಡಿ ಗೆಳೆಯರ ಬಳಗ:** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳು ಹೊರ ತರುತ್ತಿರುವ ಮೊಳಕೆ (ಕಥಾ ಸಂಕಲನ) ಮತ್ತು ಗರಿಕೆ (ಅಂಕಣ ಬರಹ ಸಂಕಲನ) ಬಿಡುಗಡೆ ಸಮಾರಂಭ, ಉಪಸ್ಥಿತರು: ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಮಹಾದೇವ, ಪ್ರೊ.ಪಂಡಿತಾರಾಧ್ಯ, ಪ್ರೊ. ತಳವಾರ, ಪ್ರೊ.ರಾಜೇಂದ್ರ, ಪ್ರೊ.ರಾಗೌ, ಅಧ್ಯಕ್ಷತೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅತಿಥಿಗಳು : ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯಂ, ಸ್ಥಳ: ಬಿ.ವಿ.ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಜಯಂತ್ಯೋತ್ಸವ ಸಮಿತಿ :** ಡಾ. ಬಿ.ಆರ್. ಅಂಬೇಡ್ಕರ್‌ರವರ 134ನೇ ಜಯಂತ್ಯೋತ್ಸವ, ಸಾನ್ನಿಧ್ಯ : ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಪುಷ್ಪಾರ್ಚನೆ : ಸಂಸದ ಸುನೀಲ್ ಬೋಸ್, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ. ನರೇಂದ್ರ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ವಸತಿ ನಿಲಯದ ಆವರಣ, ಹುಣಸೂರು ರಸ್ತೆ, ಇಲವಾಲ, ಬೆಳಗ್ಗೆ 11ಕ್ಕೆ.

■ **ನಾದ ವಿದ್ಯಾಲಯ, ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡಾನ್ಸ್ ಮೈಸೂರು :** ವಿದ್ವಾನ್ ಎಂ.ಎಸ್. ನವೀನ್ ಅವರ ಶಿಷ್ಯೆ ಕುಮಾರಿ ಶ್ರೀಲಕ್ಷ್ಮಿ ಕೇಶವಮೂರ್ತಿ ಅವರ ಪ್ರಪ್ರಥಮ ಕರ್ನಾಟಕ ಶಾಸ್ತ್ರೀಯ ಸಂಗೀತ 'ಶ್ರೀ ನಾದ ಸಂಭ್ರಮ', ಮುಖ್ಯ ಅತಿಥಿಗಳು: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಕುಮಾರಿ ಸೂರ್ಯ ಗಾಯತ್ರಿ, ಮಣಿಪಾಲ್ ಆಸ್ಪತ್ರೆ ಮುಖ್ಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಉಪೇಂದ್ರ ಶಣೈ, ಫಿಯೋನಿಕ್ಸ್ ಅಂತರಾಷ್ಟ್ರೀಯ ಅಕಾಡೆಮಿ ಸಂಸ್ಥಾಪಕ ಕಾರ್ಯದರ್ಶಿ ಕುಮಾರಿ ತೇಜಸ್ವಿನಿ ಆಳ್ವಾರ್, ಕಾರ್ಯಕ್ರಮ ನಿರ್ದೇಶನ ಗುರು ವಿದ್ವಾನ್ ಎಂ.ಎಸ್.ನವೀನ್, ವಿದ್ವಾನ್ ಯಶಸ್ವಿ–ಪಿಟೀಲು, ವಿದ್ವಾನ್ ವಿಕ್ರಂ ಭಾರದ್ವಾಜ್– ಮೃದಂಗ, ವಿದ್ವಾನ್ ದಾಸಪ್ಪ–ತಬಲ, ವಿದ್ವಾನ್ ಪುರುಷೋತ್ತಮ್–ಕೀಬೋರ್ಡ್, ವಿದ್ವಾನ್ ಗುರುದತ್ತ–ರಿದಂ ಪ್ಯಾಡ್, ಸ್ಥಳ: ವೀಣೆ ಶೇಷಣ್ಣ ಭವನ, ಗಾನ ಭಾರತಿ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಪ್ರೊ.ಶ್ರೀಧರ್ ಹೆಗ್ಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಅಂಬಯ್ಯನುಲಿ ಮತ್ತು ಸಿ.ವಿಶ್ವನಾಥ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕ್ರಾನಿಕ್ ಕಿಡ್ನಿ ಡಿಸೀಸ್ ಸಿ.ಕೆ.ಡಿ ಕುರಿತು ಮೈಸೂರಿನ ನೆಫ್ರೋ ಯೂರಾಲಜಿ ಸಂಸ್ಥೆಯ ನೆಫ್ರಾಲಜಿ ವಿಭಾಗದ ಮುಖ್ಯಸ್ಥ ಡಾ.ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ, 10.30 KRISH -TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಮೈಸೂರಿನ ಶ್ರೀ ನಗರದ ರಾಷ್ಟ್ರೋತ್ಥಾನ ಶಾಲೆಯ ಮಕ್ಕಳಿಂದ ವೈವಿಧ್ಯ, 11.15 ಮಿಶ್ರಮಾಧುರ್ಯ **ಮಧ್ಯಾಹ್ನ:** 12.00 ವನಿತಾ ವಿಹಾರ–ಗ್ರಾಮೀಣ ಮಹಿಳೆಯರ ಹಣಕಾಸಿನ ನಿರ್ವಹಣೆ ಈ ಕುರಿತು ಉಪನ್ಯಾಸಕರಾದ ಡಾ.ಕಿರಣ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಚಂದು, 12.35 ದೇವರನಾಮ–ಎಂ.ಎ.ಶೋಭ, 12.45 ಜನಪದ ಸಂಗೀತ: ಟಿ.ನರಸೀಪುರ ತಾಲೂಕು ಬೆನಕನಹಳ್ಳಿಯ ಗಿರಿಜಮ್ಮ ಮತ್ತು ಸಂಗಡಿಗರಿಂದ ಸರಸ್ವತಿ ಹಾಡು, 1.00 ಪ್ರಗತಿಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ಟಿ.ಎನ್.ಅಶ್ವಿನಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಕಲಾವಿದ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ನಕ್ಷತ್ರ ಲೋಕ –ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಹೆಸರಾಂತ ಚಲನಚಿತ್ರ ಸಂಗೀತ ನಿರ್ದೇಶಕ ಮನೋಮೂರ್ತಿ ಅವರೊಂದಿಗೆ ಸಂವಾದ. ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಶ್ರೀಮಾನ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ –ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪುರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ : ಜಿ.ಕೆ.ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು, 9.30 ರಾಷ್ಟ್ರೀಯ ನಾಟಕ – ಹಾಗಾದರೆ, ಲೇಖಕರು–ಇಂದ್ರಜೋಶಿ, ಕನ್ನಡಕ್ಕೆ–ಅಚ್ಯುತ ಸಂಕೇತಿ, ನಿರ್ಮಾಣ–ಕೆ.ಎಲ್ ರಾಜೇಶ್ವರಿ, 10.00 ರವಿವಾರದ ಅಖಿಲಭಾರತ ಸಂಗೀತ ಸಭಾ ಮೇಲುಕೋಟೆ ಎಸ್.ಆನಂದ್ –ನಾಗಸ್ವರ ವಾದನ, ಮೈಸೂರು ಎಸ್.ಪುಟ್ಟರಾಜು–ವಿಶೇಷ ಡೋಲು

ವೇಶ್ಯಾವಾಟಿಕೆ ನಡೆಯುತ್ತಿದ್ದ ಸ್ಪಾ ಮೇಲೆ ದಾಳಿ: ಮೂವರು ಪೊಲೀಸ್ ವಶಕ್ಕೆ



ಮಂಡ್ಯ, ಮೇ 17– ವೇಶ್ಯಾವಾಟಿಕೆ ನಡೆಯುತ್ತಿದ್ದ ಸ್ಪಾ ಮೇಲೆ ದಾಳಿ ನಡೆಸಿ, ಮಹಿಳೆ ಸೇರಿ ಮೂವರನ್ನು ವಶಕ್ಕೆ ಪಡೆಯಲಾಗಿದೆ.

ಮಂಡ್ಯ ನಗರದ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಕ್ಲೌಡ್ 11 ಸಲೂನ್ ಅಂಡ್ ಸ್ಪಾ ಮಳಿಗೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಮೈಸೂರಿನ ಒಡನಾಡಿ ಸಂಸ್ಥೆ ಹಾಗೂ ಪೊಲೀಸರ ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ಜಾಲಕ್ಕೆ ಸಿಲುಕಿದ್ದ ನಾಲ್ವರು ಮಹಿಳೆಯರನ್ನು ರಕ್ಷಿಸಿ, ದಂಧೆ ನಡೆಸುತ್ತಿದ್ದ ಮಹಿಳೆ, ಪಿಂಪ್ ಹಾಗೂ ಗ್ರಾಹಕ ಸೇರಿ ಮೂವರನ್ನು ವಶಕ್ಕೆ ಪಡೆಯಲಾಗಿದೆ.

ಪ್ರತಿಷ್ಠಿತ ಕಾಲೇಜಿನ ಪಕ್ಕದಲ್ಲೇ ವೇಶ್ಯಾವಾಟಿಕೆ ನಡೆಸುತ್ತಿರುವುದು ನಾಗರಿಕರಲ್ಲಿ ಆತಂಕ ಹುಟ್ಟಿಸಿದೆ. ದೂರದೂರುಗಳಿಂದ ಬರುವಂತಹ ವಿದ್ಯಾರ್ಥಿನಿಯರಿಗೆ ಆಮಿಷವೊಡ್ಡಿ ಈ ಜಾಲಕ್ಕೆ ಸಿಲುಕಿಸಬಹುದು. ಅಲ್ಲದೆ ವಿದ್ಯಾರ್ಥಿಗಳೂ ಕೆಟ್ಟ ಹಾದಿ ತುಳಿಯಬಹುದು ಎಂಬ ಭೀತಿ ಪೋಷಕರಲ್ಲಿದೆ.

ಸಲೂನ್ ಮಾಲಿಕಿ ರಾಣಿ ಹಲವು ವರ್ಷಗಳಿಂದ ಈ ದಂಧೆ ನಡೆಸುತ್ತಿದ್ದು, ಈ ಹಿಂದೆಯೂ ಪೊಲೀಸರು ದಾಳಿ ನಡೆಸಿದ್ದರು. ಆಕೆ ವಿರುದ್ಧ ಮಂಡ್ಯ ಹಾಗೂ ಮೈಸೂರಿನಲ್ಲಿ ಪ್ರಕರಣ ದಾಖಲಾಗಿವೆ. ಆದರೆ ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಕರಾಳ ದಂಧೆ ಮುಂದುವರೆಸಿದ್ದಾಳೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಈ ಸಲೂನ್ ಅನ್ನು ಸೀಜ್ ಮಾಡಲಾಗಿತ್ತು. ಹಾಗಿದ್ದರೂ ಇಲ್ಲಿ ಸಲೂನ್ ನಡೆಸಲು ಮತ್ತೆ ಅವಕಾಶ ನೀಡಿರುವ ಕಟ್ಟಡದ ಮಾಲೀಕರ ವಿರುದ್ಧವೂ ಪೊಲೀಸರು ಕ್ರಮ ಕೈಗೊಳ್ಳಬೇಕು ಎಂದು ಒಡನಾಡಿ ಸಂಸ್ಥೆ ಪ್ರತಿನಿಧಿಗಳು ಆಗ್ರಹಿಸಿದ್ದಾರೆ.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶುರಾಮ್, ವೃತ್ತ ನಿರೀಕ್ಷಕ ನವೀನ್ ಸುಪ್ಪೇಕರ್ ನೇತೃತ್ವದಲ್ಲಿ ದಾಳಿ ನಡೆಲಾಗಿದ್ದು, ಈ ಸಂಬಂಧ ಮಂಡ್ಯದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯ ಬ್ರಾಹ್ಮಣ ಮಹಾಸಭಾಗೆ ನೇಮಕ




ಎಸ್.ರಘುನಾಥ್

ಮೈಸೂರು, ಮೇ 17– ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಹಾಗೂ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕ ಮತ್ತು ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕ ಎಸ್.ರಾಜಕುಮಾರ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ ಎಂದು ಮಹಾಸಭಾದ ರಾಜ್ಯಾಧ್ಯಕ್ಷ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE MYSURU
Airport drop or Pick up
9611177599

WE'RE HIRING!
Join the Team at Kamakshi Hospitals, Mysore
Kamakshi HOSPITALS
Open Positions:
- Cath Lab Operating Technicians
- Staff Nurses trained in Cath Lab
- CCU Nurses (Cardiac Care Unit)
- Duty Doctors(MBBS)
- OT Managers
APPLY NOW
Unit-01 Kuvempunagar, Mysore
mt@kamakshihospital.org
9482805981/ 9611075992



NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

NISARGA PARADISE
DEVELOPED PLOTS
FULLY DEVELOPED
READY FOR REGISTRATION
HURRY!! FEW LEFT
HYLAND PROPERTIES
Hunsur-Mysore Highway, Mysuru
BOOKING OPENS
30X40 I 30X50
40X60
BANK LOAN AVAILABLE
DTCP APPROVED
LIC HFL HDFC BANK ICICI Bank
88840 71010
90713 86615

WANTED
For a LUXURY RESORT
OM & Digital Mkt 01 (M/F)
Reservation & FO Associate 04 (M/F), F&B Captain 03,
South & North Indian Cooks,
Stewards 05, H/K Boys 04.
nijagunaresorts@gmail.com
Mob: 9902984674, 9902984872

HOUSE FOR RENT & SITE FOR SALE
30X40, G/F 2 B.H.K.
Kuvempunagara Bus Depot
Site 40x60 E/Face
Akasha Loyout, Bannur Road
Near Vidya Vikas College.
Contact:
9611605673 / 6364116562

ಆರ್‌ಸಿಬಿ–ಕೆಕೆಆರ್ ಪಂದ್ಯ ರದ್ದು

ಐಪಿಎಲ್‌ನಿಂದ ಹೊರಬಿದ್ದ ಕೊಲ್ಕತ್ತ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಶನಿವಾರ ನಡೆಯಬೇಕಿದ್ದ ಐಪಿಎಲ್ ಪಂದ್ಯ ಮಳೆಯಿಂದಾಗಿ ರದ್ದಾಯಿತು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಿಗದಿಯಾಗಿತ್ತು. ಆದರೆ ಸತತವಾಗಿ ಸುರಿದ ಮಳೆಯಿಂದಾಗಿ ಪಂದ್ಯಕ್ಕೆ ಅಡಚಣೆಯಾಯಿತು. ಅಂತಿಮವಾಗಿ ಮ್ಯಾಚ್ ಕೈಬಿಡಲಾಯಿತು. ಇದರಿಂದಾಗಿ ಇತ್ತಂಡಗಳಿಗೂ ತಲಾ ಒಂದು ಅಂಕವನ್ನು ಹಂಚಿಕೊಳ್ಳಲಾಯಿತು. ಇದರೊಂದಿಗೆ 12 ಪಂದ್ಯಗಳಲ್ಲಿ 17 ಅಂಕ ಸಂಪಾದಿಸಿರುವ ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದು, ಪ್ಲೇ–ಆಫ್ ಸನಿಹದಲ್ಲಿದೆ.

ಮತ್ತೊಂದೆಡೆ 13 ಪಂದ್ಯಗಳಲ್ಲಿ 12 ಅಂಕ ಮಾತ್ರ ಗಳಿಸಿರುವ ಕೋಲ್ಕತ್ತ ನೈಟ್ ರೈಡರ್ಸ್, ಪ್ಲೇ–ಆಫ್ ರೇಸ್‌ನಿಂದ ಹೊರಬಿದ್ದಿದೆ. ಸದ್ಯ ಆರನೇ ಸ್ಥಾನದಲ್ಲಿರುವ ಕೆಕೆಆರ್ ಬಳಿ ಇನ್ನೊಂದು ಪಂದ್ಯ ಮಾತ್ರ ಬಾಕಿಯಿದೆ. ಭಾರತ ಹಾಗೂ ಪಾಕಿಸ್ತಾನ ನಡುವಣ ಸಂಘರ್ಷದಿಂದಾಗಿ ಐಪಿಎಲ್ ಒಂದು ವಾರ ಕಾಲ ರದ್ದುಗೊಂಡಿತ್ತು. ಇದೀಗ ಪುನಾರರಂಭದ ಆರ್‌ಸಿಬಿ ಮತ್ತು ಕೆಕೆಆರ್ ನಡುವಿನ ಪಂದ್ಯದಲ್ಲಿ ಒಂದು ಎಸೆತವನ್ನು ಕಾಣದೇ ಅಭಿಮಾನಿಗಳು ನಿರಾಸೆಗೊಂಡಿದ್ದಾರೆ.

ಪಾರ್ಟ್ ಟೈಂ ಜಾಬ್ ಆಸೆ ತೋರಿ ಮಹಿಳೆಗೆ ವಂಚನೆ; ಆರೋಪಿಗೆ ಜಾಮೀನು ನಿರಾಕರಣೆ

ಮೈಸೂರು, ಮೇ 17– ಮೈಸೂರು ಜಿಲ್ಲಾ ಪೊಲೀಸರು ಬಂಧಿಸಿರುವ ಸೈಬರ್ ವಂಚಕನಿಗೆ ಮೈಸೂರು ನ್ಯಾಯಾಲಯ ಜಾಮೀನು ನಿರಾಕರಿಸಿದೆ. ಪಾರ್ಟ್ ಟೈಂ ಜಾಬ್ ನೆಪದಲ್ಲಿ ಮಹಿಳೆಯೊಬ್ಬರಿಗೆ ಸುಮಾರು 6.10 ಲಕ್ಷ ರೂ. ವಂಚಿಸಿದ್ದ ಮಧ್ಯಪ್ರದೇಶ ಮೂಲದ ಹಿಮಾಂಕು ಚೌರಾಸಿಯಾ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ.

ಮೈಸೂರಿನ ಮಹಿಳೆಯೊಬ್ಬರ ವಾಟ್ಸಾಪ್‌ಗೆ 2024ರ ಜುಲೈ 24ರಂದು ಅಪರಿಚಿತ ವ್ಯಕ್ತಿ ಸಂದೇಶ ಕಳುಹಿಸಿ, ಪಾರ್ಟ್ ಟೈಂ ಜಾಬ್ ಬಗ್ಗೆ ತಿಳಿಸಿದ್ದ. ನೀವು 6 ಸಾವಿರ ರೂ. ಹೂಡಿಕೆ ಮಾಡಿದರೆ ಒಂದು ದಿನದ ನಂತರ ದುಪ್ಪಟ್ಟು ನೀಡುವುದಾಗಿ ನಂಬಿಸಿದ್ದ. ಅದನ್ನು ನಂಬಿದ ಮಹಿಳೆ 6 ಸಾವಿರ ಹೂಡಿಕೆ ಮಾಡಿದ್ದರು. ಮರುದಿನ ದುಪ್ಪಟ್ಟು ಹಣ ವರ್ಗಾವಣೆ ಮಾಡಿರುವುದಾಗಿ ನಂಬಿಸಿದ ವಂಚಕ, ಹೆಚ್ಚು ಹಣ ಹೂಡಿಕೆ ಮಾಡಿದರೆ ಸಾಕಷ್ಟು ಲಾಭ ಸಿಗಲಿದೆ ಎಂದು ತಿಳಿಸಿದ್ದ. ಬಳಿಕ ಹಂತ ಹಂತವಾಗಿ ಫೋನ್‌ಪೇ, ಗೂಗಲ್ ಪೇ ಮೂಲಕ 6,10,831 ರೂ. ಪಡೆದು ವಂಚಿಸಿದ್ದ.

ಈ ಬಗ್ಗೆ ಮಹಿಳೆ ನೀಡಿದ ದೂರಿನನ್ವಯ ಜಿಲ್ಲಾ ಸೆನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಈ ಸಂಬಂಧ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ವಿಚಾರಣೆ ಮುಂದುವರೆಸಿ, ಆರೋಪಿ ಮಧ್ಯಪ್ರದೇಶದ ಹಿಮಾಂಕು ಚೌರಾಸಿಯಾನನ್ನು ಬಂಧಿಸಿ, ಕರೆತಂದಿದ್ದರು. ಆತನನ್ನು ಕಳೆದ ಏ.29ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ವರದಿ ಸಲ್ಲಿಸಿದ್ದರು. ಬಳಿಕ ಆರೋಪಿ ಪರವಾಗಿ ವಕೀಲರೊಬ್ಬರು ಜಾಮೀನು ಅರ್ಜಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ಕೆ.ಪ್ರಕಾಶ ಜಾಮೀನು ಅರ್ಜಿಗೆ ತಕರಾರು ಸಲ್ಲಿಸಿ, ಆರೋಪಿಯನ್ನು ಬಿಡುಗಡೆ ಮಾಡಬಾರದೆಂದು ವಾದ ಮಂಡಿಸಿದ್ದರು. ವಾದ–ಪ್ರತಿವಾದ ಆಲಿಸಿದ ಮೈಸೂರಿನ ಪ್ರಧಾನ ಹಿರಿಯ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ ಅವರು ಆರೋಪಿಯ ಜಾಮೀನು ಅರ್ಜಿಯನ್ನು ವಜಾಗೊಳಿಸಿ ಇಂದು ಆದೇಶಿಸಿದ್ದಾರೆ.

'ಬ್ರಹ್ಮೋಸ್'ಗೆ 18 ರಾಷ್ಟ್ರಗಳಿಂದ ಬೇಡಿಕೆ

ನವದೆಹಲಿ, ಮೇ 17– 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯಲ್ಲಿ ಪರಾಕ್ರಮ ಮೆರೆದ ಬ್ರಹ್ಮೋಸ್‌ಸೂಪರ್ ಸಾನಿಕ್ ಕ್ಷಿಪಣಿ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಭಾರತದ ಕ್ಷಿಪಣಿ ಖರೀದಿಗೆ ಜಗತ್ತಿನ ಹಲವು ರಾಷ್ಟ್ರಗಳು ಮುಂದಾಗಿವೆ. ಕಾರ್ಯಾಚರಣೆಯ ಸಮಯದಲ್ಲಿ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಯನ್ನು ಬಳಸಿದ್ದಾರೆಂದು ವರದಿಯಾಗಿದೆ. ಇದು ಈಗ ಜಾಗತಿಕ ಗಮನ ಸೆಳೆದಿದೆ. ಏಷ್ಯಾ, ಮಧ್ಯಪ್ರಾಚ್ಯ ಮತ್ತು ಲ್ಯಾಟಿನ್ ಅಮೆರಿಕದಾದ್ಯಂತ ರಾಷ್ಟ್ರಗಳು ಪ್ರಬಲ ಕ್ಷಿಪಣಿಯನ್ನು ಖರೀದಿಸಲು ಆಸಕ್ತಿ ತೋರಿವೆ.

ಯಾವ್ಯಾವ ರಾಷ್ಟ್ರಗಳಿಂದ ಬೇಡಿಕೆ: ಈಜಿಪ್ಟ್, ಇಂಡೋನೇಷ್ಯಾ, ವಿಯೆಟ್ನಾಂ, ಮಲೇಷ್ಯಾ, ಚಿಲಿ, ಅರ್ಜೆಂಟೀನಾ, ವೆನೆಜುವೆಲಾ, ಫಿಲಿಪೈನ್ಸ್, ಥೈಲ್ಯಾಂಡ್, ಸಿಂಗಾಪುರ, ಬ್ರುನಿ ಬ್ರೆಜಿಲ್, ಸೌದಿ ಅರೇಬಿಯಾ, ಯುಎಇ, ಕತಾರ್, ಒಮನ್ ಸೇರಿದಂತೆ 18 ದೇಶಗಳಿಂದ ಬ್ರಹ್ಮೋಸ್‌ಗೆ ಬೇಡಿಕೆ ಬಂದಿದೆ ಎನ್ನಲಾಗಿದೆ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಾನೇನಾದ್ರೂ ನಿಮ್ಮನ್ನು ಬಿಟ್ಟು ಹೋದ್ರೆ ಏನ್ ಮಾಡ್ತೀರಾ?
ಗಂಡ : ಹಾಗೇನಾದ್ರೂ ಆದ್ರೆ ಪೇಪರ್‌ನಲ್ಲಿ, ಟಿವಿನಲ್ಲಿ ಹಾಕಿಸುತ್ತೇನೆ.
ಹೆಂಡತಿ : ಏನಂತ ಹಾಕಿಸ್ತೀರಾ?
ಗಂಡ : ನೀನು ಎಲ್ಲಿಂಯೇ ಇರು, ಹೇಗೆ ಇರು, ಅಲ್ಲಿಯೇ ಇರು ಅಂತ!!

ಮೈಸೂರು ಮಿತ್ರ
ಭಾನುವಾರ, 18 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಒಬ್ಬ ಯಶಸ್ವಿ ವ್ಯಕ್ತಿಯ ಹಿಂದೆ ಒಂದು ನೋವು ತುಂಬಿದ ಕಥೆ ಇರುತ್ತದೆ. ಹಾಗೆಯೇ ಆ ನೋವಿನ ಕಥೆಗೂ ಯಶಸ್ವಿ ಅಂತ್ಯವಿರುತ್ತದೆ. ಆದ್ದರಿಂದ ನೋವನ್ನು ಕೂಡ ಸ್ವೀಕರಿಸಿ ಯಶಸ್ಸಿನ ಕಡೆ ಹೆಜ್ಜೆ ಇಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದುಣ್ಣುವ ಕೆಚ್ಚಲನ್ನು ಕೊರೆದುಂಡ ಹಾಗೆ.

ನಿಮ್ಮ ಪತ್ರಗಳು

■ ವಾಹನ ಸಂಚಾರ ದಟ್ಟಣೆ ನಿವಾರಿಸಿ

ಮಾನ್ಯರೆ,

ಮೈಸೂರಿನ ವಿಶ್ವೇಶ್ವರನಗರದ ರಾಜರಾಜೇಶ್ವರಿ ದೇವಸ್ಥಾನದ (ಜಾಕಿ ಕಾರ್ಖಾನೆ ರಸ್ತೆ) ಮುಂಭಾಗದ ರಸ್ತೆಯ ಇಕ್ಕೆಲಗಳಲ್ಲಿ ಹಲವಾರು ಅಪಾರ್ಟ್‌ಮೆಂಟ್‌ಗಳಿದ್ದು ಇಲ್ಲಿ ಹೆಚ್ಚಾಗಿ ಹಿರಿಯ ನಾಗರಿಕರು ವಾಸಿಸುತ್ತಿದ್ದಾರೆ. ಈ ರಸ್ತೆಯು ಅತ್ಯಂತ ಕಿರಿದಾಗಿದ್ದು ಇಲ್ಲಿ ಕಾಲೇಜ್, ಸ್ಕೂಲ್ ಹಾಗೂ ಜಾಕಿ ಕಾರ್ಖಾನೆ ಇದ್ದು ಯಾವಾಗಲೂ ವಾಹನ ಸಂಚಾರ ದಟ್ಟಣೆಯಿಂದ ಕೂಡಿರುತ್ತದೆ. ಕಾಲೇಜ್ ಹುಡುಗರು ಹಾಗೂ ಕಾರ್ಖಾನೆಯ ಕೆಲಸಗಾರರು ತುಂಬಾ ವೇಗವಾಗಿ ದ್ವಿಚಕ್ರ ವಾಹನಗಳಲ್ಲಿ ಈ ಕಿರಿದಾದ ರಸ್ತೆಯಲ್ಲಿ ಸಂಚರಿಸುವ ಮೂಲಕ ಈ ಪ್ರದೇಶದ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಜನರಿಗೆ ಇನ್ನಿಲ್ಲದ ರೀತಿ ಭಯದ ವಾತಾವರಣ ಸೃಷ್ಟಿಸಿದ್ದಾರೆ. ಈ ರಸ್ತೆಯಲ್ಲಿ ಪಾದಚಾರಿಗಳಿಗೂ ಪ್ರತ್ಯೇಕ ವ್ಯವಸ್ಥೆ ಇಲ್ಲದೆ ಓಡಾಡುವಾಗ ವಾಹನ ಸವಾರರಿಂದ ಯಾವ ಗಂಡಾಂತರಗಳಿಂದ ಅಪಾಯಕ್ಕೊಳಗಾಗದ ರೀತಿಯಲ್ಲಿ ಎಚ್ಚರಿಕೆ ಹೊಂದಿದ್ದರೂ ಸಾಕಾಗದು.

ಕೆಲವು ದಿನಗಳಿಂದ ಸ್ಟರ್ಲಿಂಗ್ ಟಾಕೀಸ್ ಕಡೆಯಿಂದ ಜೆ.ಪಿ. ನಗರ, ಬಂಡಿಪಾಳ್ಯ ಮಾರುಕಟ್ಟೆಗಳಿಗೆ ಹೋಗುವ ವಾಹನ ಸವಾರರು, ಇತ್ತೀಚೆಗೆ ಶನಿದೇವರ ದೇವಸ್ಥಾನದ ವೃತ್ತದಲ್ಲಿ ಸಿಗ್ನಲ್ ದೀಪ ಅಳವಡಿಸಿರುವುದರಿಂದ ಅದನ್ನು ತಪ್ಪಿಸಲು ಪರ್ಯಾಯವಾಗಿ ಪಕ್ಕದಲ್ಲಿ ಇರುವ ಈ ಕಿರಿದಾದ ರಸ್ತೆಯ ಮೂಲಕ ತಮ್ಮ ಸ್ಥಳವನ್ನು ತಲುಪಲು ಬಳಸಿಕೊಳ್ಳುತ್ತಿದ್ದಾರೆ. ಇದು ಇನ್ನೂ ಹೆಚ್ಚು ವಾಹನ ದಟ್ಟಣೆಯ ಮೂಲಕ ಇಲ್ಲಿ ವಾಸಿಸುವ ನಾಗರಿಕರಿಗೆ ಇನ್ನಿಲ್ಲದ ರೀತಿ ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಸಂಚಾರಿ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಈ ಸ್ಥಳದಲ್ಲಿ ವಾಸಿಸುವ ನಾಗರಿಕರ ಹಿತರಕ್ಷಣೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಸೂಕ್ತ ವ್ಯವಸ್ಥೆ ಕಲ್ಪಿಸುವ ನಿರ್ಧಾರ ಕೈಗೊಳ್ಳುವಂತೆ ಮನವಿ.

–ಜಿ.ಎಸ್. ಗಣೇಶ್ ರಾವ್, ವಿಶ್ವೇಶ್ವರನಗರ, ಮೈಸೂರು

■ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಸಿದ್ಧತೆ ಅಗತ್ಯ

ಮಾನ್ಯರೆ,

ಜೂನ್ ಸಮೀಪಿಸುತ್ತಿದ್ದಂತೆ ಶಾಲೆ ತೆರೆಯುವ ಸಂಭ್ರಮ ಎಲ್ಲೆಡೆ ಕಾಣಿಸುತ್ತಿದೆ. ಸರ್ಕಾರಿ ಶಾಲೆಗಳನ್ನು ಅವಲಂಭಿಸಿರುವ ಮಕ್ಕಳು ಶಾಲೆಗಳಲ್ಲಿ ಕೊಡುವ ಪುಸ್ತಕ, ಬಟ್ಟೆ, ಊಟ ಸೇರಿದಂತೆ ಇತ್ಯಾದಿ ಸೌಲಭ್ಯಗಳಿಗೆ ಕಾಯುತ್ತಿರುತ್ತಾರೆ. ಆದರೆ ಶಾಲೆ ತೆರೆದು ತಿಂಗಳಾದರೂ ಮಕ್ಕಳು ಅನೇಕ ಸೌಲಭ್ಯದಿಂದ ವಂಚಿತರಾಗಿ ಪುಸ್ತಕ ಸಿಗದ ಕಾರಣ ಓದುವ ಆಸಕ್ತಿ ಕಳೆದುಕೊಳ್ಳುತ್ತಾರೆ. ಜೂನ್ ವೇಳೆಯಲ್ಲಿ ಮಳೆ ಹೆಚ್ಚಾಗಿರುವುದರಿಂದ ಆ ಮಕ್ಕಳಿಗೆ ರೈನ್ ಕೋಟ್ ಜೊತೆಗೆ ಛತ್ರಿಯನ್ನು ವಿತರಿಸಿದರೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಮಳೆಯ ನೆಪ ಮಾಡಿ ಶಾಲೆಗೆ ಹೋಗುವುದಿಲ್ಲ. ವಿದ್ಯಾಭ್ಯಾಸದಲ್ಲಿ ಹಿನ್ನಡೆ ಉಂಟಾಗುತ್ತದೆ. ಕೆಲವು ಕಡೆ ವಿಪರೀತ ಮಳೆ ಕಾರಣ ಅಂತಹ ಮಕ್ಕಳಿಗೆ ಇದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಾದ ವಸ್ತುಗಳಿಗೆ ಪೂರ್ವಸಿದ್ಧತೆ ಅಗತ್ಯವಾಗಿದೆ. ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸಿ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಿ.

–ಎಂ.ಎಸ್.ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು

■ ತ್ರಿವಿಕ್ರಮರ ಸ್ಥಾನ ತುಂಬುವವರಾರು

ಮಾನ್ಯರೇ,

ಭಾರತದ ಕ್ರಿಕೆಟ್ ಟೆಸ್ಟ್ ತಂಡದ ಪ್ರಮುಖ ಅಸ್ತ್ರವಾಗಿದ್ದ ರವಿಚಂದ್ರನ್ ಅಶ್ವಿನ್, ರೋಹಿತ್ ಶರ್ಮ ಹಾಗೂ ವಿರಾಟ್ ಕೋಹ್ಲಿ ಏಕಾಏಕಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿರುವುದು ಭಾರತ ತಂಡಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಏಕೆಂದರೆ ಭಾರತದ ಬಹುತೇಕ ಯಶಸ್ಸಿನ ಪಾಲಿಗೆ ಈ ಮೂವರ ಕೊಡುಗೆ ಪ್ರಮುಖವಾಗಿತ್ತು. ಟೆಸ್ಟ್ ಕ್ರಿಕೆಟ್‌ಗೂ ಟಿ–20 ಅಥವಾ ಒನ್‌ಡೇ ಪಂದ್ಯಗಳಿಗೂ ಸಾಕಷ್ಟು ಅಂತರವಿದೆ. ಅದು ಹೊಡಿಬಡಿ ಆಟವಾಗಿರುವುದರಿಂದ ಯಾರಾದರೂ ಬಂದು ಆಟಕ್ಕೆ ಹೊಂದಿಕೊಳ್ಳಬಹುದು. ಆದರೆ ಟೆಸ್ಟ್ ಕ್ರಿಕೆಟ್‌ನಲ್ಲಿ ಸಾಕಷ್ಟು ಸಮಯವಿರುತ್ತದೆ. ತಾಳ್ಮೆಯಿಂದ ಮೆರಿಟ್ ಮೂಲಕ ಕಾಪಿಬುಕ್ ಶೈಲಿಯಲ್ಲಿ ಆಡಬೇಕಾಗುತ್ತದೆ. ಈ ಹಿಂದೆಯೂ ಭಾರತ ತಂಡದ ಧ್ರುವತಾರೆ ಸಚಿನ್ ತೆಂಡೂಲ್ಕರ್ ಹಾಗೂ ಗೋಡೆ ರಾಹುಲ್ ದ್ರಾವಿಡ್ ನಿವೃತ್ತರಾದಾಗಲೂ ಇದೇ ಸಮಸ್ಯೆ ಭಾರತಕ್ಕೆ ಎದುರಾಗಿತ್ತು. ಇನ್ನು ಮತ್ತೋರ್ವ ಹಿರಿಯ ಕ್ರಿಕೆಟ್ ಪಟು ರವೀಂದ್ರ ಜಡೇಜಾರವರೂ ಸದ್ಯದಲ್ಲಿ ನಿವೃತ್ತಿ ಘೋಷಿಸಲು ಸಿದ್ಧರಾಗಿದ್ದಾರೆ. ಭಾರತದ ಈಗಿರುವ ಟೆಸ್ಟ್ ತಂಡ ಸಾಕಷ್ಟು ಯುವ ಪ್ರತಿಭೆಗಳನ್ನು ಅವಲಂಬಿಸಿದ್ದು, ಅವರು ಪ್ರಬುದ್ಧರಾಗಿ ಬೆಳೆಯಲು ಸಾಕಷ್ಟು ಸಮಯ ಹಿಡಿಯುತ್ತದೆ. ಮುಂಬರುವ ಇಂಗ್ಲೆಂಡ್ ಪ್ರವಾಸದ ಸರಣಿ ಭಾರತದ ಪಾಲಿಗೆ ಕಬ್ಬಿಣದ ಕಡಲೆ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

■ ಶೋಪಿಯಾನದಲ್ಲಿ ಭಯೋತ್ಪಾದಕರ ಎನ್‌ಕೌಂಟರ್ ಅಭಿನಂದನೀಯ

ಮಾನ್ಯರೇ

ನಿನ್ನೆ ಭಾರತೀಯ ಸೇನೆ ಶೋಪಿಯನ್ ಜಿಲ್ಲೆಯ ಕೆಲ್ಲಾರ್‌ನಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಅಡಗಿದ್ದ ಮೂವರು ಜೆಇಎಂ ಭಯೋತ್ಪಾದಕರನ್ನು ಎನ್ಕೌಂಟರ್ ಮಾಡಿ ಮುಗಿಸಿದ್ದು ಅಭಿನಂದನೀಯ. ಹಾಗೆಯೇ ಇದು ನಮ್ಮ ಸೇನೆಯ ಪರಾಕ್ರಮಕ್ಕೆ ಒಂದು ಗರಿ ಮೂಡಿಸಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸೂಕ್ಷ್ಮ ಅಂಶವೇನೆಂದರೆ ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಉಗ್ರ ಅಮೀರ್ ನಜೀರ್ ವಾನಿ ವಿಡಿಯೋ ಕಾಲ್ ಮಾಡಿ ತಾಯಿ ಮತ್ತು ಸಹೋದರಿಯೊಂದಿಗೆ ಮಾತನಾಡಿ ತಾನು ಶರಣಾಗುವುದಿಲ್ಲ ಬದಲಾಗಿ ಭಾರತೀಯ ಸೇನೆ ಮುಂದೆ ಬರಲಿ ನೋಡಿಕೊಳ್ಳುತ್ತೇನೆ ಎಂದು ಉಡಾಫೆ ತೋರಿ ಪ್ರಾಣ ತೆತ್ತಿದ್ದಾನೆ.

ಇದೇ ಘಟನೆಯನ್ನು ಮುಂದಿಟ್ಟುಕೊಂಡು ಸರ್ಕಾರ ತನ್ನ ಪಟ್ಟಿಯಲ್ಲಿ ಉಳಿದಿರುವ ಉಗ್ರರ ಕುಟುಂಬದವರನ್ನು ಆಮೂಲಾಗ್ರ ತನಿಖೆಗೆ ಒಳಪಡಿಸಿ ಸತ್ಯ ಹೊರ ತರುವ ಪ್ರಯತ್ನ ಮಾಡಲಿ. ಇದರಲ್ಲಿ ಯಾವ ಮುಲಾಜು ಬೇಡ. ಕುಟುಂಬಸ್ಥರು ಅಮಾಯಕರಾದರೆ ಸತ್ಯ ಹೇಳಲಿ. ಮೂಗು ಹಿಡಿದರೆ ಬಾಯಿ ಬಿಡಬಹುದು ಎಂಬ ಆಶಾವಾದ ಒಳ್ಳೆಯದಲ್ಲವೇ. ಈ ಬಗ್ಗೆ ಕೇಂದ್ರ ಸರ್ಕಾರ ಚಿಂತಿಸಬಹುದೇ

ಅಂತೆಯೇ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸಿರಿಯಾದ ಹಂಗಾಮಿ ಅಧ್ಯಕ್ಷ ಮಾಜಿ ಭಯೋತ್ಪಾದಕ ಎಂದೇ ಕುಖ್ಯಾತನಾಗಿರುವ ಅಹಮದ್ ಅಲ್‌ಶರ್‌ನನ್ನು ಭೇಟಿ ಮಾಡಿ ಆತನನ್ನು ಹಾಡಿ ಹೊಗಳಿರುವುದು ಟ್ರಂಪ್ ಇಬ್ಬಂದಿತನ ಎದ್ದು ಕಾಣುತ್ತಿದೆ. ಹಿಂದೊಮ್ಮೆ ಇದೇ ಮನುಷ್ಯನ ಮೇಲೆ ಅಮೇರಿಕಾ ಈತನ ತಲೆಗೆ ಇನಾಮು ಘೋಷಿಸಿ ಪ್ರಪಂಚದಾದ್ಯಂತ ಜಾಹೀರಾತು ನೀಡಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ ಸಂಗತಿ. ಈತ ಅಲ್‌ಖೈದ ಸಂಘಟನೆಯ ಬಂಡುಕೋರ ನಾಯಕನಾಗಿದ್ದ ಹಾಗೂ ಅಮೆರಿಕಾ ಈ ಸಂಸ್ಥೆಯನ್ನು ನಿಯೋಜಿತ ಭಯೋತ್ಪಾದಕ ಗುಂಪು ಎಂದು ಘೋಷಿಸಿತ್ತು. ಕಾಲ ಹೇಗೆ ಬದಲಾಯಿತು ನೋಡಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 96639 96390

ಹಳ್ಳಿ ಹಕ್ಕಿ ಹಾಡು



ಸಾಲದ ತುಪ್ಪ ತಿಂದವರು ಸದ್ಯ ತೆಪ್ಪಗಿದ್ದಾರೆ; ಎಚ್ಚರ !!

ಸ್ವಾತಂತ್ರ್ಯಾನಂತರದ ಭಾರತ ರೈತರು ಮತ್ತು ಆರ್ಥಿಕವಾಗಿ ಹಿಂದುಳಿದಂತಹ ಕುಟುಂಬಗಳಿಗೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೊಟ್ಟಿದೆ. ಅವುಗಳಲ್ಲಿ ಸಾಕಷ್ಟು ಯಶಸ್ವಿಯಾಗಿ ಜನರಿಗೆ ತಲುಪಿ, ಸಾರ್ಥಕವೂ ಆಗಿದೆ. ಆದರೆ, ಅವುಗಳಲ್ಲಿ ಯಾವ ಕಾರ್ಯಕ್ರಮವೂ ಉಚಿತವಾಗಿ ಅಲ್ಲ. ರಾಷ್ಟ್ರ ಮಟ್ಟದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ರಾಜ್ಯದಲ್ಲಿ ದೇವರಾಜ್ ಅರಸರ ಸರ್ಕಾರಗಳು ಬಡವರನ್ನು ಬಡತನದಿಂದ ಬಿಡುಗಡೆ ಮಾಡಲು ತಂದಂತಹ ಹಲವಾರು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಆರ್ಥಿಕವಾಗಿ ಹಿಂದುಳಿದವರನ್ನು ಸಾಕಷ್ಟು ಮೇಲೆತ್ತಿವೆ. ಒಂದು ಯೋಜನೆ ರೂಪಿಸಿದರೆ, ಅದಕ್ಕೆ ಕೇಂದ್ರದಿಂದ ಇಷ್ಟು, ರಾಜ್ಯದಿಂದ ಇಷ್ಟು, ಫಲಾನುಭವಿಯಿಂದ ಇಷ್ಟು ಎಂದು ಸಹಭಾಗಿ ಮಾಡಿ ಎಲ್ಲರನ್ನೂ ಜವಾಬ್ದಾರಿ ಮಾಡಿ ಯಶಸ್ವಿಯಾಗಿವೆ.

ಬಡ ಗೇಣಿದಾರ ರೈತರಿಗೆ ನೀನು ಉಳುಮೆ ಮಾಡುತ್ತಿರುವ ಭೂಮಿ ನಿನ್ನದೇ... ಎಂದು ಭೂಸುಧಾರಣೆಯ ಮೂಲಕ ಕೊಟ್ಟ ಭೂಮಿಗೂ ಎಕರೆಗೆ ಇಂತಿಷ್ಟು ಕಿಸ್ತು ಕಟ್ಟಬೇಕು ಮತ್ತು ಸರ್ಕಾರದ ದರಖಾಸ್ತು ಭೂಮಿ ಹಂಚಿಕೆಯಲ್ಲೂ ಎಕರೆಗೆ ಇಂತಿಷ್ಟು ಕಿಸ್ತು ಎಂದು ನಿಗದಿ ಮಾಡಿ ಅವನ ಜವಾಬ್ದಾರಿಯನ್ನು ಮನವರಿಕೆ ಮಾಡಿದೆ.

ಮಹಾತ್ಮಗಾಂಧಿಯವರು ಹೇಳಿದ್ದು ಅಂತ್ಯೋದಯದಿಂದ ಸರ್ವೋದಯಕ್ಕೆ ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು ಸಾಗಲಿ ಎಂದಿದ್ದಾರೆ. ಆದರೆ ನಮ್ಮ ಈಗಿನ ಸರ್ಕಾರ ಇದನ್ನು ತಲೆಕೆಳಗು ಮಾಡಿದೆ. ಗ್ಯಾರಂಟಿ ಯೋಜನೆಗಳ ಪ್ರಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮಂತ್ರಿ ಮಹದೇವಪ್ಪನವರನ್ನು ಉದ್ದೇಶಿಸಿ ಹೇಳಿದ ಮಾತು–ಮಹದೇವಪ್ಪ ನಿನ್ನ ಹೆಂಡ್ತಿಗೂ ಎರಡು ಸಾವಿರ, ನನ್ನ ಹೆಂಡ್ತಿಗೂ ಎರಡು ಸಾವಿರ ರೂಪಾಯಿ ತಿಂಗಳಿಗೆ ಫ್ರೀ...!

ಆದರೆ, ಸಿದ್ದರಾಮಯ್ಯನವರು ಇಲ್ಲಿ ಅಂತ್ಯೋದಯವನ್ನು ಬಿಟ್ಟು ಸರ್ವೋದಯವನ್ನು ಸಾರಿದರು. ಈ ಗ್ಯಾರಂಟಿ ಯೋಜನೆ ಸಂಪುಟದ ಯಾವುದೇ ಸಚಿವರಿಗೂ ಹಿಡಿಸಲಿಲ್ಲ. ಆದರೆ ಮುಖ್ಯಮಂತ್ರಿಯ ಮುಂದೆ ಮಾತನಾಡುವ, ವಿರೋಧಿಸುವ ಗಂಡೆದೆಯಿಲ್ಲ. ಮಾತನಾಡಿದರೆ ನನ್ನನ್ನು ಸಂಪುಟದಿಂದ ಕೈಬಿಟ್ಟರೆ ಎಂದುಕೊಂಡು ಸುಮ್ಮನಾಗಿದ್ದಾರೆ.

> ಗೃಹಲಕ್ಷ್ಮಿ ಯೋಜನೆಗೆ ಸರ್ಕಾರದ ಹೇಳಿಕೆ ಹಾಗೂ ಪ್ರಚಾರದ ಪ್ರಕಾರವೇ ವಾರ್ಷಿಕ 56 ಸಾವಿರ ಕೋಟಿ ಖರ್ಚಾಗುತ್ತದೆ. ಈ ಹಣವನ್ನು ಸರ್ಕಾರ ಸಾಲ ತಂದು ಮಾಡಲು ಮಾತ್ರವೇ ಸಾಧ್ಯ. ಈಗಾಗಲೇ ಸರ್ಕಾರದ ಸಾಲ 7.50 ಲಕ್ಷ ಕೋಟಿಯನ್ನೂ ಮೀರಿದೆ. ಸಾಲ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಹೋಳಿಗೆ ಊಟ ಎಂದರೆ ಯಾವ ನ್ಯಾಯ. ಸಿದ್ದರಾಮಯ್ಯನವರಿಗೆ ಇದರ ಅರಿವು ಇರಬಹುದು. ಆದರೆ ಜನರು, ತೆರಿಗೆದಾರರು ಬುದ್ಧಿವಂತರಿದ್ದಾರೆ. ಸರ್ಕಾರ ಸಾಲ ಮಾಡಿ ಜನರಿಗೆ ತುಪ್ಪ ತಿನ್ನಿಸುತ್ತಿರುವುದು ದುರಂತ.

ಇದು ಎಂದಾದರು ಸಿಡಿಯದೇ ಇರದು.

ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸರಿಂದ ಹಿಡಿದು ಯಾವುದೇ ಮಂತ್ರಿಗಳು ತಾವು ಭಾಗವಹಿಸುವ ಸಾರ್ವಜನಿಕ ಸಭೆಯ ನಂತರ ದಡದಡನೆ ವೇದಿಕೆಯಿಂದ ಕೆಳಗಿಳಿದು ಬಂದು, ಸಭೆಯ ಕೊನೆಯಲ್ಲಿರುತ್ತಿದ್ದ ಜನರ ಬಳಿ ಹೋಗಿ, ಅವರ ಕಷ್ಟಗಳನ್ನು ಕೇಳುತ್ತಿದ್ದರು. ಇದರ ಸಂಕೇತ ಕಾಂಗ್ರೆಸ್ಸಿನ ತತ್ವ ಕಟ್ಟ ಕಡೆಯ ಮನುಷ್ಯನನ್ನು ತಲುಪಬೇಕೆನ್ನುವುದೇ ಆಗಿತ್ತು.

ಉಪಮುಖ್ಯಮಂತ್ರಿಯ ಜೊತೆಗೆ ಕೆಲವು ಕಟ್ಟಾ ಕಾಂಗ್ರೆಸ್ ಮಂತ್ರಿಗಳನ್ನು ಹೊರತುಪಡಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರಾದಿಯಾಗಿ ಬಹುತೇಕ ಮಂತ್ರಿಗಳು ಕಾಂಗ್ರೆಸ್ಸಿನ ನೀತಿ–ರೀತಿಯನ್ನು ಮರೆತಿದ್ದಾರೆ. ಕಾರಣ! ಅವರೆಲ್ಲಾ ಜನತಾ ಪರಿವಾರದಿಂದ ಕಾಂಗ್ರೆಸ್ಸಿಗೆ ಪಕ್ಷಾಂತರದ ಮೂಲಕ ವಲಸೆ ಬಂದವರು. ಅವರ ರಾಜಕೀಯದುದ್ದಕ್ಕೂ ಕಾಂಗ್ರೆಸ್ಸಿನ ನಾಯಕತ್ವವನ್ನು ಹೀನಾಮಾನವಾಗಿ ವಿರೋಧಿಸಿದ್ದವರು.

ನಾವ್ಯಾರು ಸರಕಾರದ ಬಡವರ ಕಾರ್ಯಕ್ರಮಗಳನ್ನು ವಿರೋಧಿಸಿದವರಲ್ಲ. ಆದರೆ ಅವು ಅಂತ್ಯೋದಯವಲ್ಲದೆ ಸರ್ವೋದಯಕ್ಕಾಗಿ ಎಂದಾಗ ವಿರೋಧಿಸದೆ ವಿಧಿಯಿಲ್ಲ. ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾದ, ಗೃಹಿಣಿಯರಿಗೆ ಉಚಿತವಾಗಿ ಕೊಡುತ್ತಿರುವ ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ಗೃಹಲಕ್ಷ್ಮಿ ಯೋಜನೆ ಸರ್ವೋದಯವಾಗಿದೆ. ಸರ್ಕಾರದ ಯೋಜನೆಯಲ್ಲಿ ಇಲ್ಲದವರಿಗೆ ಕೊಟ್ಟಿದ್ದರೆ ಯಾರೂ ಪ್ರಶ್ನಿಸುತ್ತಿರಲಿಲ್ಲವೇನೋ. ಆದರೆ, ಈ ಯೋಜನೆ ಇಲ್ಲದವರಿಗೆ ಮಾತ್ರವಲ್ಲ, ಉಳ್ಳವರು ಅರ್ಥಾತ್ ಎಲ್ಲರಿಗೂ ಸಿದ್ದರಾಮಯ್ಯ ಕೊಡುತ್ತಿರುವುದು ನ್ಯಾಯ ಸಮ್ಮತವಲ್ಲ ಎಂದು ಬಹುತೇಕರ ಬೇಸರ.



ಕಾರಣವೇನೆಂದರೆ, ಈ ಗ್ಯಾರಂಟಿ ಯೋಜನೆಗೆ ಸರ್ಕಾರದ ಹೇಳಿಕೆ ಹಾಗೂ ಪ್ರಚಾರದ ಪ್ರಕಾರವೇ ವಾರ್ಷಿಕ 56 ಸಾವಿರ ಕೋಟಿ ಖರ್ಚಾಗುತ್ತದೆ. ಈ ಹಣವನ್ನು ಸರ್ಕಾರ ಸಾಲ ತಂದು ಮಾಡಲು ಮಾತ್ರವೇ ಸಾಧ್ಯ. ಈಗಾಗಲೇ ಸರ್ಕಾರದ ಸಾಲ 7.50 ಲಕ್ಷ ಕೋಟಿಯನ್ನೂ ಮೀರಿದೆ. ಸಾಲ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಹೋಳಿಗೆ ಊಟ ಎಂದರೆ ಯಾವ ನ್ಯಾಯ. ಸಿದ್ದರಾಮಯ್ಯನವರಿಗೆ ಇದರ ಅರಿವು ಇರಬಹುದು. ಆದರೆ ಜನರು, ತೆರಿಗೆದಾರರು ಬುದ್ಧಿವಂತರಿದ್ದಾರೆ. ಸರ್ಕಾರ ಸಾಲ ಮಾಡಿ ಜನರಿಗೆ ತುಪ್ಪತಿನ್ನಿಸುತ್ತಿರುವುದು ದುರಂತ. ಈ 56 ಸಾವಿರ ಕೋಟಿಯಿಂದ ರಾಜ್ಯದಲ್ಲಿ ತೆವಳುತ್ತಿರುವ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಿ ಅನ್ನದಾತನಿಗೆ, ಅನ್ನ ಉಣ್ಣುವವರಿಗೆ ದೊಡ್ಡ ಸಹಾಯ ಮಾಡಬಹುದಾಗಿತ್ತಲ್ಲವೇ!

ನಮ್ಮದೆ ಒಂದು ಉದಾಹರಣೆ ತೆಗೆದುಕೊಳ್ಳೋಣ, ನಮ್ಮ ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ಈ ಗೃಹಲಕ್ಷ್ಮಿ ಯೋಜನೆಯ ಮೂಲಕ 68,250 ಹೆಣ್ಣು ಮಕ್ಕಳಿಗೆ ಈ ತನಕ (18 ತಿಂಗಳು–ಜನವರಿಯಿಂದ ಈ ತನಕವೂ ಇಲ್ಲ) ಒಟ್ಟು 244 + ಕೋಟಿ ಹಣ ಸಂದಾಯವಾಗಿದೆ. ತಾಲೂಕಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವುದು ನಿಲ್ಲಿಸಿ ಸುಮಾರು ಇಪ್ಪತ್ತು ವರ್ಷಗಳ ಮೇಲಾಗಿದ್ದು, ಈ ಹಣ ಖರ್ಚು ಮಾಡಿದರೆ ಅದನ್ನು ಪ್ರಾರಂಭಿಸಬಹುದಾಗಿತ್ತು. ಇದರಿಂದ ನಾಲ್ಕು ತಾಲೂಕಿನ ಕಬ್ಬು ಬೆಳೆಗಾರರಿಗೆ, ಕಬ್ಬು ಕಡಿಯುವ ಕೃಷಿ ಕಾರ್ಮಿಕರಿಗೆ, ಕಬ್ಬು ಸಾಗಾಟದ ಲಾರಿ, ಟ್ರಾಕ್ಟರ್, ಎತ್ತಿನಗಾಡಿವುಳ್ಳ ರೈತರಿಗೆ ಬಹಳಷ್ಟು ಅನುಕೂಲವಾಗುತ್ತಿತ್ತು. ಬಹಳಷ್ಟು ಕುಟುಂಬಗಳು ಇದರಿಂದ ಬದುಕುತ್ತಿದ್ದವು.

ಆದರೆ, ದುರಹಂಕಾರದಿಂದ ಮೆರೆಯುವ, ಸರ್ಕಾರಕ್ಕೆ ಇದು ಏಕೆ ಅರ್ಥವಾಗುತ್ತಿಲ್ಲ. ಯಾವುದೇ ವಿವೇಚನೆ ಇಲ್ಲದೆ ಸರಕಾರದ ಹಣವನ್ನು ನಿಮ್ಮ ತೆವಲಿಗಾಗಿ ಖರ್ಚು ಮಾಡುತ್ತಿರುವ ಹಣ, ಸಾಲದ ಹಣ. ಸಾಲ ತೀರಿಸುವವರು ಈ ರಾಜ್ಯದ ಜನರೇ ಹೊರತು ನೀವುಗಳಲ್ಲ. ಈಗಾಗಲೇ ಜನರಲ್ಲಿ ಅಸಮಾಧಾನ ಶುರು ಆಗಿದೆ. ಜನರು ಜನತಂತ್ರ ವ್ಯವಸ್ಥೆಯಲ್ಲಿ ನಿಮ್ಮ ಬುದ್ಧಿಗೇಡಿ ಕಾರ್ಯಕ್ರಮಗಳಿಂದ ದಂಗೆ ಏಳುವ ಮೊದಲು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈಗಾಗಲೇ ಆಗಿರುವ ಹಾನಿಯನ್ನು ಸರಿಮಾಡಿ. ಇಡೀ ದೇಶದಲ್ಲಿ ಹೆಚ್ಚು ಸಾಲ ಮಾಡಿರುವ ರಾಜ್ಯ ಕರ್ನಾಟಕ ಎಂದು ಅಪಖ್ಯಾತಿ ಹೆಚ್ಚಾಗುತ್ತಿದೆ. ಇದಕ್ಕೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ನೇರ ಹೊಣೆಗಾರರಾಗಬೇಕಾಗುತ್ತದೆ. ಇದು ನಿಶ್ಚಿತ. ಎಚ್ಚರ ! ಎಚ್ಚರ !! ಎಚ್ಚರ !!!

ಪುಟ್ಟ ವಿಧವೆ ಕಂಡ ಬೇಂದ್ರೆಗೆ ಉಕ್ಕಿತು ಕವನ...



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಕಾಲಘಟ್ಟದಲ್ಲಿ ಅದೊಂದು ಸಮಯ. ಗಲಗಲಿ ಎಂಬ ಪುಟ್ಟ ಊರಿನಲ್ಲಿ ಒಂದು ಅಗ್ರಹಾರ. ವಿದ್ಯೆಗೆ ಇನ್ನಿಲ್ಲದ ಪ್ರಾಮುಖ್ಯತೆಯನ್ನು ಕೊಡುತ್ತಿದ್ದವರೇ ಸುತ್ತಮುತ್ತಲಿನವರೆಲ್ಲ. ಆಚಾರ, ವಿಚಾರಗಳಲ್ಲಿ ಶುಭ್ರತೆ ತುಂಬಿ ತುಳುಕುತ್ತಿದ್ದ ಕಾಲ. ಶಾಸ್ತ್ರ, ನ್ಯಾಯ, ವ್ಯಾಕರಣ, ಕಾವ್ಯ, ತರ್ಕ, ಜ್ಯೋತಿಷ್ಯ, ವೇದಾಂತ ಮುಂತಾದುವುಗಳ ಆಳವಾದ ಅಧ್ಯಯನ ಎಂಬುದು ಅಲ್ಲಿ ತೀರಾ ಸಹಜ ಎಂಬಂತೆ ಆಗುತ್ತಿದ್ದ ಕಾಲ. ಆ ಓಣಿಗಳ ತುಂಬ ಜ್ಞಾನ ಪಿಪಾಸುಗಳೇ ತುಂಬಿದ್ದರು ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ಒಂದೊಂದು ಮನೆಯಲ್ಲೂ ಒಬ್ಬರಲ್ಲ ಒಬ್ಬರು ಪ್ರಕಾಂಡ ಪಂಡಿತರೇ ಆಗಿರುತ್ತಿದ್ದರು. ತಮ್ಮ ಧರ್ಮವನ್ನು ಚಾಚೂ ತಪ್ಪದಂತೆ ಪಾಲಿಸುತ್ತಿದ್ದವರೇ ಕಾಣಸಿಗುತ್ತಿದ್ದುದು. ಆ ಶಾಸ್ತ್ರ ವಿದ್ಯಾ ಪಂಡಿತರು ಕೊಟ್ಟ ಮಾತನ್ನು ಎಂದೂ ಹಿಂತೆಗೆದುಕೊಂಡ ದೃಷ್ಟಾಂತವೇ ಇರಲಿಲ್ಲ. ನಾಲಿಗೆ ನುಡಿವ ನುಡಿ ಮತ್ತು ನಡೆ ಒಂದೇ ಆಗಿತ್ತು.

ಸುಬ್ಬಣ್ಣಾಚಾರ್ ಮತ್ತು ಇಂದ್ರಾಬಾಯಿ ದಂಪತಿಗಳು ಅಲ್ಲಿಂಯೇ ವಾಸಿಸುತ್ತಿದ್ದುದು. ನರಸಿಂಹಾಚಾರ್ಯರ ಆರೇಳು ಮಕ್ಕಳಲ್ಲಿ ಹಿರಿಯರು ಸುಬ್ಬಣ್ಣಾಚಾರ್ಯರು. ಹೆಸರಾಂತ ವಯ್ಯಾಕರಣಿಕರು. ಅವರ ತಮ್ಮಂದಿರೂ ಉದ್ದಾಮ ಪಂಡಿತರೇ. ಈ ದಂಪತಿಗಳಿಗೆ ಎರಡು ಗಂಡುಮಕ್ಕಳ ನಂತರ ಮತ್ತೆರಡು ಮಕ್ಕಳು ತೀರಿಕೊಂಡವು. ನಂತರ ಒಂದು ಹೆಣ್ಣು ಸಂತಾನವಾಯಿತು. ಇದಾದರೂ ಕಲ್ಲುಗುಂಡಿನಂತೆ ಗಟ್ಟಿಯಾಗಿ ಉಳಿಯಲಿ ಎಂದು ಅದಕ್ಕೆ ಗುಂಡಕ್ಕ ಎಂದು ನಾಮಕರಣ ಮಾಡಿದರು. ದೇವರ ದಯದಿಂದಲೋ ಎಂಬಂತೆ ಆ ಹೆಣ್ಣು ಮಗು ಉಳಿಯಿತು. ಮುಂದೆ ಅದಕ್ಕೆ ಒಬ್ಬ ತಂಗಿ ಮತ್ತು ಒಬ್ಬ ತಮ್ಮಂದಿರೂ ಆದರು. ಸುಬ್ಬಣ್ಣಾಚಾರ್ಯರು ಪ್ರವಚನ ನೀಡಲು ಅನೇಕ ಊರುಗಳಿಗೆ ಸಂಚಾರ ಹೋಗುತ್ತಿದ್ದರು. ಹಾಗೆ ಒಮ್ಮೆ ರಾಯಚೂರಿಗೆ ಭೇಟಿ ಕೊಟ್ಟಿದ್ದರು.

ಆಗ ಮೊಘಲರ ಆಳ್ವಿಕೆಗೆ ಸೇರಿದ ಪ್ರದೇಶಗಳನ್ನು ಮೊಘಲಾಯ್ ಎಂದು ಕರೆಯಲಾಗುತ್ತಿತ್ತು. ಸುಬ್ಬಣ್ಣಾಚಾರ್ಯರು ಅಲ್ಲಿಯೇ ಬನಿಗೋಳ ಎಂಬ ಊರಿನಲ್ಲಿ ಬೀಡು ಬಿಟ್ಟಿದ್ದರು. ಅವರ ಪ್ರವಚನ ಕೇಳಲು ನಿತ್ಯ ಬರುತ್ತಿದ್ದವರಲ್ಲಿ ಕನಕೊಪ್ಪದ ಜಹಗೀರುದಾರರಾಗಿದ್ದ ಮಠದ ಎಂಬ ವ್ಯಕ್ತಿಯು ಸುಬ್ಬಣ್ಣಾಚಾರ್ಯರನ್ನು ಒಮ್ಮೆ ಸ್ವಾಮಿ, ನಮಗೆ ಹುಟ್ಟುತ್ತಿರುವ ಒಂದು ಮಕ್ಕಳೂ ಉಳಿಯುತ್ತಿಲ್ಲ. ದಯವಿಟ್ಟು ನಮ್ಮ ಸಂತಾನವು ಉಳಿಯುವಂತೆ ಯಾವುದಾದರೂ ತಾಯತವನ್ನು ಮಂತ್ರಿಸಿಕೊಟ್ಟು, ಉಪಕರಿಸಬೇಕು ಅಂದರಂತೆ. ಅವರ ಇಚ್ಛೆಯಂತೆ ಆಚಾರ್ಯರು ಮಾಡಿಕೊಟ್ಟರು. ಮುಂದೆಂದೋ ಆ ಊರಿಗೆ ಹೋದಾಗ ಅದೇ ಮಠದ ಅವರು ಬಲು ಸಂತೋಷಭರಿತರಾಗಿ ತಮಗೆ ಮಗ ಹುಟ್ಟಿದುದನ್ನು ತಿಳಿಸಿದರು. ತಮ್ಮ ಕೃಪೆಯಿಂದ ಮಗ ಹುಟ್ಟಿದ್ದಾನೆ. ಅವನಿಗೆ ನಿಮ್ಮ ಮಗಳನ್ನೇ ಕನ್ಯಾದಾನ ಮಾಡಿ ನಮ್ಮ ಮನೆಯು ಬೆಳಗುವಂತೆ ಮಾಡಿ ಎಂದು ಇನ್ನೊಂದು ಬೇಡಿಕೆಯನ್ನು ಇಟ್ಟರು.

ಆಗ್ಗೆ, ಆಚಾರ್ಯರ ಮನೆತನದ ಹೆಣ್ಣುಮಕ್ಕಳನ್ನು ಮನೆ ತುಂಬಿಸಿಕೊಂಡರೆ, ಮುಂದಿನ, ಹಿಂದಿನ ಏಳು ತಲೆಮಾರಿನವರಿಗೆ ಸದ್ಗತಿ ದೊರೆಯುತ್ತದೆ ಎಂಬ ನಂಬಿಕೆ ಇತ್ತು. ಆಯಿತು. ಹಾಗೇ ಆಗಲಿ ಎಂದು ಮಾತುಕೊಟ್ಟು ಊರಿಗೆ ಹಿಂದಿರುಗಿದರು ಆಚಾರ್ಯರು. ನಡೆದ ಸಂಗತಿಯನ್ನು ಕುಟುಂಬದಲ್ಲಿ ಹೇಳಿದರು. ಜ್ಯೋತಿಷ್ಯದಲ್ಲಿ ಗಟ್ಟಿಗರಾಗಿದ್ದ ಅವರ ತಮ್ಮ ಕೂರ್ಮಾಚಾರ್ಯರು ಗುಂಡಕ್ಕನ ಮತ್ತು ಹುಡುಗನ ಕುಂಡಲಿಗಳನ್ನು ತಾಳೆ ಮಾಡಿ ನೋಡಿ, ಎಂತಹ ಕೆಲಸ ಮಾಡಿದೆ ಅಣ್ಣ, ಹುಡುಗನಿಗೆ ಆಯುಷ್ಯ ರೇಖೆಯೇ ಇಲ್ಲ ಅಂದರು. ಆಘಾತವಾಯಿತು ಸುಬ್ಬಣ್ಣಾಚಾರ್ಯರಿಗೆ. ಮಾತು ಕೊಟ್ಟಾಗಿದೆ. ಅದನ್ನು ತಪ್ಪುವ ಮಾತೇ ಇಲ್ಲ. ದೇವರು ನಡೆಸಿದಂತಾಗಲಿ ಎಂದು ಗಟ್ಟಿ ಮನಸ್ಸು ಮಾಡಿದರು. ಆಗೆಲ್ಲ ಬಾಲ್ಯವಿವಾಹ ಪದ್ಧತಿಯೇ ಇದ್ದುದು. ಹುಡುಗಿ ದೊಡ್ಡವಳಾಗುವ ಮೊದಲೇ ಮದುವೆ ಮಾಡಿಬಿಡುತ್ತಿದ್ದುದು ಸಂಪ್ರದಾಯ.



ದ.ರಾ.ಬೇಂದ್ರೆ

ಹದಿಮೂರರ ಬಾಲೆ ಗುಂಡಕ್ಕನ ವಿವಾಹ ನಿಶ್ಚಿತವಾಯಿತು. ವರ ಇಂಟರ್‌ಮೀಡಿಯೇಟ್ ಕಲಿಯಲು ಇನ್ನೇನು ಬೇರೆ ಊರಿಗೆ ಹೊರಡಲಿದ್ದ. ಮನೆಯ ಮೊದಲ ಲಗ್ನ, ಎರಡೂ ಕಡೆಯವರು ಕೂಡಿ ಸಂಭ್ರಮದಿಂದ ಮದುವೆ ಶಾಸ್ತ್ರವನ್ನು ಮಾಡಿ ಮುಗಿಸಿದರು. ಮೈತುಂಬ ಬಂಗಾರದ ಒಡವೆ ಧರಿಸಿದ್ದ ಗುಂಡಕ್ಕನನ್ನು ಮನೆ ತುಂಬಿಸಿಕೊಂಡ ನಂತರ ಆಕೆಯನ್ನು ತಮ್ಮೊಡನೆ ತವರಿಗೆ ಕರೆದುಕೊಂಡು ಬಂದುದೂ ಆಯಿತು. ಏನು ಆಗುತ್ತಿದೆ ಎಂಬುದರ ಅರಿವೂ ಬಹುಶಃ ಆಕೆಗೆ ಇರಲಿಕ್ಕಿಲ್ಲ.

ಮದುವೆ ಶಾಸ್ತ್ರಾದಿಗಳು ಮುಗಿದ ಮಾರನೆಯ ದಿನವೇ ಹುಡುಗನೂ ಓದಲು ಹೈದರಾಬಾದಿಗೆ ಹೊರಟ. ಕೆಲವೇ ದಿನಗಳಲ್ಲಿ ಅಲ್ಲಿಗೆ ಪ್ಲೇಗು ಮಾರಿ ಹೊಕ್ಕಿತು. ಇವನಿಗೂ ಅದು ತಗುಲಿಕೊಂಡಿತು. ಆತ ಅಲ್ಲಿಯೇ ತೀರಿಕೊಂಡ. ಸುದ್ದಿ ತಿಳಿದ ಹುಡುಗಿಯ ಮನೆಯವರೆಲ್ಲ ಗೋಳಾಡಿದರು. ಅದೇ ತಾನೆ ಯೌವನಕ್ಕೆ ಕಾಲಿಡುತ್ತಿದ್ದ ಗುಂಡಕ್ಕ ವಿಧವೆ ಪಟ್ಟವನ್ನು ಸ್ವೀಕರಿಸಿದಳು. ವಿಧವಾ ವಿವಾಹ ಎಂಬುದನ್ನು ಕೇಳಿಯೂ ಗೊತ್ತಿಲ್ಲದ ಪರಿಸರ. ಪದ್ಧತಿಯಂತೆ ಅವಳಿಗೆ ಕೇಶ ಮುಂಡನ ಮಾಡಿಸಿ, ಕೆಂಪು ಸೀರೆ ಉಡಿಸಲಾಯಿತು. ಗಂಡನ ಮುಖವನ್ನು ಸರಿಯಾಗಿ ನೋಡಿಯೂ ಇರದಿದ್ದ ಗುಂಡಕ್ಕನ ಮುಂದೆ ಹಾಸಿ ಹೊದೆಯುವಷ್ಟು ಇಡೀ ಬದುಕು ಹರಡಿತ್ತು. ಹತ್ತು ಹದಿನೈದು ವರುಷ ಅತ್ತೆ ಮಾವಂದಿರ ಸೇವೆಯನ್ನು ಮಾಡಿದ ಗುಂಡಕ್ಕ ಮುಂದೆ ಕಾಯಂ ಆಗಿ ತವರಿಗೆ ಹಿಂದಿರುಗಿದಳು.

ಆಚಾರವಂತರ ಮನೆಯ ಹುಡುಗಿಯಾದ್ದರಿಂದ ತನ್ನ ನಡೆ–ನುಡಿಯ ಬಗ್ಗೆ ಸ್ಪಷ್ಟ ಅರಿವಿದ್ದ ಆಕೆ ಸಂಪ್ರದಾಯದ ಗೆರೆಯನ್ನು ಎಂದೂ ದಾಟಲಿಲ್ಲ. ಪರರಸೇವೆಯೇ ತನ್ನ ಬಾಳಿನ ಗುರಿಯೆಂದು ಬಗೆದ ಗುಂಡಕ್ಕ ಅಣ್ಣ ತಮ್ಮಂದಿರ, ತಂಗಿಯ ಮನೆ ಮಕ್ಕಳೆಲ್ಲರ ಬಾಣಂತನವನ್ನು ಮಾಡಿದಳೆಂದರೆ ಅಪೂರ್ಣವಾದೀತು. ತನಗೆ ಇಲ್ಲದ ಭಾಗ್ಯವನ್ನು ಆಕೆ ಆ ಮಕ್ಕಳಲ್ಲಿ ಕಾಣುತ್ತಿದ್ದಳೋ ಏನೋ ಎಂಬಂತೆ ಅತ್ಯಂತ ಸಂತೋಷದಿಂದ ಕೂಸು–ಬಾಣಂತಿಯ ಸೇವೆ ಮಾಡಿದಳು. ಅಕ್ಕ, ಹಗಲೂ ರಾತ್ರಿ ಕೂಸು ಬಾಣಂತಿಯ ಸೇವೆ ಮಾಡತೀಯಲ್ಲ, ನಿನಗೆ ಬ್ಯಾಸರ ಬರೂದಿಲ್ಲೇನ ಎಂದು ಕೇಳಿದರೆ ನಿಂಗೊತ್ತಿಲ್ಲ, ಒಂದು ಬಾಣಂತನ ಮಾಡಿದರ ಕಾಶೀಗೆ ಹೋದಷ್ಟು ಪುಣ್ಯ ಬರ್ತದ. ನಾನು ನೂರು ಬಾಣಂತನ ಮಾಡೀನಿ ಎಂದು ಉತ್ತರಿಸುತ್ತಿದ್ದಳು. ಆಕೆಯ ಅಡುಗೆಯ ಕೈರುಚಿಗೆ ಉಂಡವರೆಲ್ಲರೂ ಮನಸೋಲುತ್ತಿದ್ದರು.

ವರಕವಿ ಬೇಂದ್ರೆಯವರಿಗೂ ಗಲಗಲಿಗೂ ಬಹಳ ಆಪ್ತವಾದ ಸಂಬಂಧ ಇತ್ತು ಎಂಬುದು ಬಹುಶಃ ಬಹಳ ಮಂದಿಗೆ ತಿಳಿದಿರಲಾರದು. ಅಲ್ಲಿಯ ಸಾಹಿತ್ಯ–ಕಾವ್ಯಾಸಕ್ತರಿಗೆ ಬೇಂದ್ರೆಯವರ ಒಡನಾಟವು ಹೆಜ್ಜೇನು ಸವಿದಂತೆ. ಹೀಗಾಗಿ ಅವರು ಬೇಂದ್ರೆಯವರನ್ನು ಗಲಗಲಿಗೆ ಕರೆಸುವುದು ನಡೆಯುತ್ತಲೇ ಇತ್ತು. ಆಗೆಲ್ಲ ಅಲ್ಲಿ ಬರೀ ಸಾಹಿತ್ಯದ ಚರ್ಚೆ, ಕಾವ್ಯ–ಕವನಗಳ ಸಾಂಗತ್ಯ. ಗಲಗಲಿಯ ಉಸುಕಿನ ಹೊಳೆ, ಆಚಾರ ಘಟ್ಟ ಮುಂತಾದ ಎಡೆಗಳಲ್ಲಿ ಕಾವ್ಯದ ಗುಂಜಾರವೇ ಕೇಳಿಸುತ್ತಿದ್ದುದು. ಬೇಂದ್ರೆಯವರ ಹಲವು ಕವನಗಳು ಪ್ರಕಟವಾಗುವ ಮೊದಲೇ ಅಲ್ಲಿ ವಾಚನವಾಗಿರುತ್ತಿತ್ತು. ತಮ್ಮ ಕವನಗಳನ್ನು ಅಲ್ಲಿನ ಯುವಕ ಯುವತಿಯರಿಗೆ ಹಾಡಲು ಕಲಿಸುವುದೆಂದರೆ ಬೇಂದ್ರೆಯವರಿಗೆ ಬಲು ಹಿಗ್ಗು. ಅವರ ಮೇಘದೂತದ ಜೊತೆಗೆ ಸಂಸ್ಕೃತದ ಮೇಘದೂತವನ್ನಿಟ್ಟು ತೌಲನಿಕ ಚರ್ಚೆ ನಡೆಯುತ್ತಿದ್ದುದೂ ಉಂಟು. ಅಂತಹ ದಿನಗಳಲ್ಲಿ ಒಮ್ಮೆ ಒಂದು ಪ್ರವಚನದಲ್ಲಿ ಕೆಂಪು ಸೀರೆಯಲ್ಲಿ ತನ್ನ ಸೌಂದರ್ಯವನ್ನು ಹುದುಗಿಸಿದ್ದ ಗುಂಡಕ್ಕನನ್ನು ಕಂಡ ಬೇಂದ್ರೆ, ಈಕೆ ಯಾರೆಂದು ಪ್ರಶ್ನಿಸಿದರು. ಅವಳ ಪೂರ್ವಾಪರವನ್ನರಿತ ಅವರ ಹೃದಯ ಮರುಗಿತು. ಮರುದಿನವೇ ಅವರಿಂದ ಪುಟ್ಟ ವಿಧವೆ ಕವನ ರಚಿತವಾಯಿತು.

ಆಕೆಯಿದ್ದಳು ಕೂಸು
ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ
ಹಿಗ್ಗು ಎಷ್ಟು !
ಧರ್ಮದಾ ಹೆಸರಿನಲ್ಲಿ
ಅವರ ಕೈಕೂಡಿಸಲು
ಇವರಿಗೆನಿಸಿತು ಹರ್ಷ
ಹಬ್ಬದಷ್ಟು!
ಕೊರಳ ಕರಿಮಣಿ, ಗಲ್ಲದರಿಷಿಣವು
ಮುಗಬೊಟ್ಟು
ಆಮೇಲೆ ಉದ್ದು ಕುಂಕುಮದ
ಅಂದ!
ಆ ಪುಟ್ಟ ಮುತ್ತೈದೆ
ಪುಟಪುಟನೆ ನೆಗೆದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೋ
ಚಂದ!
ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು
ಕೆಂಪುಸೀರೆ
ಆದರಯ್ಯೋ ಪಾಪ ಆಕೆಯಿನ್ನೂ
ಮಗುವು ಸಿಂಗಾರವಿರದೇ
ಆ ಮಾತೇ ಬೇರೆ
ನಿಟ್ಟುಸಿರ ಸರದಲ್ಲಿ
ಕಂಬನಿಯ ಪೋಣಿಸುತ
ಪುಟ್ಟ ವಿಧವೆಯು ಪುರಾಣಕ್ಕೆ
ಬರಲು
ಗುಡಿಯ ಮೂರ್ತಿಗೆ
ಮಂಕುಹಿಡಿದು,
ಆಚಾರ್ಯರಿಗೂ ಉರುಲಿಕ್ಕಿತಂತೆ
ಬಿಗಿದಿತ್ತು ಕೊರಲು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

36 ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಸುನಂದ ಮತ್ತು ಜಯರಾಮೇಗೌಡ

ಶುಭ ಕೋರುವವರು: ಮಗ ನವೀನ್ ಗೌಡ, ಸೊಸೆ ಚಂದ್ರಕಲ, ಮಗಳು ಪದ್ಮಿನಿ ಆನಂದ್, ಅಳಿಯ ಆನಂದ್ ಎನ್ ಗೌಡ ಮೊಮ್ಮಕ್ಕಳು ಹಾಗೂ ಕುಟುಂಬವರ್ಗ ಮತ್ತು ಕುಂಬಾರಕೊಪ್ಪಲು ಗ್ರಾಮಸ್ಥರು

8ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ನೇತ್ರಾವತಿ ಮತ್ತು ಶ್ರೀ ಕಾಳಸ್ವಾಮಿ

ಶುಭ ಕೋರುವವರು: ಶ್ರೀಮತಿ ಜಯಮ್ಮ (ಮಾಜಿ ನಿರ್ದೇಶಕರು, ಪಿಎಸಿಸಿ, ಸಾಗಡೆ) ಶ್ರೀ ಮಹೇಶ, ಮಕ್ಕಳು, ಕು. ಪ್ರಣತಿ, ಕು. ಸಹನಾ ಹಾಗೂ ಕುಟುಂಬವರ್ಗ

35ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ರೋಜಿಣಿ ಎ & ಮಲ್ಲಿಕಾರ್ಜುನ ಆರ್

ಶುಭ ಕೋರುವವರು: ಮಕ್ಕಳು ಮತ್ತು ಮೊಮ್ಮಕ್ಕಳು

WANTED

2 BHK FOR RENT

We need house for rent, preferably in Vijayanagar 1st, 2nd and 4th stage or Hebbal or Brindavan extension, Mysore Budget 12k to 14k.

Call: 7975269652 / 9591544080

SITE FOR SALE

40x60 West Facing
40 ft Road
Good location at
Vijaynagar 4th stage
2nd phase Mysore.

More details contact no

Call : 9845311775

ಜಮೀನು ಬೇಕಾಗಿದೆ

ಮೈಸೂರು ನಗರದಿಂದ 15 ಕಿ.ಮೀ. ವ್ಯಾಪ್ತಿಯೊಳಗೆ ಬಡಾವಣೆ ನಿರ್ಮಿಸಲು ಯೋಗ್ಯವಾದ ಜಮೀನುಳ್ಳ ಮಾಲೀಕರು ಮಾತ್ರ ಸಂಪರ್ಕಿಸಿ

8073300783 / 7411356023

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

MAHENDRA DEVELOPERS

Muda & Huda Approved Sites & House for sale
Vajamangala, Nagawala Hunsuru, Devagalli

8123387555
7259971444

URGENT SALE

Commercial site 45x60 on 60ft road for sale in KBL Gardenia layout. Attached to vijayanagara 4th stage.
Market price is 1.31Cr., Selling for just 1.10 Cr.

Call: 8884616461 / 7975269652

4ನೇ ವರ್ಷದ ಸವಿನೆನಪು



ಶ್ರೀ. ಹೆಚ್. ಬಸಪ್ಪನವರು

ಮೈಸೂರು ತಾ॥ ಇಲವಾಲ ಹೋಬಳಿ, ಬೊಮ್ಮೇನಹಳ್ಳಿ

"ನೀವು ನಮ್ಮನ್ನಗಲಿದರೂ ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗ"

ಶ್ರೀಮತಿ ಲಕ್ಷ್ಮಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು, ಗ್ರಾಮಸ್ಥರು ಹಾಗೂ ಬಂಧುಮಿತ್ರರು.

ಪುಣ್ಯ ಸ್ಮರಣೆಗೆ
ನಾಲ್ಕು ವರ್ಷ
ನಿರ್ಮಲ ನೆನಪಿಗೆ
ಹಸಿರ ಸ್ಪರ್ಷ



ಬೆಳಗಲು ನೀ ಬರುವೆಯೆಂದು
ಹಣತೆ ಕಾಯುತ್ತಿದೆ
ಬಂದು ಹಣತೆ ಹಚ್ಚಿಬಿಡು
ದೀಪದ ತೋರಣ ಕಟ್ಟಿಬಿಡು
ಜೀವವೂ ನೀನೆ ಬೆಳಕೂ ನೀನೆ
ಕತ್ತಲು ಗೆಲ್ಲುವ ಜ್ಯೋತಿಯೂ ನೀನೆ
ನೀ ಮರೆಯದ ದೀಪಾವಳಿ....

| ದಿ. ಶ್ರೀಮತಿ ನಿರ್ಮಲ ರಘು

" ನಿನ್ನ ತಪಸ್ವಿ ಬದುಕು
ನಮ್ಮ ಬದುಕಿಗೆ ಬೆಳಕು..."

ದಿನಾಂಕ : 18-05-2025 ರಂದು 10.30 ಕ್ಕೆ

'ಸ್ಮರಣೆ : ನಮನ'

ಸ್ಥಳ : ನಿರ್ಮಲ ಧಾಮ, (ವಿಮಾನ ನಿಲ್ದಾಣದ ಟೋಲ್ ಬಳಿ)
ನಂಜನಗೂಡು ರಸ್ತೆ

ಆರ್ ರಘು
ಆರ್ ಕೌಟಿಲ್ಯ
ಶ್ರೀಮತಿ ಆರ್ ವರ್ಣಿಕ ಮತ್ತು ವೆಂಕಟೇಶ್ ಪ್ರಸಾದ್
ಮತ್ತು ಬಂಧು ಬಳಗ

ಉಚಿತ ತರಬೇತಿ ಕಾರ್ಯಕ್ರಮಗಳು

BRBNMPL

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿ., ಮೈಸೂರು

ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (CIPET), ಮೈಸೂರು

सि पे ट CIPET

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು 2024–25ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯಡಿ ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, (ಸಿಪೆಟ್) – ಸೆಂಟರ್ ಫಾರ್ ಸ್ಕಿಲ್ಲಿಂಗ್ ಅಂಡ್ ಟೆಕ್ನಿಕಲ್ ಸಪೋರ್ಟ್ ಮೂಲಕ 03 ತಿಂಗಳ ಉಚಿತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ 150 ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಿದೆ. ತರಬೇತಿ ಹಾಗೂ ಅರ್ಹತೆಗಳ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಮಂಜೂರಾದ ಸಂಖ್ಯೆ	ಅವಧಿ	ವಿದ್ಯಾರ್ಹತೆ
ಸಹಾಯಕ ಯಂತ್ರ ನಿರ್ವಾಹಕರು ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ ಮೆಷಿನ್ (MoA-PP)	75	03 ತಿಂಗಳು	8ನೇ ತರಗತಿ (ಪಾಸ್) ಮೇಲ್ಪಟ್ಟು
ಸಹಾಯಕ ಯಂತ್ರ ನಿರ್ವಾಹಕರು ಇಂಜೆಕ್ಷನ್ ಮೌಲ್ಡಿಂಗ್ ಮೆಷಿನ್ (MoA-IM)	31		
ವಯೋಮಿತಿ: General / EWS: 18-30, OBC: 18-33, SC/ST: 18-35 ವರ್ಷಗಳು			

ಕಾರ್ಯಕ್ರಮದ ವಿಶೇಷತೆಗಳು:

- ತಿಂಗಳಿಗೆ 1000/– ರೂಪಾಯಿ ಶಿಷ್ಯವೇತನ ನೀಡಲಾಗುವುದು
- ಉದ್ಯೋಗಾವಕಾಶ ಕಲ್ಪಿಸಿ ಕೊಡಲಾಗುವುದು
- Uniform, Shoes, Course Materials ಮತ್ತು Training Kit ಗಳನ್ನೂ ಉಚಿತವಾಗಿ ನೀಡಲಾಗುವುದು
- ತರಬೇತಿಯನ್ನು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಅನುಸಾರ ನೀಡಲಿದ್ದು NCVET-Skill India Training Certificate ನೀಡಲಾಗುವುದು

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಸಂಭಂದಿಸಿದ ದಾಖಲೆ, ಆಧಾರ್ ಪ್ರತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ (ಮೂಲ ಮತ್ತು ಪ್ರತಿ) ಮತ್ತು 06 ಕಲರ್ ಫೋಟೋಗಳೊಂದಿಗೆ ನೇರ ದಾಖಲಾತಿಗೆ ದಿನಾಂಕ 19–05–2025 ರಿಂದ ಕೆಳಕಂಡ ವಿಳಾಸಕ್ಕೆ ಹಾಜರಾಗಲು ಸೂಚಿಸಿದೆ

ತರಬೇತಿ ಸಂಸ್ಥೆಯ ವಿಳಾಸ : ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, 437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು - 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 93807 56024, 98865 18246, 97417 19645

NIE FIRST GRADE COLLEGE

Managed by NIE Society (Regd.)
(Affiliated to University of Mysore)
#65, Vishveshwaranagar, Mysore-570008
Ph : 0821-2489676 | Website : www.niefgc.ac.in
E-mail : info@niefgc.ac.in , niefgc@gmail.com

Estd : 1946



ADMISSION NOTIFICATION : 2025-26

As per the UGC Regulations and AICTE norms

PROGRAMS OFFERED

- **B.Sc-Bachelor of Science**
  Physics, Mathematics and Computer Science [PMCs]
  Electronics, Mathematics and Computer Science [EMCs]
- **BCA - Bachelor of Computer Application**
- **B.Com - Bachelor of Commerce**
- **BBA - Bachelor of Business Administration**

Online Applications / Registrations / Admissions are made available in the college website.

Online admission link: https//uucms.karnataka.gov.in

Dr. Gopalkrishne Urs R
Principal

Sri. Udayshankar S B
Hon. Secretary



ಮೈಸೂರು ಮಿತ್ರ

ಸೈನಿಕರ ಅಪಮಾನ ಮಾಡಿದ ಶಾಸಕ ಕೊತ್ತನೂರು ಮಂಜುನಾಥ್ ವಜಾಕ್ಕೆ ಆಗ್ರಹ


ಸಿ.ಎನ್.ಮಂಜೇಗೌಡ


ಮೈಸೂರು,ಮೇ17–ದೇಶದ ಸ್ವಾಭಿಮಾನ, ಘನತೆ ಮತ್ತು ಸಾರ್ವಭೌಮತೆ ಸಂಕೇತವಾದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಬಗ್ಗೆ ಸ್ವಲ್ಪವೂ ಗೌರವ ಇಲ್ಲದೆ ನಾಲಿಗೆ ಹರಿಬಿಟ್ಟಿರುವ ಕೋಲಾರದ ಕಾಂಗ್ರೆಸ್ ಶಾಸಕ ಕೊತ್ತನೂರು ಮಂಜುನಾಥ್ ಅವರನ್ನು ಕಾಂಗ್ರೆಸ್ ಪಕ್ಷ ತಕ್ಷಣ ಪಕ್ಷದಿಂದ ವಜಾ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆಗ್ರಹಿಸಿದ್ದಾರೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಾರತೀಯ ಮಹಿಳೆಯರ ಕುಂಕುಮ ಅಳಿಸಿದ ಉಗ್ರರ ರಾಕ್ಷಸೀ ಕೃತ್ಯಕ್ಕೆ ತಕ್ಕ ಎದಿರೇಟು ನೀಡಲು ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆಸಲಾಗಿದೆ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಅಂತದ್ದರಲ್ಲಿ ಈ ಶಾಸಕರು ಸ್ವಲ್ಪವೂ ಮಾನವೀಯತೆಯೇ ಇಲ್ಲದೆ ಬೇಕಾಬಿಟ್ಟಿ ನಾಲಿಗೆ ಹರಿಬಿಟ್ಟಿದ್ದಾರೆ. ಈ ಕಾಂಗ್ರೆಸ್ ಶಾಸಕರಿಗೆ ಮಾನ ಮರ್ಯಾದೆ ಇದೆಯೇ ಎಂದು ಅವರು ಕೆಂಡಕಾರಿದ್ದಾರೆ.

ಸೈನಿಕರನ್ನು ಹೊತ್ತ ನಾಲ್ಕು ವಿಮಾನ ಹೋಗಿ ಬಾಂಬ್ ಹಾಕಿ ಬಂದರೆ ತಕ್ಕ ಪಾಠ ಹೇಗಾಗುತ್ತೆ? ಎಂದು ಕೇಳಿರುವ ಮಂಜುನಾಥ್ ನಿಲುವನ್ನು ಕಾಂಗ್ರೆಸ್ ಪಕ್ಷ ಸಮರ್ಥಿಸುತ್ತದೆಯೇ? ಇದು ಕಾಂಗ್ರೆಸ್ ಪಕ್ಷದ ನಿಲುವಾಗಿದೆಯೇ ಎಂದು ಶರವಣ ಪ್ರಶ್ನಿಸಿದ್ದಾರೆ. ಉಗ್ರರ ಪೈಶಾಚಿಕ ಕೃತ್ಯದಿಂದ ತಮ್ಮ ಪತಿ, ಅಪ್ಪ, ಇಲ್ಲವೇ ಸಹೋದರರನ್ನು ಕಳೆದುಕೊಂಡ ಕುಟುಂಬಗಳ ನೋವು ಈ ಶಾಸಕರಿಗೆ ಗೊತ್ತಾ? ಅಮೂಲ್ಯ ಜೀವಗಳನ್ನು ಈ ಶಾಸಕ ತಂದುಕೊಡುತ್ತಾರಾ, ಕಾಂಗ್ರೆಸ್ ಪಕ್ಷ ಈ ಬಗ್ಗೆ ಏನು ಹೇಳುತ್ತೆ? ಎಂದು ಪ್ರಶ್ನಿಸಿದ್ದಾರೆ.

ಕರಾವಳಿಯಲ್ಲಿ ನಡೆಯುತ್ತಿರುವ ಹಿಂಸಾಚಾರ, ಸರಣಿ ಕೊಲೆಗಳನ್ನು ನೋಡಿದರೆ ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ನೋಡಿಕೊಳ್ಳುವ ತಾಕತ್ತು ಈ ಸರಕಾರಕ್ಕೆ ಇಲ್ಲ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಇಲ್ಲೇ ಗುಪ್ತದಳ ವಿಫಲವಾಗಿದೆ. ಅಂತದ್ದರಲ್ಲಿ ಈ ಕಾಂಗ್ರೆಸ್ ಶಾಸಕರು ಸೇನೆಯ ಬಗ್ಗೆ ಮಾತಾಡಲು ಯಾವ ನೈತಿಕತೆ ಇದೆ? ಎಂದು ಪ್ರಶ್ನೆ ಮಾಡಿದ್ದಾರೆ. ಸೈನಿಕರನ್ನು ಅಪಮಾನ ಮಾಡಿರುವ ಸಿಂಧೂರ್ ಕಾರ್ಯಾಚರಣೆಯನ್ನು ಮಾಡಿ ಗೇಲಿ ಮಾಡಿರುವ ಈ ಶಾಸಕರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ

ಹುಟ್ಟುಹಬ್ಬದ ಶುಭಾಶಯ...


ಹುಟ್ಟುಹಬ್ಬ ಆಚರಿಸಿಕೊಂಡ ಚಾಮುಂಡಿಬೆಟ್ಟದ ಶ್ರೀಧರ್ ನಾಯಕ್ ಅವರಿಗೆ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ವತಿಯಿಂದ ಶುಭಾಶಯ ಕೋರಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ, ಮುಖಂಡರಾದ ಪ್ರಭಾಕರ್ ಹುಣಸೂರು, ರಾಜು ಮಾರ್ಕೆಟ್, ಸುರೇಶ ಕುಮಾರಬೀಡು ಇನ್ನಿತರರು ಉಪಸ್ಥಿತರಿದ್ದರು.

ಡಿಜಿಟಲ್ ಸನ್ನಿವೇಶದ ಸಂವಹನವು ಲಿಂಗ ತಟಸ್ಥ ವೇದಿಕೆ

ಕೇಂದ್ರ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್


ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ತಾಂತ್ರಿಕ ಉಪನ್ಯಾಸ ನೀಡಿದರು.

ಮೈಸೂರು,ಮೇ 17(ಪಿಎಂ)– ಡಿಜಿಟಲ್ ಸನ್ನಿವೇಶದಲ್ಲಿ ಸಂವಹನವು ಲಿಂಗ ತಟಸ್ಥ ವೇದಿಕೆಯಾಗಿದ್ದು, ಅದಾಗ್ಯೂ ಮಹಿಳೆಯರಿಗೆ ಸಂವಹನ ಕೊರತೆ ಇದೆಯೆಂದು ಕಂಡು ಬಂದಲ್ಲಿ ಅದಕ್ಕೆ ಅವಕಾಶ ಕಲ್ಪಿಸಲೂಬಹುದು ಎಂದು ಕೇಂದ್ರ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಹೇಳಿದರು.

ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ತಾಂತ್ರಿಕ ಉಪನ್ಯಾಸದಲ್ಲಿ 'ಡಿಜಿಟಲ್ ರೂಪಾಂತರದಲ್ಲಿ ಲಿಂಗ ಸಮಾನತೆ' ಕುರಿತು ಅವರು ಮಾತನಾಡಿದರು.

ಡಿಜಿಟಲ್ ಸನ್ನಿವೇಶದಲ್ಲಿ ಲಿಂಗ ಸಮಾನತೆ ಮೂಡಲು ಸಂವಹನ ಸಾಧನಗಳು ಕೈಗೆಟಕುವಂತೆ ಮಾಡುವುದು ಮುಖ್ಯ ಪಾತ್ರ ವಹಿಸುತ್ತದೆ. ಖರೀದಿಸುವ ಸಾಮರ್ಥ್ಯವು ಪುರುಷರು ಹಾಗೂ ಮಹಿಳೆಯರಲ್ಲಿ ಬೇರೆ ಬೇರೆಯಾಗಿದೆ. ಮಹಿಳೆಯರಿಗೆ ಸಂವಹನ ಸಾಧನಗಳು ಸುಲಭವಾಗಿ ಲಭ್ಯವಾಗಲು ಬಸ್ ಪ್ರಯಾಣ ಉಚಿತವಾಗಿ ಕೊಟ್ಟಂತೆ ಮೊಬೈಲ್ ಸಹ ಕೊಡಬಹುದು ಎಂದರು.

ಭಾರತದಲ್ಲಿ ಪ್ರಾಚೀನ ಕಾಲದಲ್ಲೂ ದೂರಸಂಪರ್ಕ ಮತ್ತು ಸಂವಹನ ವ್ಯವಸ್ಥೆಯು ಉತ್ತಮವಾಗಿತ್ತು. ವೇದಗಳ ಕಾಲದಲ್ಲಿ ಶೃತಿಯು ಸಂವಹನದ ಮಾಧ್ಯಮ ಆಗಿತ್ತು. ಸ್ಮೃತಿಯು ಅದನ್ನು ಸಂಗ್ರಹಿಸುತಿತ್ತು. ಕರ್ನಾಟಕದಲ್ಲಿ 9ನೇ ಶತಮಾನದಲ್ಲಿ ಜೈನ ಮುನಿ ಕುಮುದೇಂದು ರಚಿಸಿದ 'ಸಿರಿ ಭೂ ವಲಯ' ಕೃತಿಯಲ್ಲಿ ಸಂವಹನ ಕೋಡಿಂಗ್ ಪ್ರಯೋಗ ನಡೆದಿತ್ತು. ಭಾರತದಲ್ಲಿ ಈಚೆಗೆ ದೂರಸಂಪರ್ಕ ವಿಷಯದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಿವೆ. ನಮ್ಮ ಡಾಟಾ ವ್ಯವಸ್ಥೆ ಬದಲಾಗಿದ್ದು, ಇನ್ನಷ್ಟು ನಿಖರ ಸಂವಹನ ಸಾಧ್ಯವಾಗಿದೆ ಎಂದು ಸಿ.ಎ.ಗೋಪಿನಾಥ್ ಹೇಳಿದರು.

ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಆರ್.ದೀಪು, ಗೌರವ ಕಾರ್ಯದರ್ಶಿ ಎಸ್.ಎ.ಮೋಹನ್ ಕೃಷ್ಣ, ಕಾರ್ಯಕ್ರಮ ಸಂಚಾಲಕ ಕೆ.ಬಿ.ಭಾಸ್ಕರ್, ತಾಂತ್ರಿಕ ಚಟುವಟಿಕೆಗಳ ಸಂಚಾಲಕ ಬಿ.ಎಸ್.ಪ್ರಭಾಕರ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಆಪರೇಷನ್ ಸಿಂಧೂರ

ಇಸ್ಲಾಮಾಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ಅವರು ಮಾತನಾಡುತ್ತಾ, 'ಆಪರೇಷನ್ ಸಿಂಧೂರ್' ಯಶಸ್ಸನ್ನು ಒಪ್ಪಿಕೊಂಡಿದ್ದಾರೆ. ಮೇ 10ರಂದು ಭಾರತೀಯ ಖಂಡಾಂತರ ಕ್ಷಿಪಣಿಗಳು ನೂರ್‌ಖಾನ್ ವಾಯುನೆಲೆ ಸೇರಿದಂತೆ ಹಲವು ಸ್ಥಳಗಳನ್ನು ಧ್ವಂಸಗೊಳಿಸಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಈ ಕುರಿತು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮಾತನಾಡಿರುವ ವಿಡಿಯೋ ಸೋಷಿಯಲ್ ಮೀಡಿಯಾಗಳಲ್ಲೂ ಹರಿದಾಡುತ್ತಿದೆ.

ವೈರಲ್ ವಿಡಿಯೋನಲ್ಲಿ ಏನಿದೆ: ಇಸ್ಲಾಮಾಬಾದ್‌ನ ಸಮಾರಂಭದಲ್ಲಿ ಮಾತನಾಡುವ ಶೆಹಬಾಜ್ ಷರೀಫ್, ಮೇ 9 ಮತ್ತು 10ರ ಮಧ್ಯರಾತ್ರಿ 2.30ರ ಸುಮಾರಿಗೆ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ನನಗೆ ಫೋನ್‌ನಲ್ಲಿ ಸುರಕ್ಷಿತವಾಗಿರುವಂತೆ ಹೇಳಿದ್ದರು. 'ಸಾಹಿಬ್ ಭಾರತವು ತನ್ನ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾಯಿಸಿದೆ. ಅದರಲ್ಲಿ ಒಂದು ನೂರ್‌ಖಾನ್ ವಾಯುನೆಲೆಯ ಮೇಲೆ ಮತ್ತೆ ಕೆಲವು ಇತರ ಪ್ರದೇಶಗಳಲ್ಲಿ ಬಿದ್ದಿವೆ. ನಮ್ಮ ವಾಯುಪಡೆಯು ನಮ್ಮ ದೇಶವನ್ನು ರಕ್ಷಿಸಲು ಸ್ಥಳೀಯ ತಂತ್ರಜ್ಞಾನವನ್ನು ಬಳಸಿತು. ಜೊತೆಗೆ ಚೀನೀ ಯುದ್ಧ ವಿಮಾನಗಳಲ್ಲಿ ಆಧುನಿಕ ಗ್ಯಾಜೆಟ್‌ಗಳು ಮತ್ತು ತಂತ್ರಜ್ಞಾನವನ್ನೂ ಬಳಸಿದೆ. ನೀವು ಸುರಕ್ಷಿತ ಸ್ಥಳದಲ್ಲಿರಿ ಎಂದು ಎಚ್ಚರಿಸಿದ್ದರು ಎಂಬುದಾಗಿ ಪಾಕ್ ಪ್ರಧಾನಿ ಹೇಳಿದ್ದಾರೆ.

ನೂರ್‌ಖಾನ್ ವಾಯುನೆಲೆ ಪಾಕ್‌ನ ಹೃದಯವಿದ್ದಂತೆ. ಇದು ಪಾಕಿಸ್ತಾನದ ಉನ್ನತ ಮಟ್ಟದ ಮಿಲಿಟರಿ ಸೌಲಭ್ಯ ಹೊಂದಿರುವ ಪ್ರಮುಖ ಕೇಂದ್ರವಾಗಿತ್ತು. ದೇಶದ ಉನ್ನತ ವಿವಿಐಪಿಗಳು ವಾಯು ಸಾರಿಗೆಗಾಗಿ ಇದನ್ನ ಬಳಸುತ್ತಾರೆ.

ವೈದ್ಯಕೀಯ ಶುಲ್ಕ ಹೆಚ್ಚಳವಿಲ್ಲ

ರಾಜ್ಯ ಸರ್ಕಾರ ಕಳೆದ ವರ್ಷ ಶೇ.10ರಷ್ಟು ಹೆಚ್ಚಳಕ್ಕೆ ಅನುಮತಿ ನೀಡಿತ್ತು. ಆದರೆ ಈ ವರ್ಷ ಅದಕ್ಕೆ ಅವಕಾಶವಿಲ್ಲ ಎಂದು ಸಚಿವರು ತಿಳಿಸಿದ್ದಾರೆ. ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದಾಗ ಕೂಡಲೇ ಪ್ರತಿಕ್ರಿಯೆ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಶರಣ್ ಪ್ರಕಾಶ್ ಪಾಟೀಲ್, ಕಳೆದ ವರ್ಷ ಶೇ.10ರಷ್ಟು ಶುಲ್ಕ ಹೆಚ್ಚಳವಾಗಿತ್ತು. ಈ ವರ್ಷದಲ್ಲಿ ಯಾವುದೇ ಹೆಚ್ಚಳವಿಲ್ಲ. ಈ ಕುರಿತು ಒಪ್ಪಂದಕ್ಕೆ ಅತೀ ಶೀಘ್ರದಲ್ಲೇ ಸಹಿ ಹಾಕಲಾಗುವುದು ಎಂದು ಅವರು ತಿಳಿಸಿದ್ದಾರೆ.

ವೈದ್ಯರ ಕೊರತೆ ನೀಗಿಸಲು ಕ್ರಮ: ನಿವೃತ್ತಿ ವಯಸ್ಸು 65ಕ್ಕೆ ಹೆಚ್ಚಳ

ಬೆಂಗಳೂರು: ತಜ್ಞ ವೈದ್ಯರ ಕೊರತೆ ನೀಗಿಸಲು ಮುಂದಾಗಿರುವ ವೈದ್ಯಕೀಯ ಶಿಕ್ಷಣ ಇಲಾಖೆ, ಸೂಪರ್ ಸ್ಪೆಷಾಲಿಟಿ ವೈದ್ಯರ ನಿವೃತ್ತಿ ವಯಸ್ಸನ್ನು 60 ವರ್ಷದಿಂದ 65ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿದೆ. ಇಲಾಖೆಯಡಿ 22 ಸ್ವಾಯತ್ತ ವೈದ್ಯಕೀಯ ಕಾಲೇಜುಗಳು ಹಾಗೂ 10 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ಒಟ್ಟು 508 ಸೂಪರ್ ಸ್ಪೆಷಾಲಿಟಿ ಹುದ್ದೆಗಳು ಮಂಜೂರಾಗಿದ್ದು, 232 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 276 ಹುದ್ದೆಗಳು ಖಾಲಿಯಿವೆ. ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ವೈದ್ಯರ ಕೊರತೆಯಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಸಮಸ್ಯೆಯಾಗುತ್ತಿದೆ. ಆದ್ದರಿಂದ ತಜ್ಞ ವೈದ್ಯರ ವಯೋ ನಿವೃತ್ತಿ ವಯಸ್ಸನ್ನು 65ಕ್ಕೆ ಏರಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.



ಇಲಾಖೆಯು ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವ ಸಂಬಂಧ ಡಾ.ಸಿ.ಎನ್.ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಸೂಪರ್ ಸ್ಪೆಷಾಲಿಟಿ ವೈದ್ಯರ ವಯೋ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಶಿಫಾರಸು ಮಾಡಿತ್ತು.

ಸೂಪರ್ ಸ್ಪೆಷಾಲಿಟಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 232 ತಜ್ಞ ವೈದ್ಯರಲ್ಲಿ, 34 ಮಂದಿ ಪ್ರಸಕ್ತ ಸಾಲಿನಲ್ಲಿ 60 ವರ್ಷ ಪೂರ್ಣಗೊಳಿಸುತ್ತಿದ್ದಾರೆ. ಈ ವೈದ್ಯರನ್ನು ಹಾಲಿ ವೇತನ ಶ್ರೇಣಿಯಲ್ಲಿಯೇ 65ನೇ ವರ್ಷಕ್ಕೆ ನಿವೃತ್ತಿ ಹೊಂದುವವರೆಗೆ ಮುಂದುವರಿಸಬೇಕು ಎಂದು ತಿಳಿಸಲಾಗಿದೆ. ಕಾರ್ಯನಿರತ ವೈದ್ಯರು ಸೂಪರ್ ಸ್ಪೆಷಾಲಿಟಿ ಕೋರ್ಸ್ ಅನ್ನು ಪೂರ್ಣಗೊಳಿಸುವ ವೇಳೆಗೆ 40ರಿಂದ 45 ವರ್ಷಗಳನ್ನು ದಾಟಿರುತ್ತಾರೆ. ಇದರಿಂದಾಗಿ 60 ವರ್ಷಕ್ಕೆ ನಿವೃತ್ತಿ ಹೊಂದುವ ಸಮಯದಲ್ಲಿ ಕೇವಲ 15ರಿಂದ 20 ವರ್ಷಗಳು ಸೇವೆ ಸಲ್ಲಿಸಲು ಮಾತ್ರ ಸಾಧ್ಯವಾಗುತ್ತದೆ. ಅವರ ವೃತ್ತಿ ಅನುಭವವನ್ನು ಸಂಪೂರ್ಣವಾಗಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ವಯೋ ನಿವೃತ್ತಿ ವಿಸ್ತರಣೆಯಿಂದ ಸೇವಾ ಅನುಭವದ ಲಾಭ ಪಡೆಯಲು ಸಾಧ್ಯವಾಗುತ್ತದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಪಾಕಿಸ್ತಾನ, ಉಗ್ರರ ಮೇಲೆ ಕಣ್ಣು

ಇಂದು ಭಾರತದ ಬೇಹುಗಾರಿಕಾ ಉಪಗ್ರಹ ಉಡಾವಣೆ

ಶ್ರೀಹರಿಕೋಟಾ: ಗಡಿಯಲ್ಲಿ ರಾತ್ರಿ ವೇಳೆ ಕುತಂತ್ರ ಮಾಡುತ್ತಿರುವ ಪಾಕಿಸ್ತಾನಕ್ಕೆ ಬಿಸಿ ಮುಟ್ಟಿಸಲು ಭಾರತ ಈಗ ಬೇಹುಗಾರಿಕಾ ಉಪಗ್ರಹವನ್ನು ಉಡಾವಣೆ ಮಾಡುತ್ತಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ EOS-9 ರೇಡಾರ್ ಇಮೇಜಿಂಗ್ ಉಪಗ್ರಹವನ್ನು ಅಭಿವೃದ್ಧಿಪಡಿಸಿದ್ದು, ಶ್ರೀಹರಿಕೋಟಾದ ಸತೀಶ್ ಧವನ್ ಉಡಾವಣಾ ಕೇಂದ್ರದಿಂದ ಭಾನುವಾರ ಬೆಳಗ್ಗೆ 5.59ಕ್ಕೆ ಪಿಎಸ್‌ಎಲ್‌ವಿ ರಾಕೆಟ್ ಮೂಲಕ ಈ ಉಪಗ್ರಹ ನಭಕ್ಕೆ ಚಿಮ್ಮಲಿದೆ.



ಬೆಂಗಳೂರಿನಲ್ಲಿರುವ ಇಸ್ರೋದ ಯುಆರ್ ರಾವ್ ಉಪಗ್ರಹ ಕೇಂದ್ರವು ಗೂಢಚಾರ ಉಪಗ್ರವನ್ನು ನಿರ್ಮಿಸಿದೆ. ಸಿ–ಬ್ಯಾಂಡ್ ಸಿಂಥೆಟಿಕ್ ಅಪರ್ಚರ್ ರೇಡಾರ್ ಅನ್ನು ಉಪಗ್ರಹ ಹೊಂದಿದ್ದು, ಇದು ಎಲ್ಲಾ ಹವಾಮಾನ ಪರಿಸ್ಥಿತಿಗಳಲ್ಲಿ ಮತ್ತು ಕಡಿಮೆ ಬೆಳಕಿನಲ್ಲೂ ಭೂಮಿಯ ಮೇಲ್ಮೈಯ ಹೆಚ್ಚಿನ ರೆಸಲ್ಯೂಶನ್ ಚಿತ್ರಗಳನ್ನು ಸೆರೆಹಿಡಿಯಲು ಅನುವು ಮಾಡಿಕೊಡುತ್ತದೆ.

ಈಗಾಗಲೇ ಬಾಹ್ಯಾಕಾಶಕ್ಕೆ ಭಾರತ ಹಾರಿಸಿದ 57ಕ್ಕೂ ಹೆಚ್ಚು ಉಪಗ್ರಹಗಳ ಸಮೂಹಕ್ಕೆ EOS-9 ಸೇರ್ಪಡೆಯಾಗಲಿದೆ. ಇವುಗಳಲ್ಲಿ ಕಕ್ಷೆಯಲ್ಲಿರುವ ನಾಲ್ಕು ರೇಡಾರ್ ಉಪಗ್ರಹಗಳು ಸೇರಿವೆ.

ಉಪಗ್ರಹದ ವಿಶೇಷತೆ ಏನು: ಸಾಧಾರಣವಾಗಿ ಮೋಡಗಳು, ಬಿರುಗಾಳಿ, ರಾತ್ರಿಯ ವೇಳೆ ಹೆಚ್ಚಿನ ಉಪಗ್ರಹಗಳಿಗೆ ಸರಿಯಾಗಿ ಚಿತ್ರಗಳನ್ನು ಸೆರೆ ಹಿಡಿಯಲು ಸಾಧ್ಯವಾಗುವುದಿಲ್ಲ. ಆದರೆ ಈ ಉಪಗ್ರಹ ಮೋಡಗಳು, ಮಳೆ, ಮಂಜು ಸೇರಿದಂತೆ ಎಲ್ಲಾ ರೀತಿಯ ಹವಾಮಾನದಲ್ಲೂ ಹಗಲು ಮತ್ತು ರಾತ್ರಿ ಸ್ಪಷ್ಟವಾದ ಚಿತ್ರಗಳನ್ನು ಸೆರೆ ಹಿಡಿಯುವ ಸಾಮರ್ಥ್ಯ ಹೊಂದಿದೆ. EOS-09ನಲ್ಲಿರುವ Synthetic Aperture Radar ಎಷ್ಟು ಶಕ್ತಿಶಾಲಿ ಎಂದರೆ ಭೂ ಪ್ರದೇಶ, ಸಸ್ಯಗಳು ಮತ್ತು ಮಾನವ ನಿರ್ಮಿತ ಡೇರೆಗಳನ್ನು ಸಹ ವರ್ಗೀಕರಣ ಮಾಡಿ ಫಲಿತಾಂಶ ನೀಡುತ್ತದೆ. ಹೀಗಾಗಿ ಇನ್ನು ಮುಂದೆ ಗಡಿಯಲ್ಲಿ ಯಾವುದೇ ಸಮಯದಲ್ಲಿ ಅನುಮಾನಾಸ್ಪದ ಚಟುವಟಿಕೆ ನಡೆದರೂ ಅದರ ಸಂಪೂರ್ಣ ಚಿತ್ರಗಳು ಕ್ಯಾಮೆರಾದಲ್ಲಿ ಸೆರೆಯಾಗಲಿದೆ.

10ರಿಂದ 225 ಕಿಮೀ ವರೆಗಿನ ವಿಶಾಲವಾದ ಜಾಗಗಳನ್ನು ಸ್ಕ್ಯಾನ್ ಮಾಡುತ್ತದೆ. ದೊಡ್ಡ ಪ್ರಮಾಣದ ವಿಪತ್ತು ನಡೆದಾಗ ಉದಾಹರಣೆ ಪ್ರವಾಹ, ಚಂಡಮಾರುತಗಳು, ಭೂಕುಸಿತ ನಡೆದಾಗ ಅದರ ನೈಜ ಚಿತ್ರಣವನ್ನು ವೀಕ್ಷಿಸಬಹುದು. ಈ ಉಪಗ್ರಹ ಗಡಿ ಕಾಯುತ್ತದೆ ಎಂದು ಹೇಳಿದರೂ ತಪ್ಪಾಗಲಾರದು. ಅಕ್ರಮ ಸಮುದ್ರ ಚಟುವಟಿಕೆಯನ್ನು ಮೇಲ್ವಿಚಾರಣೆ, ತೈಲ ಸೋರಿಕೆಗಳನ್ನು ಪತ್ತೆ, ಭಾರತದ 7,500 ಕಿಮೀ ಉದ್ದದ ಕರಾವಳಿಯಲ್ಲಿ ಹಡಗುಗಳನ್ನು ಪತ್ತೆ ಹಚ್ಚುತ್ತದೆ.

ಗ್ರ್ಯಾಚ್ಯುಟಿ ಜಾರಿಗೆ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ


ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 17(ಎಂಕೆ)– ಗ್ರ್ಯಾಚ್ಯುಟಿ ಜಾರಿಗೊಳಿಸಲು ಒತ್ತಾಯಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಡಿಸಿ ಕಚೇರಿ ಎದುರು ಜಮಾವಣೆಗೊಂಡ ಸಮಿತಿ ಸದಸ್ಯರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಗ್ರ್ಯಾಚ್ಯುಟಿ ಪಾವತಿ ಕಾಯ್ದೆ 1972ರ ಅಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹರು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. 1975ರಲ್ಲಿ ಪ್ರಾರಂಭವಾದ ಐಸಿಡಿಸಿ ಯೋಜನೆಗೆ 50 ವರ್ಷವಾಗುತ್ತಿದ್ದು, 2011–12ನೇ ಸಾಲಿನಿಂದಲೇ ಅನೇಕರು ನಿವೃತ್ತರಾಗಿದ್ದು, ಅವರನ್ನೂ ಸೇರಿದಂತೆ ನಿವೃತ್ತರಿಗೆ ಗ್ರ್ಯಾಚ್ಯುಟಿ ಸೌಲಭ್ಯ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ನಿವೃತ್ತರಾಗಿರುವ ಅನೇಕರು ಮರಣ ಹೊಂದಿದ್ದಾರೆ. ಇನ್ನೂ ಕೆಲವರು ವಯೋಸಹಜ ಕಾಯಿಲೆಗೆ ತುತ್ತಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರವು ಅವರಿಗೆ ನೆರವಾಗಬೇಕಿದೆ. 2023ರ ನಂತರ ನಿವೃತ್ತರಾದವರಿಗೆ ಗ್ರ್ಯಾಚ್ಯುಟಿ ನೀಡುವ ಸರ್ಕಾರದ ನಿರ್ಧಾರವನ್ನು ಬದಲಾಯಿಸಿ, 1975ರಿಂದ ಸೇವೆಗೆ ಸೇರಿ 2011–12ರಿಂದ ನಿವೃತ್ತರಾದವರಿಗೆ ಸೌಲಭ್ಯ ದೊರಕುವಂತೆ ಮಾಡಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ, ಪ್ರಧಾನ ಕಾರ್ಯದರ್ಶಿ ಮಹದೇವಮ್ಮ, ಖಜಾಂಚಿ ಗಿರಿಜಾ ಸೇರಿದಂತೆ ಮತ್ತಿತರರಿದ್ದರು.


ಒಳ ಮೀಸಲಾತಿ ಜಾತಿ ಸಮೀಕ್ಷೆ ವೇಳೆ 'ಮಾದಿಗ' ಎಂದು ಬರೆಸಿ

ಮಾಜಿ ಸಚಿವ ಹೆಚ್.ಆಂಜನೇಯ ಕರೆ

ಮೈಸೂರು, ಮೇ17(ಜಿಎ)–ಮಾದಿಗ ಸಮುದಾಯ ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ, ಮೀಸಲಾತಿ, ಉದ್ಯೋಗ, ಶಿಕ್ಷಣ ಸೌಲಭ್ಯವನ್ನು ಪಡೆಯುವುದಕ್ಕಾಗಿ ಒಳಮೀಸಲಾತಿ ಅಗತ್ಯವಾಗಿರುವುದರಿಂದ ಒಳ ಮೀಸಲಾತಿ ಜಾತಿ ಸಮೀಕ್ಷೆಯಲ್ಲಿ ಮಾದಿಗ ಎಂದು ಬರೆಯಲು ಯಾವುದೇ ಕಾರಣಕ್ಕೂ ಹಿಂಜರಿಕೆ ಇಟ್ಟುಕೊಳ್ಳಬಾರದು ಎಂದು ಮಾಜಿ ಸಚಿವ ಹೆಚ್.ಆಂಜನೇಯ ಕರೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆಯಲ್ಲಿ ನವಜಾತ ಶಿಶುವನ್ನೂ ಜಾತಿ ಗಣತಿಗೆ ಸೇರಿಸಬೇಕು. ಯಾರೊಬ್ಬರೂ ಜಾತಿಗಣತಿಯಿಂದ ಹೊರಗುಳಿಯಬಾರದು. ಮಾದಿಗ ಸಮುದಾಯದವರು ಯಾವುದೇ ಕಾರಣಕ್ಕೂ ಜಾತಿ ಸಮೀಕ್ಷೆಯಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಬರೆಸಬಾರದು. ಒಂದು ವೇಳೆ ಹಾಗೆ ಬರೆಸಿದರೂ ಸಹ ಉಪಜಾತಿ ಕಾಲಂನಲ್ಲಿ 'ಮಾದಿಗ' ಎಂದು ಕಡ್ಡಾಯವಾಗಿ ಬರೆಯಿಸಬೇಕು ಎಂದು ತಿಳಿಸಿದರು.

ಎಸ್‌ಸಿ ಕೆಟಗರಿಯಲ್ಲಿ 101 ಜಾತಿಗಳಿವೆ. ಈ ಕೆಟಗರಿಗೆ ಸೇರಿದ ಮಾದಿಗ ಸಮುದಾಯ ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಆದಕಾರಣ ಪ್ರಬಲ ಸಮುದಾಯಗಳ ನಡುವೆ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಅಗತ್ಯವಿದೆ. ಒಳ ಮೀಸಲಾತಿ ಜಾರಿಗಾಗಿ ಮೂರು ದಶಕಗಳಿಂದ ಸುದೀರ್ಘ ಹೋರಾಟ ನಡೆದಿದೆ. ಇದು ಈಗ ಮುಖ್ಯವಲ್ಲ ಆದರೆ, ಜಾತಿ ಸಮೀಕ್ಷೆಯಲ್ಲಿ ಮಾದಿಗ ಎಂದು ಬರೆಯಿಸುವ ಮೂಲಕ ತಮಗೆ ನ್ಯಾಯಯುತವಾಗಿ ದೊರೆಯಬೇಕಾದ ಪಾಲನ್ನು ಪಡೆದುಕೊಳ್ಳುವುದು ಮುಖ್ಯವಾಗಿದೆ ಎಂದರು.



ಸುಪ್ರೀಂಕೋರ್ಟ್ ಒಳ ಮೀಸಲಾತಿಯನ್ನು ಕೊಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ತೀರ್ಪು ನೀಡಿತ್ತು. ಅದರನ್ವಯ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೆ ಮುಂದಾಗಿತ್ತು. ಆದರೆ ಹೊಲೆಯ, ಮಾದಿಗ ಎರಡೂ ಸಮುದಾಯಗಳು ಸಹ ಆದಿ ಕರ್ನಾಟಕ ಎಂದು ನಮೂದಿಸಿದ್ದವು. ಇದರಿಂದ ಪರಿಶಿಷ್ಟ ಜಾತಿ ಕಾಲಂಗೆ ಸೇರಿದ ಸಮುದಾಯಗಳ ಜನಸಂಖ್ಯೆ ನಿಖರವಾದ ದತ್ತಾಂಶ ಲಭ್ಯವಿರಲಿಲ್ಲ. ಪರಿಣಾಮವಾಗಿ ಒಳಮೀಸಲಾತಿ ಜಾರಿಗೊಳಿಸಲು ಗೊಂದಲ ಉಂಟಾಗಿತ್ತು. ಆದ್ದರಿಂದ ರಾಜ್ಯ ಸರ್ಕಾರ ಪರಿಶಿಷ್ಟ ಸಮುದಾಯಗಳ ನಿಖರವಾದ ಅಂಕಿ ಅಂಶಗಳನ್ನು ಪಡೆದು ವೈಜ್ಞಾನಿಕವಾಗಿ ಒಳ ಮೀಸಲಾತಿಯನ್ನು ಜಾರಿಗೆ ತರಲು ಜಾತಿ ಸಮೀಕ್ಷೆ ನಡೆಸುತ್ತಿದೆ ಎಂದರು.

ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಯಾಗುವವರೆವಿಗೂ ಯಾವುದೇ ಸರ್ಕಾರಿ ಹುದ್ದೆಯನ್ನೂ ನೇಮಿಸುವುದಿಲ್ಲ. ಒಳ ಮೀಸಲಾತಿ ಜಾರಿಯಾದ ನಂತರವೇ ಸರ್ಕಾರ ಹುದ್ದೆಗಳನ್ನು ನೇಮಕ ಮಾಡುತ್ತದೆ. ಪರಿಶಿಷ್ಟ ಸಮುದಾಯಗಳ ನಿಖರವಾದ ದತ್ತಾಂಶಗಳನ್ನು ಸಂಗ್ರಹಿಸಿ ಬೇಕಿರುವ ಕಾರಣದಿಂದ ಜಾತಿ ಸಮೀಕ್ಷೆ ನಿಧಾನಗತಿಯಲ್ಲಿ ಸಾಗುತ್ತಿದೆ. ಸಾಮಾಜಿಕ ನ್ಯಾಯ ಪರ ಸಿಎಂ ಸಿದ್ದರಾಮಯ್ಯ ಇರುವುದರಿಂದ ಆದಷ್ಟು ಬೇಗ ಜಾರಿಯಾಗಿ ಶೋಷಿತ ಸಮುದಾಯಗಳಿಗೆ ನ್ಯಾಯ ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೇಡ ಜಂಗಮ ಸಮುದಾಯವನ್ನು ಸ್ಪೃಶ್ಯ ಸಮುದಾಯವಾಗಿದೆ. ಆದ್ದರಿಂದ ಬೇಡ ಜಂಗಮರನ್ನು ಎಸ್‌ಸಿ ಮೀಸಲಾತಿ ಪಟ್ಟಿಯಿಂದ ರಾಜ್ಯ ಸರ್ಕಾರ ತೆಗೆದು ಹಾಕಬೇಕು ಎಂದು ಅವರು ಒತ್ತಾಯಿಸಿ, ಪರಿಶಿಷ್ಟ ಜಾತಿಗೆ ಸೇರದ ಸಮುದಾಯದವರು ಪರಿಶಿಷ್ಟ ಜಾತಿ ಗಣತಿಯಲ್ಲಿ ತಮ್ಮ ಹೆಸರು ನೋಂದಾಯಿಸುವುದು ಕಂಡು ಬಂದರೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸದಸ್ಯ ಧರ್ಮಸೇನಾ, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಮಾಜಿ ಮೇಯರ್ ನಾರಾಯಣ, ವಕೀಲ ರಂಗನಾಥ್ ಪ್ರಸಾದ್ ಮುತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಮೇ 17–ಅಗತ್ಯ ಮತ್ತು ಪ್ರತಿಭೆಯ ಆಧಾರದ ಮೇಲೆ ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಿಗೆ ಸೇರಿರುವ ಹೆಬ್ಬಾರ್ ಶ್ರೀ ವೈಷ್ಣವ ಪಂಗಡದ ವಿದ್ಯಾರ್ಥಿಗಳಿಂದ ಬಿ.ಇ. ಪ್ರಥಮ ವರ್ಷಕ್ಕೆ ಪ್ರವೇಶವಾಗುವ ಆಸಕ್ತರಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಗೋದಾ ಗೋವಿಂದ ಸಮಿತಿ (ಶ್ರೀ ವೈಷ್ಣವ ಸಭಾ) ಯನ್ನು ನಿರ್ವಹಿಸುತ್ತಿರುವ ಹೆಚ್.ಜಿ.ಸತ್ಯನಾರಾಯಣ ಅವರನ್ನು ಮೊಬೈಲ್ 9480194204 ಈ ಸಂಖ್ಯೆಗೆ ಸಂಜೆ 5.30ರಿಂದ 7ರವರೆಗೆ ಪ್ರವಚನ ಮಂದಿರದಲ್ಲಿ ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 05–06–2025.

ಹಾಸನ: ಪ್ರಮುಖ ರೈಲುಗಳ ಸಂಚಾರ ರದ್ದು

ಸುಬ್ರಹ್ಮಣ್ಯ, ಮಂಗಳೂರು, ಕಾರವಾರಕ್ಕೆ ಸಂಚಾರದಲ್ಲಿ ವ್ಯತ್ಯಯ



ಹಾಸನ, ಮೇ 17– ಸುರಕ್ಷತೆ ಮತ್ತು ವಿದ್ಯುದ್ದೀಕರಣ ಕಾಮಗಾರಿ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯಲ್ಲಿ ಓಡಾಡುವ ಪ್ರಮುಖ ರೈಲುಗಳ ಸಂಚಾರವನ್ನು ಕೆಲ ದಿನಗಳ ಕಾಲ ರದ್ದು ಮಾಡಿ ರೈಲ್ವೆ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಸಕಲೇಶಪುರ–ಸುಬ್ರಹ್ಮಣ್ಯ ಮಾರ್ಗದಲ್ಲಿ ಜೂನ್ 1ರಿಂದ ನವೆಂಬರ್ 1 ರವರೆಗೆ ಬಂದ್ ಆಗಲಿದ್ದು, ಮೇ 31ರಿಂದ ನವೆಂಬರ್ 1ರವರೆಗೆ ಪ್ರತಿ ಶನಿವಾರ ಸಂಚರಿಸುವ ಯಶವಂತಪುರ–ಮಂಗಳೂರು ಎಕ್ಸ್‌ಪ್ರೆಸ್ ಸಂಚಾರವನ್ನು (ರೈಲು ಸಂಖ್ಯೆ 16539) ರದ್ದು ಮಾಡಲಾಗಿದೆ. ಜೂನ್ 1ರಿಂದ ನವೆಂಬರ್ 2ರವರೆಗೆ ಪ್ರತಿ ಭಾನುವಾರ ಮಂಗಳೂರು–ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್(ರೈಲು ಸಂಖ್ಯೆ 16540), ಜೂನ್ 1ರಿಂದ ಅಕ್ಟೋಬರ್ 30ರವರೆಗೆ ಮಂಗಳವಾರ, ಗುರುವಾರ ಮತ್ತು ಭಾನುವಾರ ಸಂಚರಿಸುವ ಯಶವಂತಪುರ–ಮಂಗಳೂರು ಜಂಕ್ಷನ್ ಟ್ರೈ–ವೀಕ್ಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16575) ಮತ್ತು ಜೂನ್ 2ರಿಂದ ಅಕ್ಟೋಬರ್ 31ರವರೆಗೆ ಸೋಮವಾರ, ಬುಧವಾರ ಮತ್ತು ಶುಕ್ರವಾರ ಸಂಚರಿಸುವ ಮಂಗಳೂರು–ಯಶವಂತಪುರ ಟ್ರೈ–ವೀಕ್ಲಿ ಎಕ್ಸ್‌ಪ್ರೆಸ್ ಕೂಡ ತುರ್ತು ಕಾಮಗಾರಿಗಾಗಿ (ರೈಲು ಸಂಖ್ಯೆ 16576) ರದ್ದು ಮಾಡಲಾಗಿದೆ.

ಇದಲ್ಲದೇ ಜೂನ್ 2ರಿಂದ ಅಕ್ಟೋಬರ್ 31ರವರೆಗೆ ಸೋಮವಾರ, ಬುಧವಾರ ಮತ್ತು ಶುಕ್ರವಾರ ಸಂಚರಿಸುವ ಯಶವಂತಪುರ–ಕಾರವಾರ ಟ್ರೈ–ವೀಕ್ಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16515) ರೈಲು ಮತ್ತು ಜೂನ್ 3ರಿಂದ ನವೆಂಬರ್ 1ರವರೆಗೆ ಮಂಗಳವಾರ, ಗುರುವಾರ, ಶನಿವಾರ ಸಂಚರಿಸುವ ಕಾರವಾರ–ಯಶವಂತಪುರ ಟ್ರೈ–ವೀಕ್ಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16516) ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ.

ಇಂದು ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ: ಮ್ಯೂಸಿಯಮ್ಸ್ ಆನ್‌ವೀಲ್ ಕಾರ್ಯಕ್ರಮ

ಮೈಸೂರು, ಮೇ 17(ಆರ್‌ಕೆ)– ನಾಳೆ (ಮೇ 18) ದೇಶಾದ್ಯಂತ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು ಆಚರಿಸಲಾಗುವುದು. ಈ ದಿನದ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆಯು ಭಾನುವಾರ ಮೈಸೂರಿನಲ್ಲಿ ಗಾಲಿಗಳ ಮೇಲೆ ವಸ್ತುಸಂಗ್ರಹಾಲಯಗಳು (Wheels on Musiums) ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಭಾನುವಾರ ಬೆಳಗ್ಗೆ 9 ಗಂಟೆಗೆ ಮೈಸೂರಿನ ಇಂದಿರಾ ಗಾಂಧಿ ಮಾನವ ಸಂಗ್ರಹಾಲಯದಲ್ಲಿ ವ್ಹೀಲ್ಸ್ ಆನ್ ಮ್ಯೂಸಿಯಮ್ಸ್ ಕಾರ್ಯಕ್ರಮಕ್ಕೆ ಪಾರಂಪರಿಕ ಆಯುಕ್ತ ಎ.ದೇವರಾಜ್, ಚಾಲನೆ ನೀಡುವರು. ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಿಂದ 10ರಿಂದ 70 ವರ್ಷ ವಯಸ್ಸಿನ 130 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ

ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದಿಂದ ಎರಡು ಬಸ್ಸುಗಳಲ್ಲಿ ತೆರಳುವ ವೀಕ್ಷಕರನ್ನು ಮೈಸೂರು–ಬೆಂಗಳೂರು ಹೆದ್ದಾರಿಯ ಕಳಸ್ತವಾಡಿ ಬಳಿ ಇರುವ 'ಪಯಣ' ಕಾರು ಸಂಗ್ರಹಾಲಯಕ್ಕೆ ಕರೆದೊಯ್ದು, ವಾಪಸ್ ಬಂದು ಸಿದ್ಧಾರ್ಥ ಬಡಾವಣೆ ಬಳಿಯ ಪ್ರಾಕೃತಿಕ ವಸ್ತುಸಂಗ್ರಹಾಲಯಕ್ಕೆ ಕರೆತಂದು ಅಲ್ಲಿಂದ ಸಿಎಫ್‌ಟಿಆರ್‌ಐ ಗೇಟ್ ಎದುರು ಕೆಆರ್‌ಎಸ್ ರಸ್ತೆಯ ರೈಲು ಮ್ಯೂಸಿಯಂ ತೋರಿಸಿದ ಬಳಿಕ ಮಧ್ಯಾಹ್ನ 2.30 ಗಂಟೆಗೆ ಮರಳಿ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯಕ್ಕೆ ಕರೆತಂದು ಮ್ಯೂಸಿಯಮ್ಸ್ ಆನ್‌ವೀಲ್ ಕಾರ್ಯಕ್ರಮ ಅಂತ್ಯಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಪಾಲಿಕೆ ಆಯುಕ್ತರಿಂದ ದೊಡ್ಡ ಗಡಿಯಾರ ಸಂರಕ್ಷಣಾ ಕಾರ್ಯ ಪರಿಶೀಲನೆ

ಬಾಕಿ ಇರುವ ಅರ್ಥಿಂಗ್ ಕೆಲಸ ಪೂರ್ಣಗೊಳಿಸಲು ಸೂಚನೆ

ಮೈಸೂರು,ಮೇ 17(ಆರ್‌ಕೆ)–ಬಾಕಿ ಉಳಿದಿರುವ ಮೈಸೂರಿನ ಹೃದಯ ಭಾಗದ ಪಾರಂಪರಿಕ ದೊಡ್ಡ ಗಡಿಯಾರ (ಕ್ಲಾಕ್ ಟವರ್)ದ ಅರ್ಥಿಂಗ್ ಕೆಲಸವನ್ನು ಪೂರ್ಣಗೊಳಿಸುವಂತೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪ್ರಾಚೀನ ಇತಿಹಾಸ ಮತ್ತು ಪಾರಂಪರಿಕ ತಜ್ಞ ಪ್ರೊ. ಎನ್.ಎಸ್.ರಂಗರಾಜು ಅವರೊಂದಿಗೆ ಇತ್ತೀಚೆಗೆ ದೊಡ್ಡ ಗಡಿಯಾರ ಸಂರಕ್ಷಣಾ ಕಾರ್ಯ ಪರಿಶೀಲಿಸಿದ ಅವರು, ನವೀಕರಣ ವೇಳೆ 25 ಅಡಿ ಉದ್ದದ ಅರ್ಥಿಂಗ್ ಕಾಪರ್ ವೈರ್ ತೆಗೆದಿದ್ದು, ಅದನ್ನು ಮತ್ತೆ ಅಳವಡಿಸದಿರುವ ಬಗ್ಗೆ ಪ್ರೊ.ರಂಗರಾಜು ಅವರ ಗಮನ ಸೆಳೆದರು.



ಅರ್ಥ್ ಮಾಡದಿದ್ದರೆ ಗುಡುಗು–ಸಿಡಿಲಿಗೆ ಸ್ಮಾರಕ ಊನವಾಗುವ ಸಾಧ್ಯತೆ ಬಗ್ಗೆ ವಿವರಿಸಿದಾಗ ತಕ್ಷಣವೇ ಗುತ್ತಿಗೆದಾರನಿಂದ ಬಾಕಿ ಕೆಲಸ ಮಾಡಿಸುವಂತೆ ವಲಯ ಕಚೇರಿ–6ರ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ವೆಂಕಟೇಶ್‌ಗೆ ತಾಕೀತು ಮಾಡಿದರು.

ಹಾಗೆಯೇ ಗಡಿಯಾರದ ನಾಲ್ಕು ಮೂಲೆಗಳಲ್ಲಿದ್ದ ಗೂಟ ಒಂದು ಕಡೆ ಕಳಚಿತ್ತು. ಸಂರಕ್ಷಣಾ ಕಾಮಗಾರಿ ವೇಳೆ ಆ ಮೂರೂ ಕಡೆಯ ಗೂಟಗಳನ್ನು ತೆಗೆದಿರುವುದರಿಂದ ಗಡಿಯಾರದ ಮೂಲ ಸ್ವರೂಪ ಹಾಳಾಗಿದೆ ಮತ್ತು ಗಡಿಯಾರದ ಗಂಟೆ ಸ್ಥಗಿತಗೊಂಡು 8 ವರ್ಷಗಳು ಕಳೆದಿದ್ದರೂ ಸರಿಪಡಿಸಿಲ್ಲ ಎಂದು ಪ್ರೊರಂಗರಾಜು ತಿಳಿಸಿದರು.

ಅದನ್ನು ಖುದ್ದು ಗಮನಿಸಲು ಕಮಿಷ್ನರ್ ಆಸಿಫ್ ಅವರೇ ಏಣಿ ಸಹಾಯದಿಂದ ದೊಡ್ಡ ಗಡಿಯಾರದ ತುತ್ತ ತುದಿಗೇರಿ ಪರಿಶೀಲಿಸಿದರು. ಆ ವೇಳೆ ಅರಮನೆಗಭಿಮುಖವಾಗಿ ಇದ್ದ ಫೌಂಟನ್ ಆಕೃತಿಯೂ ವಿಕೃತವಾಗಿರುವುದು ಗೋಚರಿಸಿತು. ಅವುಗಳನ್ನು ರಿಪೇರಿ ಮಾಡಿ, ಸಂರಕ್ಷಿಸುವಂತೆ ಅವರು ನಿರ್ದೇಶನ ನೀಡಿದರು.

ಮೈಲಿಗಲ್ಲು ಮಾಯ: ದೊಡ್ಡ ಗಡಿಯಾರ ಸರ್ಕಲ್ ಬಳಿ ಅಶೋಕ ರಸ್ತೆಯಲ್ಲಿ ಈ ಹಿಂದೆ ಅಳವಡಿಸಿದ್ದ ಶೂನ್ಯ ಮೈಲಿಗಲ್ಲನ್ನು, ರಸ್ತೆ ಅಗಲೀಕರಣ ಮಾಡುವಾಗ ತೆಗೆದಿದ್ದು, ಅದನ್ನು ಮತ್ತೆ ಅಳವಡಿಸಿಲ್ಲ. ಆ ಸೊನ್ನೆ ಮೈಲಿಗಲ್ಲಿನಿಂದ ಸುತ್ತಲಿನ ಇತರ ಪ್ರದೇಶಗಳಿಗೆ ಅಂತರವನ್ನು ಲೆಕ್ಕಾಚಾರ ಮಾಡಬಹುದಾಗಿತ್ತು ಎಂದು ಪ್ರೊ.ರಂಗರಾಜು ಕಮಿಷ್ನರ್‌ಗೆ ತಿಳಿಸಿದರು.

ಈಗ ಆ ಮೈಲಿಗಲ್ಲು ಸಿಗುವುದಿಲ್ಲ. ನನ್ನ ಬಳಿ ವಿನ್ಯಾಸವಿದೆ. ಅದರಂತೆ ಹೊಸ '0' ಮೈಲಿಗಲ್ಲನ್ನು ಆ ಸ್ಥಳದಲ್ಲೇ ಅಳವಡಿಸಬೇಕು ಎಂದು ಸಲಹೆ ನೀಡಿದಾಗ ತಕ್ಷಣ ಕ್ರಮ ವಹಿಸುವಂತೆಯೂ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಮ್ಮ ಅಧಿಕಾರಿಗಳಿಗೆ ತಿಳಿಸಿದರು.

ಕ್ಷೀಣಿಸುತ್ತಿದೆ ಗೋಪುರದ ಬುನಾದಿ: ಕೆ.ಆರ್.ಸರ್ಕಲ್‌ನಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಗೋಪುರದ ಅಡಿಪಾಯದ ಕಬ್ಬಿಣದ ಸರಳುಗಳು ಮಳೆ ನೀರು ಮತ್ತು ಗಿಡಗಳಿಗೆ ಹಾಕುವ ನೀರು ಇಳಿದು ತುಕ್ಕು ಹಿಡಿಯುತ್ತಿದ್ದು, ಪಾಯ ಕ್ಷೀಣಿಸಿ ಪ್ರತಿಮೆಗೆ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಆದ್ಯತೆ ಮೇಲೆ ಅದನ್ನು ಸರಿಪಡಿಸಬೇಕೆಂದು ಪ್ರೊ. ರಂಗರಾಜು ಸಲಹೆ ನೀಡಿದರು.

ಅದನ್ನು ಖುದ್ದು ಪರಿಶೀಲಿಸಿದ ಮೈಸೂರು ನಗರಪಾಲಿಕೆ ಆಯುಕ್ತರು ಅಂದಾಜು ತಯಾರಿಸಿ, ತಕ್ಷಣ ಕಾಮಗಾರಿ ನಡೆಸುವಂತೆಯೂ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ ಅವರಿಗೆ ಸೂಚಿಸಿದರು. ದುರ್ಬಲವಾಗಿರುವ ಅಡಿಪಾಯದ ಭೀಮ್ ಅನ್ನು ಸದೃಢಗೊಳಿಸಲು ಕ್ರಮ ವಹಿಸುವಂತೆಯೂ ಅವರು ತಿಳಿಸಿದರು. ಪಾರಂಪರಿಕ ಇಲಾಖೆ ಉಪ ನಿರ್ದೇಶಕಿ ಮಂಜುಳಾ ಅವರು ಸ್ಥಳ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಸ್ಯಾನಿಟರಿ ಪ್ಯಾಡ್ ಸೂಕ್ತ ರೀತಿ ವಿಲೇವಾರಿ ಮಾಡದಿದ್ದಲ್ಲಿ ಗಂಭೀರ ಪರಿಣಾಮ

ಮೈಸೂರು, ಮೇ 17(ಎಸ್‌ಪಿಎನ್)– ಮಹಿಳೆಯರು, ಹದಿಹರೆಯದ ಹೆಣ್ಣು ಮಕ್ಕಳು ಬಳಸುವ ಸ್ಯಾನಿಟರಿ ಪ್ಯಾಡ್‌ಗಳ ತ್ಯಾಜ್ಯ ಇತ್ತೀಚಿನ ದಿನಗಳಲ್ಲಿ ಅಪಾಯಕಾರಿ ತ್ಯಾಜ್ಯವಾಗಿ ಬದಲಾಗುತ್ತಿದೆ. ಅಂತೆಯೇ ನಗರ ಪ್ರದೇಶದಲ್ಲಿ ಇದರ ನಿರ್ವಹಣೆ ಮತ್ತು ವಿಲೇವಾರಿ ಬಲುಕಷ್ಟವಾಗುತ್ತಿದೆ ಎಂದು ಜೆಎಸ್‌ಎಸ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಸೌಮ್ಯ ತೀವ್ರ ಆತಂಕ ವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ (ಸೆನೆಟ್ ಭವನ) ದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮೈಸೂರು ಹಸಿರು ದಳದ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಸುಸ್ಥಿರ ಘನತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ ಮುಟ್ಟಿನ ನೈರ್ಮಲ್ಯ' ವಿಷಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಮಹಿಳೆಯರು ಮುಟ್ಟಿನ ಬಗ್ಗೆ ಸಾರ್ವಜನಿಕವಾಗಿ ಮಾತನಾಡಲು ಇಂದಿಗೂ ನಾಚಿಕೆಪಟ್ಟುಕೊಳ್ಳುತ್ತಾರೆ. ಮಹಿಳೆಯರಲ್ಲಿ ಮುಟ್ಟು ನೈಸರ್ಗಿಕ ಕ್ರಿಯೆ. ಇದರ ನಿರ್ವಹಣೆ ಬಗ್ಗೆ ಮಾತನಾಡಲು ಸಂಕೋಚವೇಕೆ ಎಂದು ಪ್ರಶ್ನಿಸಿದ ಅವರು, ಮುಟ್ಟಿನ ನಿರ್ವಹಣೆ ಬಗ್ಗೆ ವಿದ್ಯಾವಂತ ಯುವತಿಯರಲ್ಲಿ ಅರಿವು ಬೇಕಿದೆ. ಯುವತಿಯರು ಮುಟ್ಟಾದಾಗ ಅದರ ನಿರ್ವಹಣೆಗೆ ಸ್ಯಾನಿಟರಿ ಪ್ಯಾಡ್ ಬಳಸುತ್ತಾರೆ. ಅದರ ಬಳಕೆ ನಂತರ ವಿಲೇವಾರಿ ಸಮಯದಲ್ಲಿ ಬೇಕಾಬಿಟ್ಟಿ ಬಿಸಾಡುತ್ತಾರೆ ಎಂದು ಬೇಸರ ಹೊರಹಾಕಿದರು.

ಸ್ಯಾನಿಟರಿ ಪ್ಯಾಡ್‌ಗಳು ಶೇ.75 ರಷ್ಟು ಪ್ಲಾಸ್ಟಿಕ್‌ನಿಂದ ತಯಾರಾಗುತ್ತವೆ. ಇದನ್ನು ಉಪಯೋಗಿಸಿದ ನಂತರ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ, ಮನೆಕಸ ಸಂಗ್ರಹಿಸುವ ಪೌರ ಕಾರ್ಮಿಕರಿಗೂ ಇದರ ಸೋಂಕು ತಗಲುತ್ತದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸ್ಯಾನಿಟರಿ ಪ್ಯಾಡ್ ಬಳಕೆ ಮಾಡುತ್ತಾರೆ. ಅದರ ವಿಲೇವಾರಿ ವಿಷಯದಲ್ಲಿ ಸೋಮಾರಿತನ ತೋರಿ, ಮನೆಯ ಬಾತ್‌ರೂಂ ಮೂಲಕ ವಿಲೇವಾರಿ ಮಾಡಿ, ಇಡೀ ಪ್ರದೇಶದ ಯುಜಿಡಿ ಲೈನ್ ಕಟ್ಟಿಕೊಳ್ಳುತ್ತಿರುವುದು ಈ ಕಾರಣಕ್ಕೆ ಎಂದು ಬೇಸರ ಹೊರಹಾಕಿದರು.



'ಸುಸ್ಥಿರ ಘನತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ ಮುಟ್ಟಿನ ನೈರ್ಮಲ್ಯ' ವಿಷಯದ ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು.

ನಗರ ಪ್ರದೇಶದಲ್ಲಿ ಸ್ಯಾನಿಟರಿ ಪ್ಯಾಡ್ ಉಪಯೋಗ, ಅದರ ವಿಲೇವಾರಿ ಕುರಿತು ನಾಲ್ಕನೇ ತರಗತಿಯಿಂದ ಸ್ನಾತಕೋತ್ತರ ಪದವೀಧರ ಯುವತಿಯರಿಗೆ ಜಾಗೃತಿ ಮೂಡಿಸಬೇಕು. ಹಸಿ ಕಸ, ಒಣ ಕಸದ ಜೊತೆಗೆ ಪ್ಲಾಸ್ಟಿಕ್ ಹಾಗೂ ಸ್ಯಾನಿಟರಿ ಪ್ಯಾಡ್ ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದರಿಂದ ಸಿವೇಜ್ ಫಾರಂನಲ್ಲಿ ಬೆಟ್ಟದಂತೆ ಎದ್ದುನಿಂತಿರುವ ಕಸದ ರಾಶಿಯೆ ನಮ್ಮೆದುರಿಗಿದೆ. ಮಹಿಳೆಯರು ಬಳಸುವ ಸ್ಯಾನಿಟರಿ ಪ್ಯಾಡ್, ಮಕ್ಕಳಿಗೆ ಬಳಸುವ ನ್ಯಾಪ್ಕಿನ್‌ಗಳ ಬದಲಿ ಬಳಕೆ ಬಗ್ಗೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಪ್ರೊ.ಹೆಚ್.ಪಿ.ಜ್ಯೋತಿ ಮಾತನಾಡಿ, ತಿಂಗಳಿಗೊಮ್ಮೆ ಮಹಿಳೆಯರಿಗಾಗುವ ಮುಟ್ಟು ಅವರ ಜೀವನದ ನೈಸರ್ಗಿಕ ಕ್ರಿಯೆ. ಇದರ ನಿರ್ವಹಣೆ ಕುರಿತು ಶಿಕ್ಷಿತ ಮಹಿಳೆಯರಲ್ಲಿ ಇನ್ನು ಜಾಗೃತಿ ಮೂಡದಿರುವುದು ಬೇಸರದ ಸಂಗತಿ. ಮುಟ್ಟಿನ ಸಂದರ್ಭವನ್ನು ಬಿಟ್ಟು ಜೀವನದ ಎಲ್ಲಾ ಪ್ರಸಂಗಗಳನ್ನು ಮಹಿಳೆ ಒಂಟಿಯಾಗಿ ನಿಭಾಯಿಸಬಲ್ಲಳು. ಆದರೆ, ಮುಟ್ಟಿನ ಸಂದರ್ಭ ಬಂದಾಗ ಅದರ ನಿರ್ವಹಣೆಗೆ ಸಾಕಷ್ಟು ಕಷ್ಟಪಡುತ್ತಿರುವುದು ಗೋಚರವಾಗುತ್ತಿದೆ ಎಂದರು.

ಮಹಿಳೆಯರು ಉಪಯೋಗಿಸಿದ ಸ್ಯಾನಿಟರಿ ಪ್ಯಾಡ್ ನಂತರ ಘನ ತ್ಯಾಜ್ಯ ವಸ್ತುವಾಗಿ ಮಾರ್ಪಡುತ್ತದೆ. ಇದನ್ನು ಮೂಲದಲ್ಲೇ ಸಮರ್ಪಕವಾಗಿ ಸಂಸ್ಕರಣೆ ಮಾಡದೇ ವಿಲೇವಾರಿ ಮಾಡಿದರೆ, ನಿಸರ್ಗದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದಕ್ಕೆ ಉದಾಹರಣೆ ಎಂದರೆ ಮೈಸೂರಿನ ಘನತ್ಯಾಜ್ಯ ಘಟಕದಲ್ಲಿ ಬೆಟ್ಟದಂತಿರುವ ಕಸದರಾಶಿ ಸಾಕ್ಷಿ ಎಂದರು.

ಪೌರಕಾರ್ಮಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ: ಮಹಿಳೆಯರು ಮತ್ತು ಮಕ್ಕಳಿಗಾಗಿ ಉಪಯೋಗಿಸುವ ಸ್ಯಾನಿಟರಿ ಪ್ಯಾಡ್ ಮತ್ತು ನ್ಯಾಪ್ಕಿನ್‌ಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದಿದ್ದರೆ, ಅಂತಹ ತ್ಯಾಜ್ಯವನ್ನು ಸಂಗ್ರಹಿಸುವ ಪೌರಕಾರ್ಮಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈ ಅಂಶ ನಮಗೆ ಗೊತ್ತಿಲ್ಲದಂತೆ ನಡೆಯುವ ಕ್ರಿಯೆಯಾಗಿದೆ. ಹಾಗಾಗಿ ಶಿಕ್ಷಿತ ಮಹಿಳೆಯರು, ಸ್ಯಾನಿಟರಿ ಪ್ಯಾಡ್‌ಗಳನ್ನು ಉಪಯೋಗಿಸಿದ ನಂತರ ಪ್ರತ್ಯೇಕವಾಗಿ ವಿಲೇವಾರಿ ಮಾಡಬೇಕು ಎಂದು ಕಿವಿಮಾತು ಹೇಳಿದರು.

> ಸ್ಲೈಡ್‌ಗಳ ಮೂಲಕ ಮುಟ್ಟಿನ ಅನೈರ್ಮಲ್ಯ ಪ್ರಸಂಗವನ್ನು ಪ್ರದರ್ಶಿಸಿ, ಹೆಚ್ಚು ಹೆಚ್ಚಾಗಿ ಸ್ಯಾನಿಟರಿ ಪ್ಯಾಡ್‌ಗಳ ಉಪಯೋಗದಿಂದ ಪ್ರೌಢಾವಸ್ಥೆಯ ಹುಡುಗಿಯರ ಆರೋಗ್ಯದ ಮೇಲಾಗುವ ಗಂಭೀರ ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಮುಟ್ಟಿನ ಪರಿಣಾಮಗಳ ಬಗ್ಗೆ ಮನೆಯ ಹಿರಿಯ ಸದಸ್ಯರಿಗೂ ಮಾಹಿತಿ ಇರಬೇಕು. ಮೂಢನಂಬಿಕೆಗಳಿಗೆ ತಿಲಾಂಜಲಿ ಇಡಲು ಶಾಲಾ–ಕಾಲೇಜುಗಳಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವುದು ಮೊದಲ ಆದ್ಯತೆ ಆಗಬೇಕು.
> – ಡಾ.ಸೌಮ್ಯ, ಸ್ತ್ರೀರೋಗ ತಜ್ಞೆ

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಮೈಸೂರು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಜೆ.ಶಿಲ್ಪ, ಪರಿಸರವನ್ನು ಹಾಳು ಮಾಡುವುದು ಸುಲಭ. ಆದರೆ, ಮುಂದೆ ಅದರಿಂದಾಗುವ ಅಡ್ಡಪರಿಣಾಮಗಳನ್ನು ಅನುಭವಿಸುವುದು ಕಷ್ಟ. ಅಪಾಯಕಾರಿ ಸನ್ನಿವೇಶವನ್ನು ತಗ್ಗಿಸಲು ಎಲ್ಲರೂ ಪ್ರಯತ್ನಿಸಬೇಕು. ತಮ್ಮತಮ್ಮ ಮನೆಗಳ ಅಪಾಯಕಾರಿ ಕಸಗಳನ್ನು ಬೇರ್ಪಡಿಸುವ ಕೆಲಸ ಮಾಡಬೇಕು. ಇದಕ್ಕೆ ಸ್ಥಳೀಯ ಆಡಳಿತ ಕ್ರಮವಹಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಸಿರು ದಳದ ತರಬೇತುದಾರರಾದ ವಿ.ಶ್ರೀದೇವಿ, ಹಸಿರುದಳದ ಆಡಳಿತ ಮತ್ತು ತರಬೇತಿ ವಿಭಾಗದ ಮುಖ್ಯಸ್ಥೆ ಸಿ.ಎಸ್.ಕುಮುದಾ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಗುರುಸಿದ್ದಯ್ಯ ಉಪಸ್ಥಿತರಿದ್ದರು.

ಆಕಸ್ಮಿಕ ಅಗ್ನಿ ಅವಘಡ; ಮೂರು ಮನೆ ಸಂಪೂರ್ಣ ಭಸ್ಮ

ಮೈಸೂರು, ಮೇ 17– ಆಕಸ್ಮಿಕ ಬೆಂಕಿ ಅವಘಡದಿಂದ ಮೂರು ಮನೆಗಳು ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ಮೈಸೂರು ತಾಲೂಕು ಬೋರೆ ಆನಂದೂರು ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ಗ್ರಾಮದ ಶನಿವಾರೇಗೌಡ, ವೆಂಕಟೇಶ್‌ಗೌಡ ಹಾಗು ಶ್ರೀನಿವಾಸಗೌಡ ಎಂಬುವವರ ಮನೆಗಳು ಬೆಂಕಿಗೆ ಆಹುತಿಯಾಗಿದ್ದು, ಮೂರೂ ಮನೆಗಳಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿವೆ. ಅದೃಷ್ಟವಶಾತ್ ಆ ವೇಳೆ ಮನೆಯಲ್ಲಿ ಯಾರೂ ಇಲ್ಲದ ಕಾರಣ ಸಾವು–ನೋವು ಸಂಭವಿಸಿಲ್ಲ.

ವಿಷಯ ತಿಳಿದ ಕೂಡಲೇ ಮೈಸೂರಿನ ಸರಸ್ವತಿಪುರಂ ಹಾಗೂ ಹೆಬ್ಬಾಳು ಅಗ್ನಿಶಾಮಕ ಠಾಣೆ ಮತ್ತು ಶ್ರೀರಂಗಪಟ್ಟಣ ಅಗ್ನಿಶಾಮಕ ಠಾಣೆಯ ತಲಾ ಒಂದೊಂದು ವಾಹನಗಳೊಂದಿಗೆ ಸಿಬ್ಬಂದಿ ಧಾವಿಸಿ, ನಿರಂತರ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು. ಸಿಲೆಂಡರ್ ಸ್ಫೋಟದಿಂದ ಈ ಅವಘಡ ಸಂಭವಿಸಿರಬಹುದು ಎಂದು ಹೇಳಲಾಗುತ್ತಿದ್ದರೂ ಪರಿಶೀಲನೆ ಬಳಿಕ ನಿಖರ ಕಾರಣ ತಿಳಿಯಲಿದೆ.

ಮೈಸೂರಲ್ಲಿ ಜಿಟಿ ಜಿಟಿ ಮಳೆ

ಮೈಸೂರು,ಮೇ 17(ಪಿಎಂ)– ನಗರದ ವಿವಿಧೆಡೆ ಶನಿವಾರ ಸಂಜೆ ಜಿಟಿ ಜಿಟಿ ಮಳೆಯಾಗಿದ್ದು, ಬೆಳಗ್ಗೆಯಿಂದ ಇದ್ದ ಬಿಸಿಲಿನ ತಾಪದಿಂದ ಕಂಗೆಟ್ಟಿದ್ದ ನಗರದ ಜನತೆಗೆ ಸಂಜೆಯ ಮಳೆ ಹಿತಾನುಭವ ನೀಡಿತು.

ಇಂದು ಬೆಳಗ್ಗೆಯಿಂದ ಬಿಸಿಲು ಜೋರಾಗಿದ್ದ ಹಿನ್ನೆಲೆಯಲ್ಲಿ ವಿಪರೀತ ಧಗೆ ನಾಗರಿಕರನ್ನು ಕಂಗಾಲಾಗಿಸಿತ್ತು. ಆದರೆ ಸಂಜೆ ಸುಮಾರು 4 ಗಂಟೆ ವೇಳೆ ಮೋಡ ಕವಿಯುವುದರೊಂದಿಗೆ ನಗರದಲ್ಲಿ ತಂಪಿನ ವಾತಾವರಣ ನಿರ್ಮಾಣವಾಯಿತು. ಇದಾದ ಕೆಲವೇ ನಿಮಿಷಗಳಲ್ಲಿ ಮಳೆ ಆರಂಭಗೊಂಡಿತು. ಆದರೆ ಜೋರು ಮಳೆಯಾಗದಿದ್ದರೂ ಮೂರ್ನಾಲ್ಕು ತಾಸಿನವರೆಗೆ ಜಿಟಿ ಜಿಟಿ ಮಳೆ ಇದ್ದ ಹಿನ್ನೆಲೆಯಲ್ಲಿ ನಗರದ ಹೃದಯಭಾಗವೂ ಸೇರಿದಂತೆ ವಿವಿಧೆಡೆ ವೃತ್ತ ಮತ್ತು ರಸ್ತೆಗಳು ಜಲಾವೃತಗೊಂಡಿದ್ದವು. ಗಾಳಿಯ ತೀವ್ರತೆ ಕಡಿಮೆ ಇದ್ದ ಹಿನ್ನೆಲೆಯಲ್ಲಿ ಮರಗಳ ಬಿದ್ದಿರುವ ಸಂಭವ ಇಲ್ಲವಾಗಿದ್ದು, ಈ ಸಂಬಂಧ ಯಾವುದೇ ವರದಿಯಾಗಿಲ್ಲ.

ಮೇ 21ರವರೆಗೆ ಮಳೆ ಸಾಧ್ಯತೆ: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಮೇ 21ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಚೈತನ್ಯ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 17– ಜನ ಚೈತನ್ಯ ಫೌಂಡೇಷನ್ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚೈತನ್ಯ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ. ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆಸಕ್ತರು ಅಂಕಪಟ್ಟಿ, ಆಧಾರ್ ಕಾರ್ಡ್ ಜೆರಾಕ್ಸ್ ಮತ್ತು ಒಂದು ಭಾವಚಿತ್ರದೊಂದಿಗೆ ಅರ್ಜಿಯನ್ನು ಮೇ 25ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಮೊ. 9243506024, 9972865037 ಸಂಪರ್ಕಿಸಲು ಕೋರಲಾಗಿದೆ.

ಜೆಪಿ ಅಭಿನಯದ 'ಭಗೀರಥ' ಶತದಿನೋತ್ಸವ; ಸಂಭ್ರಮಾಚರಣೆ

ಮೈಸೂರು, ಮೇ 17– ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್(ಜೆಪಿ) ಅಭಿನಯದ 'ಭಗೀರಥ' ಚಿತ್ರವು ಶತದಿನ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಶನಿವಾರ ಸಂಭ್ರಮಾಚರಿಸಲಾಯಿತು.



ಡಾ.ರಾಜಕುಮಾರ್ ಅಭಿಮಾನಿಗಳ ಸಂಘ, ಪುನೀತ್ ರಾಜಕುಮಾರ್ ಅಭಿಮಾನಿಗಳ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಜಯಪ್ರಕಾಶ್ ಅಭಿಮಾನಿಗಳು ಸ್ಟಾರ್ ಮೆರವಣಿಗೆ ನಡೆಸುವ ಮೂಲಕ 'ಭಗೀರಥ' ಶತದಿನೋತ್ಸವವನ್ನು ಸಂಭ್ರಮಿಸಿದರು.

'ಭಗೀರಥ' ಚಿತ್ರ ಪ್ರದರ್ಶನವಿರುವ ಪ್ರಭಾ ಚಿತ್ರಮಂದಿರಕ್ಕೆ ಭೇಟಿ ನೀಡಿದ ನಾಯಕನಟ ಜಯಪ್ರಕಾಶ್ ಅವರನ್ನು ಅದ್ಧೂರಿಯಾಗಿ ಬರಮಾಡಿಕೊಂಡರು. ತಮಟೆ, ಡೊಳ್ಳು ಬಾರಿಸಿ, ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿದರು. ಇದೇ ವೇಳೆ ಹಲವು ಅಭಿಮಾನಿಗಳು ನಟ ಜಯಪ್ರಕಾಶ್‌ಗೆ ಹಾರ ಹಾಕಿ ಅಭಿನಂದಿಸಿದರು. ಈ ವೇಳೆ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿದ ಜಯಪ್ರಕಾಶ್, ಅವರೊಂದಿಗೆ ಸಿನಿಮಾ ವೀಕ್ಷಿಸಿದರು.

'ಭಗೀರಥ' ಚಿತ್ರದ ನಿರ್ಮಾಪಕರಾದ ರಮೇಶ್, ಭೈರಪ್ಪ, ಡಾ.ರಾಜ್‌ಕುಮಾರ್ ಕುಟುಂಬದ ಎಸ್.ಎ.ಶ್ರೀನಿವಾಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಡಾ.ರಾಜ್ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ವರಕೂಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಹನುಮಂತಯ್ಯ, ಭಾಗ್ಯಮ್ಮ, ಪ್ರಭುಶಂಕರ, ಮಧುವನ ಚಂದ್ರು, ಕುಮಾರ್, ರಘು ಅರಸ್, ಬಸವರಾಜು, ಪ್ರದೀಪ್, ಅಭಿ, ಹನುಮಂತೇಗೌಡ, ರಘು ಆಚಾರ್, ಕೃಷ್ಣಪ್ಪ, ಸುಬ್ಬೇಗೌಡ, ಮಹೇಶ್ ಕುಮಾರ್, ಶಿವರಾಂ, ರವೀಶ್ ಸೇರಿದಂತೆ ನೂರಾರು ಮಂದಿ ಸ್ನೇಹಿತರು, ಹಿತೈಷಿಗಳು ಸಿನಿಮಾ ವೀಕ್ಷಿಸಿ, ನಟ ಜಯಪ್ರಕಾಶ್ ಅವರನ್ನು ಅಭಿನಂದಿಸಿದರು. ಶತದಿನೋತ್ಸವ ಹಿನ್ನೆಲೆಯಲ್ಲಿ ಜಯಪ್ರಕಾಶ್ ಅಭಿಮಾನಿಗಳು ಆಗಾಗ ಪ್ರಭಾ ಚಿತ್ರಮಂದಿರದ ಮುಂದೆ ಡೋಲು, ತಮಟೆ ಸದ್ದಿಗೆ ಹೆಜ್ಜೆ ಹಾಕಿ, ಪಟಾಕಿ ಸಿಡಿಸಿ, ಜೈಕಾರ ಹಾಕಿ ಸಂತಸ ವ್ಯಕ್ತಪಡಿಸಿದ್ದು ವಿಶೇಷವಾಗಿತ್ತು

ಭಯೋತ್ಪಾದನೆ ವಿರುದ್ಧ ಸರ್ವಪಕ್ಷ ನಿಯೋಗ

ಕಾಂಗ್ರೆಸ್ ಶಿಫಾರಸು ಬದಿಗೊತ್ತಿ ಶಶಿ ತರೂರ್ ಆಯ್ಕೆ ಮಾಡಿದ ಕೇಂದ್ರ

ನವದೆಹಲಿ, ಮೇ.17– 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಹೊಗಳುವ ಮೂಲಕ ಸ್ವಪಕ್ಷೀಯ ನಾಯಕರ ಅಸಮಾಧಾನಕ್ಕೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರಿಗೆ ಬಿಜೆಪಿ ರತ್ನಗಂಬಳಿ ಹಾಸಿದೆ. ಕೇಂದ್ರ ಸರ್ಕಾರ ಅವರಲ್ಲಿರುವ ತಾಕತ್ತು, ಪ್ರತಿಭೆಗಳನ್ನು ಗುರುತಿಸಿ ತಾನು ಹೊಸದಾಗಿ ರಚಿಸಿರುವ ಸರ್ವಪಕ್ಷಗಳ ಏಳು ನಿಯೋಗಗಳಲ್ಲಿ ಒಂದಕ್ಕೆ ಮುಖ್ಯಸ್ಥರನ್ನಾಗಿ ಮಾಡಿದೆ.



ಭಯೋತ್ಪಾದನೆಯ ನಿರ್ಮೂಲನೆಯ ಬಗ್ಗೆ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು (ಆಪರೇಷನ್ ಸಿಂಧೂರ್ ಸೇರಿ) ಜಗತ್ತಿನ ನಾನಾ ದೇಶಗಳಿಗೆ ಹೋಗಿ ಅಲ್ಲಿನ ರಾಜಕೀಯ ನಾಯಕರಿಗೆ ಮನವರಿಕೆ ಮಾಡಲು ಈ ನಿಯೋಗಗಳನ್ನು ರಚಿಸಲಾಗಿದೆ. ಕಾಂಗ್ರೆಸ್ ಪಕ್ಷ ನಾಲ್ವರು ಹೆಸರುಗಳುಳ್ಳ ಒಂದು ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿತ್ತು. ಆದರೆ, ಅದರಲ್ಲಿ ಶಶಿ ತರೂರ್ ಅವರ ಹೆಸರೇ ಇರಲಿಲ್ಲ.

ಆದರೆ, ಕಾಂಗ್ರೆಸ್ ಶಿಫಾರಸು ಮಾಡದೇ ಇದ್ದರೂ ಶಶಿ ತರೂರ್ ಅವರನ್ನು ತನ್ನ ನಿಯೋಗಕ್ಕೆ ತಾನೇ ಆಯ್ಕೆ ಮಾಡಿಕೊಂಡಿರುವ ಆಡಳಿತಾರೂಢ ಬಿಜೆಪಿ, ಅವರನ್ನೇ ಆ ನಿಯೋಗದ ಅಧ್ಯಕ್ಷರನ್ನಾಗಿಸುವ ಮೂಲಕ ಕಾಂಗ್ರೆಸ್ಸಿಗೆ ಮುಖಭಂಗವಾಗುವಂತೆ ಮಾಡಿದೆ.

ಈ ನಿಯೋಗಗಳ ಕೆಲಸವೇನು?: ಇತ್ತೀಚೆಗಷ್ಟೇ 'ಆಪರೇಷನ್ ಸಿಂಧೂರ್' ಹೆಸರಿನಲ್ಲಿ ಉಗ್ರ ನಿಗ್ರಹ ಕಾರ್ಯಾಚರಣೆಯನ್ನು ಕೈಗೊಂಡಿರುವ ಕೇಂದ್ರ ಸರ್ಕಾರ, ಉಗ್ರವಾದದ ವಿರುದ್ಧ ತನಗಿರುವ ಶೂನ್ಯ ಸಹಿಷ್ಣುತೆಯನ್ನು ಇಡೀ ಜಗತ್ತಿಗೆ ಸಾರಲು ತೀರ್ಮಾನಿಸಿದೆ. ಆದರೆ, ಇದನ್ನು ರಾಜತಾಂತ್ರಿಕ ನೆಲೆಗಟ್ಟಿನಲ್ಲಿ ಒಂದು ಅಭಿಯಾನದ ರೂಪದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಿರುವ ಕೇಂದ್ರ ಸರ್ಕಾರ, ಅದಕ್ಕಾಗಿ ಈ ಏಳು ಸಂಸದರ ಏಳು ನಿಯೋಗಗಳನ್ನು ರಚಿಸಿದೆ.

ಶಶಿ ತರೂರ್ (ಕಾಂಗ್ರೆಸ್), ರವಿಶಂಕರ್ ಪ್ರಸಾದ್ (ಬಿಜೆಪಿ), ಸಂಜಯ್‌ಕುಮಾರ್ ಝಾ (ಜೆಡಿಯು), ಬೈಜಯಂತ್ ಪಾಂಡ (ಬಿಜೆಪಿ), ಕನಿಮೋಳಿ (ಡಿಎಂಕೆ), ಸುಪ್ರಿಯಾ ಸುಳೆ (ಎನ್‌ಸಿಪಿ), ಮತ್ತು ಶ್ರೀಕಾಂತ್ ಏಕನಾಥ್ ಶಿಂಧೆ (ಶಿವಸೇನೆ) ಅವರ ನೇತೃತ್ವದಲ್ಲಿ ಒಟ್ಟು ಏಳು ಪ್ರತ್ಯೇಕ ನಿಯೋಗಗಳನ್ನು ರಚಿಸಲಾಗಿದೆ.

ಸುಪ್ರಿಯಾ ಸುಳೆ ನೇತೃತ್ವದ ನಿಯೋಗವು ದಕ್ಷಿಣ ಆಫ್ರಿಕಾ ಹಾಗೂ ಈಜಿಪ್ಟ್ ರಾಷ್ಟ್ರಗಳಿಗೆ ಭೇಟಿ ನೀಡಿದರೆ, ಶ್ರೀಕಾಂತ್ ಏಕನಾಥ್ ಶಿಂಧೆ ನೇತೃತ್ವದ ನಿಯೋಗವು ಯುಎಇ ಹಾಗೂ ಆಫ್ರಿಕಾ ರಾಷ್ಟ್ರಗಳಿಗೆ ಭೇಟಿ ನೀಡುತ್ತದೆ. ಜೆಡಿಯುನ ಸಂಜಯ್ ಝಾ ಅವರ ನೇತೃತ್ವದ ನಿಯೋಗವು ಜಪಾನ್, ದಕ್ಷಿಣ ಕೊರಿಯಾ, ಇಂಡೋನೇಷ್ಯಾ ಹಾಗೂ ಮಲೇಷ್ಯಾ ರಾಷ್ಟ್ರಗಳಿಗೆ ಭೇಟಿ ನೀಡಿದರೆ, ರವಿಶಂಕರ್ ಪ್ರಸಾದ್ ನೇತೃತ್ವದ ನಿಯೋಗವು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಭೇಟಿ ನೀಡುತ್ತದೆ.

ಕನಿಮೋಳಿ ನೇತೃತ್ವದ ನಿಯೋಗವು ರಷ್ಯಾ ಹಾಗೂ ಸ್ಪೇನ್‌ಗಳಿಗೆ ಹೋಗಲಿದ್ದು, ಶಶಿ ತರೂರ್ ನೇತೃತ್ವದ ನಿಯೋಗ ಉತ್ತರ ಹಾಗೂ ದಕ್ಷಿಣ ಅಮೆರಿಕಕ್ಕೆ ತೆರಳಲಿದೆ.

ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 17 – ಮೈಸೂರಿನ ಬೋಗಾದಿ 2ನೇ ಹಂತ, 1ನೇ ಮೇನ್, 1ನೇ ಕ್ರಾಸ್‌ನಲ್ಲಿರುವ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಹಾಗೂ ವಿದ್ಯಾರ್ಥಿ ನಿಲಯದಲ್ಲಿ ನೇರವಾಗಿ ಅಥವಾ ದೂರವಾಣಿ ಸಂಪರ್ಕಿಸಿ ಇ ಮೇಲ್ ಹಾಗೂ ವಾಟ್ಸಾಪ್ ಮೂಲಕವೂ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೊ. 9741452271, 9972014655 ಸಂಪರ್ಕಿಸಬಹುದು.

ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ 18ನೇ ಪದವಿ ಪ್ರದಾನ ಸಮಾರಂಭ; 413 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಮುಂದಿನ ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಸೇವೆ ಅನಿವಾರ್ಯ: ರಾಜೀವ್ ಗಾಂಧಿ ಆರೋಗ್ಯ ವಿವಿ ಕುಲಪತಿ ಡಾ.ಬಿ.ಸಿ.ಭಗವಾನ್ ಪ್ರತಿಪಾದನೆ



ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ 18ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ವಿಭಾಗಗಳ 413 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ 17(ಎಂಕೆ)– ಮೈಸೂರಿನ ರಿಂಗ್‌ರಸ್ತೆ ಸಮೀಪದಲ್ಲಿರುವ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ 18ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ವಿಭಾಗಗಳ 413 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ 128 ನರ್ಸಿಂಗ್, 38 ಸೆಂಟ್ ಆಲ್ಫೋನ್ಸಾ ನರ್ಸಿಂಗ್, 68 ಫಿಜಿಯೋಥೆರಪಿ, 144 ಅಲೈಡ್ ಹೆಲ್ತ್‌ಸೈನ್ಸ್ ಹಾಗೂ 35 ಫಾರ್ಮಸಿ ವಿದ್ಯಾರ್ಥಿಗಳು ಸೇರಿ ಒಟ್ಟು 413 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ವಿಭಾಗದಲ್ಲಿ ರ್‍ಯಾಂಕ್ ಪಡೆದ 60 ವಿದ್ಯಾರ್ಥಿಗಳಿಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ಪದಕ ಹಾಗೂ ಪದವಿ ಪ್ರಮಾಣ ವಿತರಿಸಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಆರೋಗ್ಯ ಕ್ಷೇತ್ರವೆಂದರೆ ಕೇವಲ ವೈದ್ಯರಲ್ಲ. ನರ್ಸ್, ಮೆಡಿಕಲ್, ಡಯಾಗ್ನೋಸ್ಟಿಕ್ ಸೆಂಟರ್ ಸಿಬ್ಬಂದಿಗಳನ್ನು ಒಳಗೊಂಡಿರುತ್ತದೆ. ವೈದ್ಯರು ಆಸ್ಪತ್ರೆಯ ಮೆದುಳಾದರೆ, ನರ್ಸ್ ಸಿಬ್ಬಂದಿ ಆಸ್ಪತ್ರೆಯ ಹೃದಯವಾಗಿರುತ್ತಾರೆ. ವಿಶ್ವದಲ್ಲಿಯೇ 20 ಲಕ್ಷ ನರ್ಸ್‌ಗಳ ಅಗತ್ಯವಿದ್ದು, ಶೇ.100ಕ್ಕೆ 100ರಷ್ಟು ಉದ್ಯೋಗ ದೊರೆಯಲಿದೆ. ಅಲ್ಲದೆ ಹೆಲ್ತ್‌ಸೈನ್ಸ್ ಸೇವೆಗೂ ಅಪಾರ ಬೇಡಿಕೆ ಇದ್ದು, ಆಸ್ಪತ್ರೆಗಳ ಬೇಜರ್ ರೋಲ್ ನರ್ಸ್ ಹಾಗೂ ಇತರೆ ವೈದ್ಯಕೀಯ ಸಿಬ್ಬಂದಿಗಳದ್ದಾಗಿರುತ್ತದೆ ಎಂದು ತಿಳಿಸಿದರು.

ಮುಂದಿನ ವರ್ಷಗಳಲ್ಲಿ ಅತೀ ಅವಶ್ಯವಾಗುವ ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಸೇವೆ ನೀಡುವ ನಿಟ್ಟಿನಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಯು ಲ್ಯಾಬ್ ಟೆಕ್ನಿಷಿಯನ್ ಸೇರಿದಂತೆ 11 ನರ್ಸಿಂಗ್ ಕೋರ್ಸ್‌ಗಳನ್ನು ನಡೆಸುತ್ತಿದೆ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯೂ ಕೂಡ ಕೌಶಲತೆಯ ತರಬೇತಿಯೊಂದಿಗೆ ಪ್ರತಿಭಾವಂತರನ್ನು ಸೃಷ್ಟಿಸುತ್ತಿದೆ. ಅನಾರೋಗ್ಯದಿಂದ ಕತ್ತಲಲ್ಲಿ ಇರುವವರನ್ನು ಆರೋಗ್ಯವೆಂಬ ಬೆಳಕಿನಡೆಗೆ ಕರೆದೊಯ್ಯುವುದು ಪ್ರತಿಯೊಬ್ಬ ವೈದ್ಯಕೀಯ ಸಿಬ್ಬಂದಿಯ ಕರ್ತವ್ಯವಾಗಿದೆ. ಹಾಗಾಗಿ ಪದವಿ ಪಡೆದವರು ಕಲಿಕೆ ಮತ್ತು ಸೇವೆಗೆ ಆದ್ಯತೆ ನೀಡಬೇಕು ಎಂದು ತಿಳಿಹೇಳಿದರು.

ಘಟಿಕೋತ್ಸವ ಭಾಷಣ ಮಾಡಿದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ನರ್ಸಿಂಗ್, ಹೆಲ್ತ್ ಸೈನ್ಸ್, ಫಿಜಿಯೋಥೆರಪಿ ಇವೆಲ್ಲವೂ ಆರೋಗ್ಯ ಕ್ಷೇತ್ರದ ಬೆನ್ನೆಲುಬಾಗಿದ್ದು, ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯು ನರ್ಸಿಂಗ್, ಹೆಲ್ತ್ ಸೈನ್ಸ್, ಫಿಜಿಯೋಥೆರಪಿ ಕೋರ್ಸ್‌ಗಳ ಮೂಲಕ ಸಂಪನ್ಮೂಲ ವ್ಯಕ್ತಿಗಳನ್ನು ಸೃಷ್ಟಿಸುತ್ತಿದೆ. ಆರೋಗ್ಯ ಕ್ಷೇತ್ರದಲ್ಲಿ ಇರುವ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಈ ಸಂಸ್ಥೆಯು ಮಾಡುತ್ತಿದೆ ಎಂದು ಶ್ಲಾಘಿಸಿದರು.

ವಿಶ್ವದಲ್ಲಿಯೇ ಹೆಲ್ತ್‌ಕೇರ್‌ಗಳ ಅವಶ್ಯಕತೆ ಹೆಚ್ಚಾಗಿದ್ದು, ಮೆಡಿಕಲ್ ಟೂರಿಸಂ ಹಬ್‌ಗಳ ಅಗತ್ಯವೂ ಇದೆ. ಹಾಗೆಯೇ ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯು ಮೆಷಿನ್ ಲರ್ನಿಂಗ್ ತಂತ್ರಜ್ಞಾನಗಳು, ಕ್ಯಾನ್ಸರ್, ಹೃದ್ರೋಗ, ನರರೋಗಗಳನ್ನು ಮುಂಚಿತವಾಗಿ ಗುರುತಿಸಲು ಸಹಕಾರಿಯಾಗಿವೆ ಎಂದರಲ್ಲದೆ, ಕೇವಲ ಪದವಿ ಪಡೆಯುವುದಷ್ಟೆ ಅಲ್ಲದೇ ಸಮಾಜಕ್ಕೆ ಆರೋಗ್ಯ ಸೇವೆಯನ್ನು ತಲುಪಿಸುವಲ್ಲಿ ಕೊಡುಗೆ ನೀಡುವುದು ವಿದ್ಯಾರ್ಥಿಗಳ ಮುಖ್ಯ ಗುರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಡಾ.ಜಿ.ಆರ್. ಚಂದ್ರಶೇಖರ್ ಪದವಿ ಪಡೆದ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಸುರಕ್ಷಾ ಎಜುಕೇಷನ್ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಸರಳ ಚಂದ್ರಶೇಖರ್, ಕಾಲೇಜಿನ ಡೀನ್ ಪ್ರೊಎಸ್. ಶ್ರೀಕಂಠಸ್ವಾಮಿ, ಮುಖ್ಯ ಆಡಳಿತಾಧಿಕಾರಿ ಡಿ.ಆಶೋಕ್, ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರುಗಳಾದ ಡಾ.ಜೆ.ನಂದೀಶ್, ಡಾ.ಬಿ.ಕೆ.ಮಧುಸೂದನ್, ಡಾ.ಆರ್.ಎಂ.ಅರವಿಂದ್, ಡಾ.ಲಿಸಾ, ಡಾ.ವಿಷಕಂಠೇಗೌಡ, ಪ್ರೊ.ಜಿ.ಪವನ್ ಕುಮಾರ್, ಡಾ.ಎನ್.ರಾಜ್ ಕಣ್ಣನ್, ಆಡಳಿತ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ನಗರ ವಿಭಾಗ, ಮೈಸೂರು

ಸಂ/ಕರಾಸಾ/ಮೈನವಿ/ಸಂ/ವಾ/381&382/2025-26 ದಿ: 13-05-2025

ಇ-ಟೆಂಡರ್/ಮಾನ್ಯುಲ್/ಸಂಧಾನ ಪ್ರಕಟಣೆ ಸಂಖ್ಯೆ: 03/2025 &/ಸಂಧಾನ ಪ್ರಕಟಣೆ ಸಂಖ್ಯೆ: 04/2025
(ಇ-ಪ್ರಕ್ಯೂರ್‌ಮೆಂಟ್ ಮತ್ತು ನೇರವಾಗಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮೈಸೂರು ನಗರ ವಿಭಾಗದ ವ್ಯಾಪ್ತಿಯ ಮೈಸೂರು ನಗರ ಬಸ್ ನಿಲ್ದಾಣ, ಇಲವಾಲ, ನಂಜನಗೂಡು (ಹಳೆ ಮತ್ತು ಹೊಸ), ಟಿ.ನರಸೀಪುರ, ಸುತ್ತೂರು ಮತ್ತು ಹುಲ್ಲಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ ಉಪಹಾರ ಗೃಹ ಚಾಟ್ ಸೆಂಟರ್, ಮಿಲ್ಕರ್ ಪಾರ್ಲರ್ ಫಂಕ್ಷನ್ ಹಾಲ್ "ಜನರಲ್ ಸ್ಟಾಲ್ (ವ್ಯಾಪಾರ/ಕಛೇರಿ), ದ್ವಿಚಕ್ರ ವಾಹನ ನಿಲ್ದಾಣ ನಡೆಸಲು ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ-ಟೆಂಡರ್/ಸಂಧಾನ/ಮಾನ್ಯುಲ್ ಪ್ರಕಟಣೆ ಸಂಖ್ಯೆ 03/2025 ದಿನಾಂಕ 13-05-2025 ಅನ್ನು ಹೊರಡಿಸಲಾಗಿದೆ. ಆರ್.ಎಸ್. ನಾಯ್ಡು ನಗರ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ ಏಕೈಕ ಪರವಾನಗಿದಾರರ ಆಯ್ಕೆಗಾಗಿ ಸಂಧಾನ ಪ್ರಕಟಣೆ ಸಂಖ್ಯೆ-04/2025 ದಿ: 13-05-2025 ಅನ್ನು ಹೊರಡಿಸಲಾಗಿದೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಆಧಾರದ ಮೇಲೆ" ಪರವಾನಗಿಯನ್ನು ನೀಡಲಾಗುವುದು.

1. ಇ-ಟೆಂಡರ್ ಪ್ರಕಟಣೆ: – ಇ-ಟೆಂಡರ್ ಡಿಜಿಟಲ್ ಕೀ ಹೊಂದಿರುವ ಆಸಕ್ತರು ಮಾತ್ರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್‌ನಲ್ಲಿ ಭಾಗವಹಿಸಬಾಹುದಾಗಿದೆ. ದಿನಾಂಕ: 14-05-2025 ರಿಂದ 03-06-2025 15:00 ಗಂಟೆವರೆಗೆ ಟೆಂಡರ್ ದಾಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https:/kppp.karnataka.gov.in ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬಿಡ್ ಸಲ್ಲಿಸಬಹುದು ಇ-ಟೆಂಡರ್‌ನ ಆರ್ಥಿಕ ಬಿಡ್ ಅನ್ನು ದಿನಾಂಕ:05/06/2025 ಸಮಯ 16:00ಗಂಟೆಗೆ ತೆರೆಯಲು ನಿಗಧಿಗೊಳಿಸಲಾಗಿದೆ.

2.ಮಾನ್ಯುಲ್ ಟೆಂಡರ್ ಪ್ರಕಟಣೆ:– ಟೆಂಡರ್ ಅರ್ಜಿಗಳನ್ನು ದಿನಾಂಕ: 14/05/2025ರಿಂದ 03/06/2025 12:00 ಗಂಟೆಗೆವರೆಗೆ ವಿಭಾಗೀಯ ಕಛೇರಿಯಲ್ಲಿ ನಿಡಲಾಗುತ್ತದೆ. ದಿನಾಂಕ: 05/06/2025 12:00 ಗಂಟೆವರೆಗೆ ದಾಖಲಾತಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು ದಿನಾಂಕ:05/06/2025 ಸಮಯ 15:00 ಗಂಟೆಗೆ ಮ್ಯಾನ್ಯುಲ್ ಟೆಂಡರ್ ಸಭೆಯನ್ನು ನಡೆಸಲಾಗುವುದು.

3. ಸಂಧಾನದ ಪ್ರಕಟಣೆ: ಸಂಧಾನದ ಅರ್ಜಿಗಳನ್ನು ದಿನಾಂಕ: 14/05/2025 ರಿಂದ 03/06/2025 ಸಮಯ17:00 ಗಂಟೆವರೆಗೆ ವಿಭಾಗೀಯ ಕಛೇರಿಯಲ್ಲಿ ನೀಡಲಾಗತ್ತದೆ. ದಿನಾಂಕ: 03/06/2025ರ 17:00 ಗಂಟೆಗೆವರೆಗೆ ದಾಖಲಾತಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು. ದಿನಾಂಕ: 04/06/2025 ಸಮಯ 12:00 ಗಂಟೆಗೆ ಸಂಧಾನ ಸಭೆ ನಡೆಸಲಾಗುವುದು.

4. ಆರ್.ಎಸ್.ನಾಯ್ಡು ನಗರ ಸಂಧಾನದ ಪ್ರಕಟಣೆ:– ಸಂಧಾನದ ಅರ್ಜಿಗಳನ್ನು ದಿನಾಂಕ: 14/05/2025ರಿಂದ 04/06/2025 ಸಮಯ 17:00 ಗಂಟೆವರೆಗೆ ವಿಭಾಗೀಯ ಕಛೇರಿಯಲ್ಲಿ ನೀಡಲಾಗತ್ತದೆ ದಿನಾಂಕ: 04/06/2025ರ 17:00 ಗಂಟೆಗೆವರೆಗೆ ದಾಖಲಾತಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು. ದಿನಾಂಕ: 06/06/2025 ಸಮಯ 12:00 ಗಂಟೆಗೆ ಸಂಧಾನ ಸಭೆ ನಡೆಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಮೈಸೂರು ನಗರ ವಿಭಾಗ(ಸಂಚಾರ ಶಾಖೆ), ನೆಲ್ಸನ್‌ಮಂಡೆಲಾ ರಸ್ತೆ, ಬನ್ನಿಮಂಟಪ, ಮೈಸೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂ:-9480665919, 7019026615, 9606978102)

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಮೈಸೂರು ನಗರ ವಿಭಾಗ.

ವಾ.ಸಾ.ಸಂ.ಇ/ವಾಪ್ರ/722/ಆಕಾರ್/2025-26

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಪಿಎನ್-3/ 139 /2025-26 ದಿನಾಂಕ: 17.05.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ. ಸಂ.	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಜಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-2	3	84.10	19.05.2025	27.05.2025	28.05.2025
2	Kc-4	2	64.59	19.05.2025	27.05.2025	28.05.2025
3	Kc-6	1	12.00	20.05.2025	28.05.2025	29.05.2025
4	Kw-1	2	16.70	20.05.2025	05.06.2025	06.06.2025
5	Kc-6	1	20.00	20.05.2025	05.06.2025	06.06.2025
6	EOI	2	-	20.05.2025	05.06.2025	06.06.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಿದ್ದರಾಮಯ್ಯರ ಕಾರಿನ ಮೇಲೆ ಮೊಟ್ಟೆ ಎಸೆದಿದ್ದ ಶಂಭು ಹತ್ಯೆ ಸಂಬಂಧ ಮೂವರ ಬಂಧನ

ಕೊಲೆಗೆ ಬ್ಲಾಕ್‌ಮೇಲ್ ಕಾರಣ: ಎಸ್ಪಿ

ಮಡಿಕೇರಿ, ಮೇ 17– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಪಕ್ಷ ನಾಯಕರಾಗಿದ್ದಾಗ ಮಡಿಕೇರಿಗೆ ತೆರಳಿದ್ದ ವೇಳೆ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿದ್ದ ಪ್ರಕರಣದ ಪ್ರಮುಖ ಆರೋಪಿ ಸಂಪತ್ ಅಲಿಯಾಸ್ ಶಂಭು ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ಕೊಡಗು ಜಿಲ್ಲಾ ಪೊಲೀಸರು ದಂಪತಿ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ.

ಕುಶಾಲನಗರದ ಗಣಪತಿ (ಈತನೂ ಕೂಡ ಮೊಟ್ಟೆ ಎಸೆತ ಪ್ರಕರಣದಲ್ಲಿ ಮತ್ತೋರ್ವ ಆರೋಪಿ), ಕಿರಣ್ ಮತ್ತು ಆತನ ಪತ್ನಿ ಸಂಗೀತ ಬಂಧಿತರಾಗಿದ್ದು, ಬ್ಲಾಕ್‌ಮೇಲ್ ಈ ಕೊಲೆಗೆ ಕಾರಣ ಎಂದು ಕೊಡಗು ಜಿಲ್ಲಾ ಎಸ್ಪಿ ರಾಮರಾಜನ್ ತಿಳಿಸಿದ್ದಾರೆ.

ವಿವರ: ಶ್ರೀಮಂತ ಗುತ್ತಿಗೆದಾರನಾಗಿರುವ ಶಂಭು, ಸೋಮವಾರಪೇಟೆ ತಾಲೂಕು ಕಕ್ಕೆಹೊಳೆ ಜಂಕ್ಷನ್ ನಿವಾಸಿಯಾಗಿದ್ದು, ಕೆಲ ವರ್ಷಗಳ ಹಿಂದೆ ಪತ್ನಿಗೆ ವಿಚ್ಛೇದನ ನೀಡಿ ಕುಶಾಲನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು ಕೊಂಡು ಕಂಡ ಕಂಡ ಮಹಿಳೆಯರನ್ನು ಪುಸಲಾಯಿಸಿ, ದೈಹಿಕ ಸಂಬಂಧ ಹೊಂದಿದ್ದು, ನಂತರ ಅದರ ವೀಡಿಯೋಗಳನ್ನು ಇಟ್ಟುಕೊಂಡು ಬ್ಲಾಕ್‌ಮೇಲ್ ಮಾಡಿ ಮತ್ತೆ ಮತ್ತೆ ಅವರ ಸಂಬಂಧ ಬೆಳೆಸುತ್ತಿದ್ದ ಎಂದು ಹೇಳಲಾಗಿದೆ.

ಅದೇ ರೀತಿ ತನ್ನ ಸ್ನೇಹಿತನೇ ಆಗಿದ್ದ ಕಿರಣ್ ಪತ್ನಿ ಸಂಗೀತಳ ವೀಡಿಯೋ ಹಾಗೂ ಫೋಟೋಗಳನ್ನು ಇಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದನಂತೆ. ಕೆಲ ದಿನಗಳ ನಂತರ ಈ ವಿಚಾರ ತಿಳಿದು, ಕಿರಣ್ ಮತ್ತು ಸಂಗೀತ ನಡು ರಸ್ತೆಯಲ್ಲೇ ಶಂಭು ಮೇಲೆ ಹಲ್ಲೆ ನಡೆಸಿ, ಆ ಸಂಬಂಧ 2023ರಲ್ಲಿ ಕುಶಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದಲ್ಲಿ ಶಂಭು ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರ ಬಂದಿದ್ದ. ಅದೇ ವೇಳೆ ಕಿರಣ್ ಮತ್ತು ಸಂಗೀತ ವಿರುದ್ಧ ಕೊಲೆ ಯತ್ನ ಪ್ರಕರಣವನ್ನು ದಾಖಲಿಸಿದ್ದ. ಅಲ್ಲದೇ ತನಗೆ ಈ ದಂಪತಿ 20 ಲಕ್ಷ ರೂ. ನೀಡಬೇಕೆಂದು ತಗಾದೆಯನ್ನೂ ಮಾಡಿದ್ದ.


ಸಂಪತ್ @ ಶಂಭು

ಆನಂತರ ದಂಪತಿ ಹಾಗೂ ಶಂಭು ನಡುವೆ ಸಂಧಾನದ ಮಾತುಕತೆಗಳು ನಡೆದು, ಇಬ್ಬರೂ ತಾವು ನೀಡಿರುವ ಕೇಸ್‌ಗಳನ್ನು ವಾಪಸ್ ಪಡೆಯುವುದು ಎಂದು ತೀರ್ಮಾನವಾಗಿತ್ತಂತೆ. ಅದರಂತೆ ಕಿರಣ್ ಹಾಗೂ ಸಂಗೀತ ತಾವು ನೀಡಿದ್ದ ಕೇಸ್ ವಾಪಸ್ ಪಡೆದಿದ್ದು, ಶಂಭು ಕೇಸ್ ವಾಪಸ್ ಪಡೆಯದೆ ಮತ್ತೆ ಸಂಗೀತಳ ಫೋಟೋ ಇಟ್ಟುಕೊಂಡು ಬ್ಲಾಕ್‌ಮೇಲ್‌ಗೆ ಇಳಿದಿದ್ದಲ್ಲದೇ, 20 ಲಕ್ಷ ರೂ. ನೀಡಬೇಕೆಂದು ಒತ್ತಡ ಹಾಕುತ್ತಿದ್ದನಂತೆ.

ಈ ಹಿನ್ನೆಲೆಯಲ್ಲಿ ಆತನನ್ನು ಮುಗಿಸಬೇಕೆಂದು ಕಿರಣ್, ಆತನ ಪತ್ನಿ ಸಂಗೀತ ಮತ್ತು ಶಂಭು ಸ್ನೇಹಿತ ಗಣಪತಿ ಸಂಚು ರೂಪಿಸಿದ್ದಾರೆ. ಮೇ 9ರಂದು ಶಂಭುವಿಗೆ ಸಂಗೀತ ಕರೆ ಮಾಡಿ ಮನೆ ಬಳಿ ಬರುವಂತೆ ಹೇಳಿದ್ದಾಳೆ. ತನ್ನ ಕಾರು ತೆಗೆದುಕೊಂಡು ಹೋದರೆ ಗೊತ್ತಾಗುತ್ತದೆ ಎಂದು ಶಂಭು ತನ್ನ ಸ್ನೇಹಿತ ಜಾನ್ ಎಂಬುವರ ಕಾರನ್ನು ತೆಗೆದುಕೊಂಡು ಕಿರಣ್ ಮನೆಗೆ ತೆರಳಿದಾಗ, ಕಿರಣ್ ಮತ್ತು ಗಣಪತಿ ಮಚ್ಚಿನಿಂದ ಕೊಚ್ಚಿ ಶಂಭುವನ್ನು ಹತ್ಯೆಗೈದಿದ್ದಾರೆ. ಆತ ತಂದ ಕಾರಿನಲ್ಲೇ ಶವ ಇಟ್ಟುಕೊಂಡು ಸಕಲೇಶಪುರ ತಾಲೂಕು ಕಲ್ಲಹಳ್ಳಿ ಬಳಿ ಅರಣ್ಯದ ಪ್ರಪಾತದಲ್ಲಿ ಶವ ಬಿಸಾಕಿ, ಕೆಲ ಕಿ.ಮೀ.ಗಳ ಅಂತರದಲ್ಲಿ ಕಾರನ್ನು ನಿಲ್ಲಿಸಿ ಮತ್ತೊಂದು ಕಾರಿನಲ್ಲಿ ಹಿಂತಿರುಗಿದ್ದಾರೆ.

ಶಂಭು ನಾಪತ್ತೆ ಪ್ರಕರಣ ಕುಶಾಲನಗರ ಠಾಣೆಯಲ್ಲಿ ದಾಖಲಾಗಿತ್ತು. ಮೇ 10ರಂದು ಆತ ತೆಗೆದುಕೊಂಡು ಹೋಗಿದ್ದ ಕಾರು ಸಕಲೇಶಪುರದ ಕಲ್ಲಹಳ್ಳಿ ಬಳಿ ಪತ್ತೆಯಾಗಿದ್ದು, ಮೇ 14ರಂದು ಅರಣ್ಯದ ಪ್ರಪಾತದಲ್ಲಿ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ಪ್ರಕರಣದ ತನಿಖೆ ಆರಂಭಿಸಿದ ಕೊಡಗು ಜಿಲ್ಲಾ ಪೊಲೀಸರು, ಗಣಪತಿ, ಕಿರಣ್, ಆತನ ಪತ್ನಿ ಸಂಗೀತಳನ್ನು ಬಂಧಿಸಿದ್ದಾರೆ.

ಶಾಲಾ ಕಟ್ಟಡ ನಿರ್ಮಾಣಕ್ಕೆ ಕೂಡಲೆ ಚಾಲನೆ ನೀಡಿ

ವಿರಾಜಪೇಟೆ ವ್ಯಾಪ್ತಿಯ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಸೂಚನೆ


ಶಾಸಕ ಎ.ಎಸ್. ಪೊನ್ನಣ್ಣ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಪಿ ಸಭೆ ನಡೆಯಿತು.

ಮಡಿಕೇರಿ/ ವಿರಾಜಪೇಟೆ, ಮೇ 17– ಕೊಯನಾಡು ಬಳಿ ಈಗಾಗಲೇ ಶಾಲಾ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲು ದಿನಾಂಕ ನಿಗಧಿ ಪಡಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ ಶಾಸಕ ಎ.ಎಸ್. ಪೊನ್ನಣ್ಣ ನಿರ್ದೇಶನ ನೀಡಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಸಭೆಯ ಆರಂಭದಲ್ಲಿ ಕೊಯನಾಡು ಬಳಿ ಬರೆಕುಸಿತದಿಂದ ಶಾಲಾ ಕಟ್ಟಡ ಹಾನಿಯಾಗಿದ್ದು, ಸ್ಥಳೀಯರು ಪಕ್ಕದ ಶಾಲಾ ಕಟ್ಟಡ ನಿರ್ಮಿಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದರ ಮೇರೆಗೆ ಜಾಗ ಗುರುತಿಸಲಾಗಿದ್ದು, ಮುಂದಿನ ವಾರ ಮುಂಗಾರು ಆರಂಭವಾಗುತ್ತಿದ್ದು, ಶಾಲಾ ಕಟ್ಟಡಗಳ ಸುಸ್ಥಿತಿ, ಸುತ್ತುಗೋಡೆ ನಿರ್ಮಾಣ, ಶೌಚಾಲಯ, ಆಟದ ಮೈದಾನ, ಶಾಲೆಗೆ ಬೇಕಿರುವ ಪೀಠೋಪಕರಣಗಳು ಹೀಗೆ ಇತರೆ ಮಾಹಿತಿ ಒದಗಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ ಸೂಚಿಸಿದರು.

ಜಿಲ್ಲೆಯ ಅಭಿವೃದ್ಧಿ ಸಂಬಂಧ ರಸ್ತೆ, ಸೇತುವೆ, ಕಟ್ಟಡಗಳು ಸೇರಿದಂತೆ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಕಷ್ಟಪಟ್ಟು ಅನುದಾನ ಬಿಡುಗಡೆ ಮಾಡಿಸುತ್ತೇವೆ. ಆದರೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಒದಗಿಸದೆ ಉದಾಸೀನ ತೋರುತ್ತಿದ್ದಾರೆ ಎಂದು ಕಿಡಿಕಾರಿ ಜಿಲ್ಲೆಗೆ ಆಗಬೇಕಿರುವ ಕೆಲಸಗಳ ಬಗ್ಗೆ ಒತ್ತು ನೀಡುವುದನ್ನು ಬಿಟ್ಟು ಇತರೆ ವಿಷಯಗಳ ಬಗ್ಗೆ ಮಾಹಿತಿ ನೀಡುವುದು ಸರಿಯಲ್ಲ ಎಂದರು.

ಗ್ಯಾರಂಟಿ ಯೋಜನೆಗಳ ತಾಲೂಕು ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳೇಮಾಡ ಪ್ರಶಾಂತ್, ಜಾನ್ಸನ್, ಮಂದ್ರೀರ ಮೋಹನ್, ಕೆಡಿಪಿ ಸದಸ್ಯರಾದ ಟಿ.ಕೆ.ಅಬ್ದುಲ್, ರೇಖಾ, ಪೊನ್ನಕ್ಕಿ, ಶಶಿಧರನ್, ವಿ.ಟಿ.ವಾಸು, ಅಜಿತ್ ಅಯ್ಯಪ್ಪ ರಫೀಕ್, ಪ್ರಶಾಂತ್ ಉತ್ತಪ್ಪ ಭರತ್ ಪಿ.ಎಸ್, ಎಚ್.ಪಿ.ಗಣೇಶ್, ಮರ್ವಿನ್ ಲೋಬೋ, ಎಂ.ವಿ.ಕಿರಣ್, ರೈನಾ ಕಾರ್ಯಪ್ಪ, ತಿಲಕ ಸುಬ್ರಾಯ, ಕುಶಾಲಪ್ಪ, ಇತರರು ವೈದ್ಯರ ನೇಮಕಾತಿ, ಕುಡಿಯುವ ನೀರು ಕಾಮಗಾರಿ ನಿರ್ವಹಣೆ, ರಸ್ತೆಗಳ ಅಭಿವೃದ್ಧಿ ಮತ್ತಿತರ ಸಂಬಂಧ ಗಮನ ಸೆಳೆದರು.

ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಕುಡಿಯುವ ನೀರು ಯೋಜನೆ ಜಲಜೀವನ್ ಮಿಷನ್, ಪಂಚಾಯತ್ ರಾಜ್ ಇಲಾಖೆಯಡಿ ರಸ್ತೆಗಳ ಅಭಿವೃದ್ಧಿ ಮತ್ತಿತರ ಸಂಬಂಧ ಮಾಹಿತಿ ನೀಡಿದರು.

ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ, ಜಿಪಂ ಉಪ ಕಾರ್ಯದರ್ಶಿ ಅಬ್ದುಲ್ ನಬೀ, ತಾಪಂ ಇಒ ಅಪ್ಪಣ್ಣ, ಶೇಖರ್, ತಹಶೀಲ್ದಾರರು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಬೇಟೋಳಿಯಲ್ಲಿ ಮಕ್ಕಳ ವೈದಿಕ ಶಿಬಿರಕ್ಕೆ ಚಾಲನೆ

ವಿರಾಜಪೇಟೆ: ಸಮೀಪದ ಬೇಟೋಳಿ ರಾಮನಗರದ ಶ್ರೀ ಪುದುಪಾಡಿ ಅಯ್ಯಪ್ಪ ಸಭಾಭವನದಲ್ಲಿ ಮೊದಲ ಬಾರಿಗೆ ಮಕ್ಕಳ ವೈದಿಕ ಶಿಬಿರಕ್ಕೆ ಚಾಲನೆ ನೀಡಲಾಯಿತು.

ದೇವಸ್ಥಾನದ ಉಪಾಧ್ಯಕ್ಷ ಬಿ.ಜಿ. ನಂದ ಬೋರ್ಕರ್ ಹಾಗೂ ಗೀತಾ ಬೋರ್ಕರ್ ದಂಪತಿಗಳು ದೀಪ ಬೆಳಗುವುದರ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯಿಂದ ಆಗಮಿಸಿದ ಅರ್ಚಕ ರಾಜೇಶ್ ಭಟ್ ಶಿಬಿರದ ದಿನಚರಿ ಹಾಗೂ ಶಿಬಿರಾರ್ಥಿಗಳು ಪಾಲಿಸಬೇಕಾದ ನಿಯಮಗಳ ಬಗ್ಗೆ ಮಾಹಿತಿ ನೀಡಿ ವೈದಿಕ ವಿಧಾನಗಳನ್ನು ವಿವರಿಸಿದರು. ಹದಿನೈದು ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ದೇವಸ್ಥಾನದ ಪ್ರಧಾನ ಅರ್ಚಕ ವಿಶ್ವನಾಥ್ ಭಟ್, ವೇಣುಗೋಪಾಲ್ ಭಟ್, ಆಡಳಿತ ಮಂಡಳಿ ಅಧ್ಯಕ್ಷ ಸಂತೋಷ್ ಬಿ.ಪಿ., ಶೈಲೇಶ್ ಕಾಮತ್, ಶಾಂತಿಭೂಷಣ್ ಬೋರ್ಕರ್, ಜ್ಯೋತಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಕಸಾಪ ಅಧ್ಯಕ್ಷ ಸ್ಥಾನದಿಂದ ಜೋಶಿ ವಜಾಗೊಳಿಸಿ ಸಮಗ್ರ ತನಿಖೆ ನಡೆಸಿ

ಜೋಶಿ ವಿರುದ್ಧ ಆಯೋಜಿಸಿದ್ದ ಜಾಗೃತಿ ಸಮಾವೇಶದಲ್ಲಿ ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ ಒತ್ತಾಯ

ಮಂಡ್ಯ,ಮೇ 17– ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಶಿ ಅವರನ್ನು ಕೂಡಲೇ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ ಅವರ ವಿರುದ್ಧ ಸಮಗ್ರ ತನಿಖೆ ನಡೆಸಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಸರ್ಕಾರವನ್ನು ಒತ್ತಾಯಿಸಿದರು.


ಕಸಾಪ ಅಧ್ಯಕ್ಷ ಮಹೇಶ್‌ಜೋಶಿ ವಿರುದ್ಧ ನಡೆದ ವಿಭಾಗ ಮಟ್ಟದ ಜಾಗೃತಿ ಸಮಾವೇಶವನ್ನು ಉದ್ಘಾಟಿಸುತ್ತಿರುವ ಗಣ್ಯರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಶನಿವಾರ ಕಸಾಪ ಅಧ್ಯಕ್ಷ ಮಹೇಶ್‌ಜೋಶಿ ವಿರುದ್ಧ ನಡೆದ ವಿಭಾಗ ಮಟ್ಟದ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಕನ್ನಡದ ನಾಡು, ನುಡಿ, ಸಂಸ್ಕೃತಿ ಬೆಳೆಸುವ ಸಲುವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಸಾಪ ಕಟ್ಟಿದರು. ಆದರೆ ಜೋಶಿಯಂಥ ಸರ್ವಾಧಿಕಾರಿ ಆ ಸ್ಥಾನದಲ್ಲಿ ಕುಳಿತು ಕ್ರೌರ್ಯ ಮೆರೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ನನ್ನ ವಿರುದ್ಧ ಹೋರಾಟದಲ್ಲಿ ರಾಜಕಾರಣ ಮಿಶ್ರಣವಾಗುತ್ತಿದೆ ಎಂದು ಜೋಶಿ ಪರೋಕ್ಷ ಟೀಕೆ ಮಾಡಿದ್ದಾರೆ. ಆದರೆ ಅವರಿಗೆ ಗೊತ್ತಿರಲಿ, ನಾನು ರಾಜಕೀಯ ಪ್ರವೇಶಕ್ಕೂ ಮುನ್ನ ಲೇಖಕ, ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಲೇಖಕರ ಸಮಾವೇಶ ನಡೆಸಿ ರಾಜ್ಯದ ಹೆಸರಾಂತ ಸಾಹಿತಿಗಳನ್ನು ಕರೆಸಿದ್ದೇನೆ. ಸಾಹಿತ್ಯವನ್ನೂ ರಚನೆ ಮಾಡಿದ್ದೇನೆ. ಜೋಶಿ ವಿರುದ್ಧ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲು ಯಾರಾದರೇನು ಎಂದು ಪ್ರಶ್ನಿಸಿದರು.

ತಮ್ಮ ತಪ್ಪುಗಳನ್ನು ಪ್ರಶ್ನಿಸಿದರೆ, ಟೀಕಿಸಿದರೆ ಅವರ ವಿರುದ್ಧ ಕೇಸು ಹಾಕುವುದೇ ದಿನನಿತ್ಯದ ಕೆಲಸವಾಗಿದೆ. ಕಸಾಪ ಅಧ್ಯಕ್ಷರಾಗಿ ಹಲವು ವರ್ಷಗಳು ಕಳೆದರೂ ಯಾವ ಕನ್ನಡ ಸಾಹಿತ್ಯ ಕಟ್ಟುವ ಕೆಲಸ ಮಾಡಿದ್ದಾರೆ. ಗನ್‌ಮ್ಯಾನ್, ಪೊಲೀಸ್ ಭದ್ರತೆ ಪಡೆಯಲು ನ್ಯಾಯಾಲಯದ ಮೊರೆ ಹೋಗುವ ಜೋಶಿ, ಈ ರೀತಿಯ ವಾತಾವರಣವನ್ನು ಏಕೆ ಸೃಷ್ಟಿ ಮಾಡಿಕೊಂಡರು ಎಂದು ಅವರೇ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಹೇಳಿದರು.

ಜೋಶಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸುವ ಸಲುವಾಗಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸ್ಕೃತಿ ಸಚಿವರು ಹಾಗೂ ಇಲಾಖೆಯ ಆಯುಕ್ತರು ಸೇರಿದಂತೆ ಹಲವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದೆ. ಇವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸುವವರೆಗೂ ನಮ್ಮ ಹೋರಾಟ ಹೀಗೆ ಮುಂದುವರೆಯಲಿದೆ ಎಂದರು.

ಇತಿಹಾಸ ತಜ್ಞ ಪ್ರೊ.ನಂಜರಾಜೇ ಅರಸ್ ಮಾತನಾಡಿ, ಜೋಶಿ ವಿರುದ್ಧ ಪ್ರತಿಭಟನೆ, ಅಬ್ಬರದ ಭಾಷಣದಿಂದ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲು ಸಾಧ್ಯವೇ ಇಲ್ಲ. ಇದರ ಬದಲಾಗಿ ಮುಖ್ಯಮಂತ್ರಿ ಭೇಟಿ ಮಾಡಿ ಮೂರು ದಿನ ಗಡುವು ಕೊಡಿ ಆದರೂ ಸಿಎಂ ಕ್ರಮ ಕೈಗೊಳ್ಳದಿದ್ದರೆ ಉಪವಾಸ ನಡೆಸಿ ಬಳಿಕ ಆಮರಣಾಂತ ಉಪವಾಸ ನಡೆಸಿ ಸರ್ಕಾರದ ಗಮನಸೆಳೆಯುವ ನಿಟ್ಟಿನಲ್ಲಿ ಹೋರಾಟ ರೂಪಿಸಿ ಎಂದು ಹೋರಾಟಗಾರರಿಗೆ ಕರೆ ನೀಡಿದರು.

ರೈತ ನಾಯಕಿ ಸುನಂದಾ ಜಯರಾಂ ಮಾತನಾಡಿ, 87ನೇ ಕನ್ನಡ ಸಾಹಿತ್ಯ ಸಮ್ಮೇಳನವು ಜಿಲ್ಲಾಡಳಿತ ಹಾಗೂ ಸರ್ಕಾರದ ಸಹಯೋಗದೊಂದಿಗೆ ಉತ್ತಮವಾಗಿ ನಡೆಯಿತು. ನಮಗೆ ಮಹಿಳಾ ಸಮಿತಿಯ ನೇತೃತ್ವ ನೀಡಲಾಗಿತ್ತು. ಆದರೆ ಸಮಿತಿಯಲ್ಲಿ ಖರ್ಚಾದ ಹಣದ ಸಂಪೂರ್ಣ ಲೆಕ್ಕವನ್ನು ಸಮ್ಮೇಳನ ನಡೆದ ಕೆಲವೇ ದಿನಗಳಲ್ಲಿ ಜಿಲ್ಲಾಡಳಿತಕ್ಕೆ ಸಲ್ಲಿಸಿದೆವು. ನಮ್ಮ ಮಾದರಿಯಲ್ಲಿಯೇ ಹಲವು ಸಮಿತಿಯ ನೇತೃತ್ವ ವಹಿಸಿದ್ದ ಶಾಸಕರು ಸಹ ಲೆಕ್ಕ ಕೊಟ್ಟರು. ಆದರೆ 2.50 ಕೋಟಿ ರೂ. ಹಣ ಬಳಸಿಕೊಂಡ ರಾಜ್ಯಾಧ್ಯಕ್ಷ ಜೋಶಿ ಇದುವರೆಗೂ ಲೆಕ್ಕ ಕೊಟ್ಟಿಲ್ಲ. ಕೂಡಲೇ ತಾವು ಬಳಸಿಕೊಂಡ ಹಣದ ಲೆಕ್ಕ ಕೊಡುವಂತೆ ತಾಕೀತು ಮಾಡಿದರು.

ಇದಕ್ಕೂ ಮುನ್ನ ನಗರದ ಆರ್‌ಪಿಸಿಎಂಎಸ್ ಆವರಣದಲ್ಲಿರುವ ಕುವೆಂಪು ಪ್ರತಿಮೆ ಮಾಲಾರ್ಪಣೆ ಮಾಡಲಾಯಿತು. ನಂತರ ಜೆ.ಸಿ.ವೃತ್ತದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ನಡೆದು ಜೋಶಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಸಾಹಿತಿ ಜಿ.ಸಿದ್ದರಾಮಯ್ಯ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳೇಗೌಡ ನಾಗವಾರ, ನಿವೃತ್ತ ಜಿಲ್ಲಾಧಿಕಾರಿ ರುದ್ರಪ್ಪ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪಾ, ನಿವೃತ್ತ ಕುಲಪತಿ ಪದ್ಮಾಶೇಖರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಮೀರಾಶಿವಲಿಂಗಯ್ಯ, ಪ್ರೊ.ಜಿ.ಟಿ.ವೀರಪ್ಪ ಎಂ.ವಿ.ಧರ್ಮೇಂದ್ರಸ್ವಾಮಿ, ತೈಲೂರು ವೆಂಕಟಕೃಷ್ಣ ಡಿ.ಪಿ.ಸ್ವಾಮಿ, ಎಚ್.ವಿ. ಜಯರಾಂ ಮತ್ತು ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ರಾಮನಗರ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸಾಹಿತಿಗಳು, ಸದಸ್ಯರು ಆಗಮಿಸಿದ್ದರು.

ಕೆಆರ್‌ಎಸ್ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್, ಕಾವೇರಿ ಆರತಿ ವಿರೋಧಿಸಿ ಪ್ರತಿಭಟನೆ


ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿರುವ ರೈತಸಂಘದ ಕಾರ್ಯಕರ್ತರು.

ಮಂಡ್ಯ,ಮೇ 17– ಕೆಆರ್‌ಎಸ್‌ನಲ್ಲಿ ಪ್ರಾರಂಭಿಸಲು ಹೊರಟಿರುವ ಅಮ್ಯೂಸ್‌ಮೆಂಟ್ ಪಾರ್ಕ್‌ನ್ನು ರದ್ದುಪಡಿಸಬೇಕು ಹಾಗೂ ಕಾವೇರಿ ಆರತಿ ಯೋಜನೆ ಕೈಬಿಟ್ಟು ಅದಕ್ಕೆ ಮೀಸಲಿಟ್ಟಿರುವ 92 ಕೋಟಿಯನ್ನು ಕೆಆರ್‌ಎಸ್ ಅಚ್ಚುಕಟ್ಟು ವಿತರಣಾ ನಾಲೆಗಳಿಗೆ ಆಧುನೀಕರಣಕ್ಕೆ ಬಳಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರ ನೇತೃತ್ವದಲ್ಲಿ ಜಮಾವಣೆಗೊಂಡು ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಕಬ್ಬಿಗೆ ಎಫ್‌ಆರ್‌ಪಿ ದರ ನಿಗದಿಪಡಿಸುವಾಗ ಶೇ.8.5 ರಷ್ಟು ಇಳುವರಿ ಆಧಾರದ ಮೇಲೆ ದರ ನಿಗದಿಪಡಿಸಬೇಕು. ರಾಜ್ಯ ಸರ್ಕಾರವು ಟನ್ ಕಬ್ಬಿಗೆ ಕನಿಷ್ಠ 500 ರೂ ಪ್ರೋತ್ಸಾಹಧನ ನೀಡಬೇಕು. ರೈತ ವಿರೋಧಿ ಮೂರು ಕಾಯ್ದೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಾಶ್ವತವಾಗಿ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಖಾಯಂ ಆಗಿ ಭತ್ತ ಹಾಗೂ ರಾಗಿ ಕೇಂದ್ರಗಳನ್ನು ತೆರೆದು ರೈತರಿಂದ ಮಿಲ್ ಪಾಯಿಂಟ್‌ನಲ್ಲಿ ಭತ್ತವನ್ನು ಖರೀದಿಸಬೇಕು. ಕೆಆರ್‌ಎಸ್ ಹಾಗೂ ಹೇಮಾವತಿ ಜಲಾಶಯಗಳಿಂದ ಹಾಲಿ ಬೆಳೆದು ನಿಂತಿರುವ ಫಸಲನ್ನು ಕಟಾವು ಮಾಡಬೇಕು. ಈಗಾಗಲೇ ಘೋಷಿಸಿರುವಂತೆ 150 ರೂ. ಕಬ್ಬಿನ ಬಾಕಿ ಪಾವತಿಸಲು ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು.

ರಂಗರಾಜನ್ ವರದಿಯಂತೆ ಪ್ರತಿವರ್ಷವೂ ಕಬ್ಬಿನ ಉಪ ಉತ್ಪನ್ನಗಳಲ್ಲಿ ಬರುವ ಲಾಭಾಂಶದಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಶೇ.70 ರಷ್ಟು ಲಾಭಾಂಶವನ್ನು ನೀಡುವಂತೆ ಸರ್ಕಾರವು ಆಯಾ ಸಕ್ಕರೆ ಕಾರ್ಖಾನೆಗಳಿಗೆ ನಿರ್ದೇಶನ ನೀಡಬೇಕು. ಕೃಷಿ ಪಂಪ್ ಸೆಟ್‌ಗಳ ಅಕ್ರಮ ಸಕ್ರಮಕ್ಕೆ ನಿಗದಿಪಡಿಸಿರುವ 25 ಸಾವಿರ ರೂ.ಗಳನ್ನು ರೈತರಿಂದ ಜಮಾಪಡಿಸಿಕೊಂಡು ಉಳಿದ ಎಲ್ಲ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಎಲ್.ಕೆಂಪೂಗೌಡ, ಪ್ರಧಾನ ಕಾರ್ಯದರ್ಶಿ ಜಿ.ಎಸ್.ಲಿಂಗಪ್ಪಾಜಿ, ಕೋಶಾಧ್ಯಕ್ಷ ಎಸ್.ಕೆ.ರವಿಕುಮಾರ್, ರಾಜ್ಯ ವಿಭಾಗೀಯ ಉಪಾಧ್ಯಕ್ಷ ಬೋರಾಪುರ ಶಂಕರೇಗೌಡ, ಮುಖಂಡರಾದ ದೇವರಾಜ್, ಶಿವರುದ್ರ ವಿನೋದ್‌ಬಾಬು ತೂಬಿನಕೆರೆ, ಮಂಜು ಕೋಣನಹಳ್ಳಿ, ರಘುಗೌಡ ಮಳವಳ್ಳಿ, ವಿಜಯ್‌ಕುಮಾರ್, ಅಣ್ಣಯ್ಯ, ರುದ್ರೇಶ್, ಮಮತಾ, ರಾಣಿ, ಲೀಲಾ ಇತರರು ಭಾಗವಹಿಸಿದ್ದರು.

ಬಾಲ್ಯವಿವಾಹ ತಡೆಗೆ ಪರಿಣಾಮಕಾರಿ ಕ್ರಮಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚನೆ


ಬಾಲ್ಯವಿವಾಹ ನಿಷೇಧ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಚಾಮರಾಜನಗರ, ಮೇ 17– ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಘೋಷಿಸುವ ಸಂಬಂಧ ಜನಸಾಮಾನ್ಯರಿಗೆ ಅರಿವು ಮೂಡಿಸುವ ಪರಿಣಾಮಕಾರಿ ಚಟುವಟಿಕೆಗಳನ್ನು ಪ್ರತಿ ಗ್ರಾಮ ಪಂಚಾಯಿತಿ, ಹೋಬಳಿ, ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲು ಅವಶ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಡಿಸಿ ಶಿಲ್ಪಾ ನಾಗ್ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಸಮ್ಮುಖದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಬಾಲ್ಯವಿವಾಹ ನಿಷೇಧ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಜಿಲ್ಲಾ ಕಾರಾಗೃಹದಲ್ಲಿ ಶೇ.50ರಷ್ಟು ಪೋಕ್ಸೋ ಪ್ರಕರಣಗಳಲ್ಲಿ ಯುವಕರು ಜೈಲುವಾಸ ಅನುಭವಿಸುತ್ತಿದ್ದಾರೆ. ಇದು ದುರದೃಷ್ಟಕರ ಸಂಗತಿ. ಬಾಲ್ಯವಿವಾಹ ನಡೆಯುವ ಮೊದಲೇ ಸೂಕ್ಷ್ಮ ನಿಗಾವಹಿಸಿ ಪ್ರಕರಣಗಳು ಜರುಗದಂತೆ ತಡೆಯುವುದೇ ಉತ್ತಮ ಕೆಲಸವಾಗಿದೆ. ಬಾಲ್ಯ ವಿವಾಹ ನಿರ್ಮೂಲನೆಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ಸೂಚಿಸಲಾಗಿದೆ ಎಂದರು.

ಮಾರ್ಚ್ 1ರಿಂದ ನವೆಂಬರ್ 14ರವರೆಗೆ ಜಿಲ್ಲೆಯ 130 ಗ್ರಾಮ ಪಂಚಾಯಿತಿ ಹಾಗೂ ತಾಲೂಕುಗಳನ್ನು ಬಾಲ್ಯ ವಿವಾಹದಿಂದ ಮುಕ್ತಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ನಿರಂತರ ಕಾರ್ಯಾಚರಣೆಗೆ ಮುಂದಾಗಬೇಕು. ಈ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಮಟ್ಟದ ಅಧಿಕಾರಿ, ಸಿಬ್ಬಂದಿಗಳನ್ನು ಗುರುತಿಸಿ ನ.14ರ ಮಕ್ಕಳ ದಿನಾಚರಣೆಯಂದು ಬಹುಮಾನ, ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ತಿಳಿಸಿದರು.

ಬಾಲ್ಯವಿವಾಹ ಜರುಗಿದ ಸಂದರ್ಭದಲ್ಲಿ ತಡೆಯಾಜ್ಞೆ ತರುವ ಕೆಲಸ ಬಾಲ್ಯವಿವಾಹ ನಿಷೇಧಿಕಾರಿಗಳಿಂದ ಆಗಬೇಕು. ಎಲ್ಲಾ ತಾಲೂಕುಗಳಲ್ಲಿ ತಹಶೀಲ್ದಾರ್ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬೀದಿ ನಾಟಕ ಹಾಗೂ ಸಂಗೀತ ಕಾರ್ಯಕ್ರಮಗಳ ಮೂಲಕ ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವ ಆಡುಭಾಷೆಯಲ್ಲಿ ಅರಿವು ಮೂಡಿಸಬೇಕು. ಮನೆ–ಮನೆ ಕಸ ಸಂಗ್ರಹಿಸುವ ಸ್ವಚ್ಛಭಾರತ್ ವಾಹನಗಳಲ್ಲಿ ಜಿಂಗಲ್ಸ್‌ಗಳನ್ನು ಪ್ಲೇ ಮಾಡಿಸುವ ಕಾರ್ಯ ವಾರದೊಳಗೆ ಆಗಬೇಕು ಮೊಬೈಲ್‌ಗಳಲ್ಲಿ ಕಾಲರ್ ಟೋನ್ ಅಳವಡಿಸಬೇಕು. ಐ.ಇ.ಸಿ ಕಾರ್ಯಕ್ರಮದಡಿ ಜಿಲ್ಲಾವ್ಯಾಪ್ತಿಯ ಎಲ್ಲೆಡೆ ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಘೋಷಣೆ ಕುರಿತ ಹೋರ್ಡಿಂಗ್ಸ್, ಫ್ಲೆಕ್ಸ್‌ಬೋರ್ಡ್ ಪ್ರದರ್ಶಿಸಬೇಕು. ಪೊಲೀಸ್ ಬ್ಯಾರಿಕೇಡ್‌ನಲ್ಲಿ ಬಾಲ್ಯವಿವಾಹ ನಿಷೇಧ ಕುರಿತ ಸ್ಟಿಕ್ಕರ್ ಅಳವಡಿಸಬೇಕು. ಪೊಲೀಸ್ ಇಲಾಖೆಯಿಂದ ಎಲ್ಲಾ ಶಾಲೆಗಳಲ್ಲಿ ಅಳವಡಿಸಿರುವ ಆಪ್ತಗೆಳತಿ ದೂರುಪೆಟ್ಟಿಗೆಯ ಸದುಪಯೋಗವಾಗಬೇಕು. ದೇವಸ್ಥಾನ, ಚರ್ಚ್, ಕಲ್ಯಾಣಮಂಟಪಗಳು ಹಾಗೂ ಮುದ್ರಣಾಲಯ ಗಳಿಗೆ ಮದುವೆಯಾಗುವ ಹುಡುಗ, ಹುಡುಗಿಯ ವಯಸ್ಸನ್ನು ಪರಿಶೀಲಿಸುವಂತೆ ಸಾರ್ವಜನಿಕ ಸುತ್ತೋಲೆಯನ್ನು ಆದಷ್ಟು ಶೀಘ್ರವಾಗಿ ಹೊರಡಿಸಲಾಗುವುದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಸಲುವಾಗಿ ಚೈಲ್ಡ್ ಮ್ಯಾರೇಜ್ ಪ್ರಿವೆನ್ಸನ್ ಪ್ರೊಟೆಕ್ಷನ್ ಕಮಿಟಿ ಕ್ರಿಯಾಶೀಲವಾಗಬೇಕು ಎಂದರು. ಜಿಪಂ ಸಿಇಓ ಮೋನಾ ರೋತ್, ಎಎಸ್‌ಪಿ ಎಂ.ಎನ್. ಶಶಿಧರ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಡಿವೈಎಸ್‌ಪಿ ಲಕ್ಷ್ಮಯ್ಯ, ಜಿಲ್ಲಾ ಮಕ್ಕಳ ರಕ್ಷಣಾಧಿ ಕಾರಿ ಚಲುವರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮಂಜುನಾಥ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಾಳೆ ವಿವಿ ವಾರ್ಷಿಕ ಕ್ರೀಡಾಕೂಟ

ಚಾಮರಾಜನಗರ: ವಿಶ್ವವಿದ್ಯಾನಿಲಯದ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಕಾರ್ಯ ಕ್ರಮವನ್ನು ಮೇ 19ರ ಬೆಳಿಗ್ಗೆ 9.30ಕ್ಕೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಪರೇಷನ್ ಸಿಂಧೂರ ಯಶಸ್ವಿ ಚಾ.ನಗರದಲ್ಲಿ ತಿರಂಗಾ ಯಾತ್ರೆ


ರಾಷ್ಟ್ರ ರಕ್ಷಣೆಗಾಗಿ ನಾಗರಿಕರು ಎಂಬ ಧ್ಯೇಯದೊಂದಿಗೆ ಬೃಹತ್ ತಿರಂಗಯಾತ್ರೆ ನಡೆಯಿತು.

ಚಾಮರಾಜನಗರ, ಮೇ 17 – ಆಪರೇಷನ್ ಸಿಂಧೂರ ಕಾರ್ಯಾಚರಣೆ ಯಶಸ್ವಿಯಾದ ಹಿನ್ನಲೆಯಲ್ಲಿ ನಾಗರಿಕರಿಂದ ರಾಷ್ಟ್ರ ರಕ್ಷಣೆಗಾಗಿ ನಾಗರಿಕರು ಎಂಬ ಧ್ಯೇಯದೊಂದಿಗೆ ನಗರದಲ್ಲಿ ಬೃಹತ್ ತಿರಂಗಯಾತ್ರೆ ನಡೆಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮರಿಯಾಲ ಇಮ್ಮಡಿ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, ನಗರದ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಶ್ರೀಚೆನ್ನಬಸವಸ್ವಾಮೀಜಿ ತಿರಂಗಯಾತ್ರೆಗೆ ಚಾಲನೆ ನೀಡಿದರು. ಯಾತ್ರೆಯು ರಥಬೀದಿ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ. ಡೀವಿಯೇಷನ್ ರಸ್ತೆ ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದ ಮುಂಭಾಗಕ್ಕೆ ತೆರಳಿ ಮುಕ್ತಾಯಗೊಂಡಿತು. ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಎಬಿವಿಪಿ ವಿವಿಧ ಸಂಘ, ಸಂಸ್ಥೆಗಳ ಪ್ರಮುಖರು, ಬಿಜೆಪಿ ಕಾರ್ಯಕರ್ತರು ಯಾತ್ರೆಯಲ್ಲಿ ಭಾಗವಹಿಸಿದ್ದರು.

ಚಾಲನೆ ನೀಡಿದ ಮರಿಯಾಲ ಇಮ್ಮಡಿ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿ, ವೀರ ಯೋಧರು ಪ್ರಾಣವನ್ನು ಒತ್ತೆಯಿಟ್ಟು ಉಗ್ರರನ್ನು ಸೆದೆ ಬಡಿದು ನಮ್ಮೆಲ್ಲರನ್ನು ರಕ್ಷಣೆ ಮಾಡಿದ್ದಾರೆ, ಅವರಿಗೆ ನಾವೆಲ್ಲರೂ ಜಾತ್ಯಾತೀತವಾಗಿ, ಪಕ್ಷತೀತವಾಗಿ ಬೆಂಬಲ ನೀಡಬೇಕಿದೆ ಎಂದರು.

ಹಿಂದೂ ಜಾಗರಣಾ ವೇದಿಕೆಯ ಪ್ರಾಂತ್ಯ ಸಹ ಸಂಚಾಲಕ ಮಹೇಶ್, ಎಬಿವಿಪಿ ರಾಜ್ಯ ಉಪಾಧ್ಯಕ್ಷೆ ಡಾ. ನಿರ್ಮಲಾ ಮಾತನಾಡಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್, ಮಾಜಿ ಶಾಸಕ ಎಸ್.ಬಾಲರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭಾ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷೆ ಮಮತ, ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ನಾರಾಯಣ ಪ್ರಸಾದ್, ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಬಾಲಸುಬ್ರಹ್ಮಣ್ಯ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡುಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಡಾ. ಎ.ಆರ್. ಬಾಬು, ನೂರೊಂದುಶೆಟ್ಟಿ, ಜಿಪಂ ಮಾಜಿ ಸದಸ್ಯ ಬಾಲರಾಜು, ನಗರಸಭಾ ಸದಸ್ಯರಾದ ಸುದರ್ಶನ್ ಗೌಡ, ಗಾಯಿತ್ರಿ, ಕುಮುದಾ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಜಿಲ್ಲಾ ಕಾರ್ಯದರ್ಶಿ ನಟರಾಜು, ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ, ಉಪಾಧ್ಯಕ್ಷ ಬುಲೆಟ್ ಚಂದ್ರು, ಜಿಲ್ಲಾ ಸಹ ಮಾಧ್ಯಮ ಪ್ರಮುಖ್ ಶಿವಣ್ಣ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುಂದ್ರಪ್ಪ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಮಹದೇವ ಪ್ರಸಾದ್, ಅರಕಲವಾಡಿ ಮಹೇಶ್, ಅನಿಲ್, ವೃಷಭೇಂದ್ರಸ್ವಾಮಿ, ನಾಗೇಶ್, ರಾಜು, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಕೂಸಣ್ಣ, ಜಿಲ್ಲಾ ಮಹಿಳಾ ಅಧ್ಯಕ್ಷೆ ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಶೈಲಜಾ, ನಗರಸಭಾ ಸದಸ್ಯ ಮನೋಜ್ ಪಟೇಲ್ ಮಾಜಿ ಸದಸ್ಯ ಶಿವಣ್ಣ ಅರಕಲವಾಡಿ ನಾಗೇಂದ್ರ ಇತರರು ಭಾಗವಹಿಸಿದ್ದರು.


ಶಿವಸ್ವಾಮಿ ಹೆಗ್ಗೋಠಾರ ಬಸವ ಕೇಂದ್ರದ ತಾಲೂಕು ಅಧ್ಯಕ್ಷ



ಚಾಮರಾಜನಗರ: ತಾಲೂಕಿನ ಹೆಗ್ಗೋಠಾರ ಗ್ರಾಮದ ರೈತ ಮುಖಂಡ ಶಿವಸ್ವಾಮಿ ಬಸವ ಕೇಂದ್ರದ ತಾಲೂಕು ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಬಸವಾದಿ ಶರಣರ ಚಿಂತನೆಗಳನ್ನು ತಾಲೂಕಿನಾದ್ಯಂತ ಪ್ರಚುರಪಡಿಸಲು ಹಾಗೂ ಶರಣ ಸಂಗಮ ಕಾರ್ಯಕ್ರಮಗಳನ್ನು ಆಯೋಜಿಸುವುದು ಜೊತೆ–ಜೊತೆಗೆ ಶರಣರ ಜಯಂತಿಗಳನ್ನು ಆಚರಿಸುತ್ತಾ ಬಸವಾದಿ ಶರಣರ ಚಿಂತನೆಗಳನ್ನು ಪ್ರಚುರ ಪಡಿಸುವಲ್ಲಿ ತೊಡಗಿಸಿಕೊಳ್ಳಬೇಕಾಗಿ ಆದೇಶ ಪತ್ರದಲ್ಲಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ತಿಳಿಸಿದ್ದಾರೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 18–05–2025

ಶಾಕ್ ಕೊಟ್ಟಿದ್ರು ಗೌಡ್ರು...!?



ಸನ್ಮಾನ್ಯ ಎಚ್.ಡಿ.ದೇವೇಗೌಡರು ತೊಂಬತ್ತೆರಡು (2025) ವರ್ಷಕ್ಕೆ ಕಾಲಿಟ್ಟಿದ್ದಾರೆ. ಬಹುಶಃ ಅವರಷ್ಟು ಅವಹೇಳನಕ್ಕೆ, ಭರ್ತ್ಸನೆಗೆ ವಿನಾಕಾರಣ ಗುರಿಯಾದ ಬೇರೊಬ್ಬ ನಾಯಕನಿಲ್ಲ. ಭ್ರಷ್ಟ ಅಂತಲೋ, ನಿಷ್ಕ್ರಿಯ ಮಂತ್ರಿ ಅಂತಲೋ ಮಾಡಿದ ಟೀಕೆ ಅದಲ್ಲ. ಹಳ್ಳಿಗುಗ್ಗು, ಗಮಾಡ್, ದಡ್ಡ, ಲಕ್ಕಲ್ಲಿ ಕ್ಲಿಕ್ ಆದವ, ಯೋಗ್ಯತೆಯೇ ಇಲ್ಲದವ ಎಂಬಂತಹ ಕುತ್ಸಿತ ಟೀಕೆಗಳು.

ಹಾಗೆಂದು ಅವರು ಜನರಿಂದ ಎಂದೂ ದೂರ ಹೋಗಲಿಲ್ಲ. ಬದಲಿಗೆ ಅವರೊಂದಿಗೇ ಇದ್ದು ಉನ್ನತ ಹುದ್ದೆಯನ್ನೂ ಹತ್ತಿ ಬಂದರು. 50–60 ವರ್ಷಗಳ ರಾಜಕೀಯದಲ್ಲಿ ಅವರೆಂದೂ ಪಕ್ಷ ಬದಲಿಸಲಿಲ್ಲ. ಹತ್ತಿರ ಇಟ್ಟುಕೊಂಡ ಆಪ್ತರೂ ದೂರ ಹೋಗಿ ಬಿಡುತ್ತಿದ್ದರು. ಒಂದು ಹಂತದಲ್ಲಿ ಅವರ ಪಕ್ಷದಲ್ಲಿ ಇಬ್ಬರೇ ಶಾಸಕರು ಉಳಿದಿದ್ದರು. ಒಬ್ಬಂಟಿಯಾದಾಗಲೆಲ್ಲಾ ಜನರ ಬಳಿ ಹೋಗಿ, ಅವರೊಂದಿಗೇ ಇದ್ದು ಏಗಿ, ಹೆಣಗಾಡಿ ಬೈಸಿಕೊಂಡು ಅಸ್ತಿತ್ವ ಕಂಡು ಕೊಂಡವರು ದೇವೇಗೌಡರು. ಅವರನ್ನು ಬೈದು ದೂರೀಕರಿಸಿದವರೇ ನಂತರ ತಮ್ಮ ಬಳಿ ತಲೆಕೆರೆದು ಕೊಂಡು ಬರುವಂತೆ ಮಾಡಿದವರು.

* * * *

ಅದು ಹೇಗೋ ಅವರೊಂದಿಗೆ ನಾಲ್ಕಾರು ಬಾರಿ ನಾನು ಅವರ ಒಡನಾಡುವ ಪ್ರಸಂಗಗಳು ನಡೆದವು. ಅವರ ವ್ಯಕ್ತಿತ್ವ ಹೇಗಿದ್ದೀತು ಎಂಬುದಕ್ಕೆ ವಿವರಣೆಯೇ ಬೇಡ. ಪ್ರಸಂಗಗಳೇ ಹೇಳುತ್ತವೆ. ಅವರನ್ನು ಅವಹೇಳನ ಮಾಡಿದ ದಿನವೂ ಇದೆ. ಅದನ್ನು ನಂತರ ಬರೆಯುವೆ. ಈ ಅನುಭವ ನೋಡಿ:

1998. ಜನತಾದಳದ ಬೃಹತ್ ರಾಜ್ಯ ಸಮಾವೇಶ. ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿ ಆಯೋಜಿಸಲಾಗಿತ್ತು. ಅರುವತ್ತು ಸಾವಿರ ಜನಕ್ಕೆ ನಿರ್ಮಿಸಿದ ಬೃಹತ್ ಶಾಮಿಯಾನ ಚಪ್ಪರ. ಮಾಜಿ ಪ್ರಧಾನಿ ದೇವೇಗೌಡರು ಸಮಾವೇಶ ಉದ್ಘಾಟಿಸಲು ಬರಲಿದ್ದರು. ಮುಖ್ಯಮಂತ್ರಿ ಪಟೇಲರಾದಿಯಾಗಿ ಮಂತ್ರಿಮಂಡಲವೇ ವೇದಿಕೆಯಲ್ಲಿತ್ತು.

ಮಾಜಿ ಪ್ರಧಾನಿಗಳ convoy (ಬೆಂಗಾವಲು ವಾಹನಸಾಲು) ಸಮಾವೇಶದ ವೇದಿಕೆಯ ಜಾಗಕ್ಕೆ ನೇರವಾಗಿ ಬರಲಿತ್ತು. ಮಾಜಿ ಪ್ರಧಾನಿಗಳು ಕಾನ್ವಾಯ್ ಕಾರಿನಿಂದ ವೇದಿಕೆಗೆ ಹತ್ತುವ ತನಕ ಪೂರ್ವಭಾವಿಯಾಗಿ ಎರಡು ರಿಹರ್ಸಲ್ ನಡೆದಿದ್ದವು. ಮಾಜಿ ಪ್ರಧಾನಿಯಾದರೇನು? ಅವರೇ ತಮಗಿದೆಲ್ಲಾ ಬೇಡವೆಂದರೂ, ಇಂತಹ ಭದ್ರತಾ ವ್ಯವಸ್ಥೆಗಳನ್ನು ಒಂದಿನಿತೂ ಲೋಪವಿಲ್ಲದಂತೆ ಪಕ್ಕಾ ಮಾಡಲೇಬೇಕಿತ್ತು. ಸುರಕ್ಷತೆಗೇ ಆದ್ಯತೆ.

ಮಾಜಿ ಪ್ರಧಾನಿಗಳು ಸರ್ಕಾರಿ ಭವನ ಬಿಟ್ಟು ಸಮಾವೇಶದ ಸ್ಥಳಕ್ಕೆ ಬರುತ್ತಾ ಇದ್ದಾರೆ. ಈಗಿನ ಲೋಕೇಶನ್ ಹಾರ್ಡಿಂಜ್ ಸರ್ಕಲ್ ಎಂದು ಕಂಟ್ರೋಲ್ ರೂಮ್ ಬಿತ್ತರಿಸಿತು.

ಹಾದಿಯುದ್ದಕ್ಕೂ ನೇಮಿಸಿದ್ದ ಪೊಲೀಸ್ ಜಾಗೃತವಾಯಿತು. ಆಯಾ ಸರ್ಕಲ್‌ಗಳ ರಸ್ತೆ ಸಂಚಾರ ಸಂಪೂರ್ಣ ಬಂದ್ ಆದವು. ಕಾನ್ವಾಯ್ ಸುಗಮವಾಗಿ ಸಾಗಿತು.

ಕಾನ್ವಾಯ್ ಹೊರಡುವ ಕಾಲುಗಂಟೆ ಮೊದಲೇ ವಾರ್ನಿಂಗ್ ವಾಹನ ಸೈರನ್ ಊದುತ್ತಾ ಸಾಗುತ್ತದೆ. ರಸ್ತೆಯ ಸುರಕ್ಷತೆಗೆ ಯಾವ ಅಡೆತಡೆಯೂ ಇಲ್ಲ ಎಂಬುದನ್ನು ಖುದ್ದು ಖಚಿತಪಡಿಸಿಕೊಳ್ಳುವುದಷ್ಟೇ ಅಲ್ಲದೆ, ಹಾದಿಯಲ್ಲಿರುವ ಎಲ್ಲ ಪೊಲೀಸರನ್ನೂ ಎಚ್ಚರವಾಗಿರುವಂತೆ ಸೂಚಿಸುತ್ತಾ ಸಾಗುತ್ತದೆ. ಅದಾದ ನಂತರವೇ ಪೈಲೆಟ್ ವಾಹನ ಕೆಂಪು ಬಾವುಟದೊಂದಿಗೆ ಮುನ್ನುಗ್ಗುತ್ತದೆ. ಇದನ್ನು ಹಿಂಬಾಲಿಸಿ ಭದ್ರತಾ ವಾಹನಗಳು, ಬೆಂಗಾವಲು, ವಾಹನಗಳು, ಜಾಮರ್ ವಾಹನಗಳು ಒಂದರ ಹಿಂದೊಂದು ಮೂವತ್ತು ವಾಹನಗಳು ಧಾವಿಸಿ ಬರುತ್ತವೆ.

ಒಂದೊಂದು ವಾಹನಕ್ಕೂ 60–70 ಅಡಿಯಷ್ಟು ಅಂತರವಿರುವಂತೆ ವೇಗ ನಿಯಂತ್ರಿಸಿಕೊಂಡು ಸಾಗುತ್ತಾರೆ. ಇವುಗಳ ನಡುವೆ ಮಾಜಿ ಪ್ರಧಾನಿ ಅಥವಾ ಅತಿ ಗಣ್ಯವ್ಯಕ್ತಿಯ ಕಾರು ಇರುತ್ತದೆ. ಅವರನ್ನು ಹಿಂಬಾಲಿಸುತ್ತಾ ಹಿರಿಯ ಅಧಿಕಾರಿಗಳ, ಇತರ ಮುಖ್ಯರ, ಆಂಬುಲೆನ್ಸ್, ಅಗ್ನಿಶಾಮಕ ದಳ ಇತ್ಯಾದಿ ವಾಹನಗಳು ಧಾವಿಸುತ್ತವೆ. ಒಮ್ಮೆ ಕಾನ್ವಾಯ್‌ನಲ್ಲಿ ಸೇರ್ಪಡೆಯಾದರೆಂದರೆ ಮುಗಿಯಿತು. ಯಾವ ವಾಹನವೂ ಸ್ವತಂತ್ರವಾಗಿ ಅತ್ತಿತ್ತ ಹೋಗುವಂತಿಲ್ಲ ರೈಲ್ವೆ ಬೋಗಿಯಂತೆ ಸಾಗಬೇಕು!

ಆ ದಿನ ನನಗೆ ವೇದಿಕೆಯ ಪ್ರವೇಶದಲ್ಲಿ ಡ್ಯೂಟಿ. ಇತರ ಅಧಿಕಾರಿಗಳೊಂದಿಗೆ ಕಾಯುತ್ತಾ ನಿಂತಿದ್ದೆ. ಕಾರಿಳಿದು ಬರುವ ಮಾಜಿ ಪ್ರಧಾನಿಗಳನ್ನು ವೇದಿಕೆಗೆ ಬರಮಾಡಿಕೊಂಡು, ಅವರ ನಂತರ ವೇದಿಕೆಗೆ ಮತ್ತಾರೂ ಪ್ರವೇಶಿಸದಂತೆ ನಿರ್ಬಂಧಿಸುವ ಕೆಲಸ ನನ್ನದು. ಅಕಸ್ಮಾತ್ ನಂತರ ಪ್ರವೇಶಿಸಲು ಯಾರಾದರೂ ಪ್ರಮುಖ ಮಂತ್ರಿಗಳಿದ್ದಲ್ಲಿ, ಸೂಕ್ತ ತಪಾಸಣೆ ಮಾಡಿ ಒಳಬಿಡುವ ಹೊಣೆಗಾರಿಕೆಯೂ ಜೊತೆಗೂಡಿತ್ತು.

ಆ ಗೇಟಿನಲ್ಲಿ ಮಂತ್ರಿಗಳಿಗಿಂತ ಕಂತ್ರಿಗಳದ್ದೇ ಕಾಟ. ಕ್ಲೋಸ್ ಕಾಲರ್ ಕೋಟು, ಟೋಪಿ, ತ್ರಿಭುಜಾಕಾರದ ಶಾಲು, ಖಾದಿ ಉಡುಗೆ ತೊಡುಗೆಗಳ ಗೆಟಪ್ಪು. ತಾನೊಬ್ಬ ಅತಿ ಮುಖ್ಯ ವ್ಯಕ್ತಿ ಎಂಬ ಪೋಸಿನೊಂದಿಗೆ ಬರುವ ನಕಲಿಗಳನ್ನು ತಡೆಯಲೇಬೇಕು. ಇಂತಹ ಕಡೆ ಜಟಾಪಟಿ ಮಾತು ಅನಿವಾರ್ಯ. ನಾನಾ ಪ್ರಮುಖರ ನೇರ ಪರಿಚಯ ನನಗಿದ್ದುದರಿಂದ ಆ ಜಾಗಕ್ಕೆ ನೇಮಕ ಮಾಡಿದ್ದರು.

ವಸ್ತುಪ್ರದರ್ಶನ ಆವರಣವನ್ನು ಕಾನ್ವಾಯ್ ಪ್ರವೇಶಿಸಿತು ಎಂದು ಕಂಟ್ರೋಲ್ ರೂಂ ಹೇಳಿತು. ಸೈರನ್ ಸದ್ದು ಮೊಳಗಿತು. ಮಾಜಿ ಪ್ರಧಾನಿಗಳು ವೇದಿಕೆಗೆ ಬರಲು ಇದ್ದ ಸಮಯ ಕೇವಲ ನಾಲ್ಕಾರು ನಿಮಿಷ ಮಾತ್ರ, ಎಲ್ಲರೂ ಜಾಗೃತರಾದರು. ಜನಸಂದಣಿಯನ್ನು ಒಪ್ಪ ಮಾಡಿ ನಿಲ್ಲಿಸಿದರು. ಮೊದಲಿಗೆ ವಾರ್ನಿಂಗ್ ಜೀಪು, ಪೈಲೆಟ್ ವಾಹನಗಳು ಸಾಲಾಗಿ ಧಾವಿಸಿದವು. ನೋಡಿದರೆ ಮಾಜಿ ಪ್ರಧಾನಿಗಳ ಕಾರೇ ಇಲ್ಲ!. ಅದೋ ಅರವತ್ತು ಸಾವಿರ ಜನರ ಬೃಹತ್ ಜನಸಾಗರ. ಆ ದಟ್ಟ ಶರಧಿಯಲ್ಲಿ ಎಲ್ಲಿದ್ದಾರೆ! ಗೊತ್ತಾಗಲಿಲ್ಲ.

ಏನೋ ಅನಿರೀಕ್ಷಿತ ಅಪಾಯ ಎದುರಾಗಿರಬೇಕು. ಅವರನ್ನು ತಕ್ಷಣ ಸೇಫ್ ಹೌಸಿಗೆ (ಅಕಸ್ಮಾತ್ ಅವಘಡ ಎದುರಾದರೆ ಬೇರೆ ರಸ್ತೆಯಿಂದ ಸುರಕ್ಷಿತ ಗೃಹಕ್ಕೆ ಕರೆದೊಯ್ಯುತ್ತಾರೆ. ನಾಲ್ಕಾರು ಅಂತಹ ಎಮರ್ಜೆನ್ಸಿ ಗುಪ್ತ ಗೃಹಗಳಿರುತ್ತವೆ) ಕರೆದೊಯ್ದಿರಬೇಕು ಎಂದು ಅನುಭವ ಹೇಳಿತು. ಯಾವ ಕಾರಣಕ್ಕೂ ಅತಿ ಗಣ್ಯರ ಕಾರು ಕಾನ್ವಾಯ್ ಸಾಲನ್ನು ಬಿಡುವಂತೆಯೇ ಇಲ್ಲ. ಆ ಕಾರು ಎಲ್ಲಿಗೆ ಹೋಯಿತು! ಚಿಕ್ಕ ಕಂಪಿತ ಆತಂಕ ಆಶ್ಚರ್ಯಗಳಿಂದ ಕಾಯತೊಡಗಿದೆವು.

ಅಷ್ಟರಲ್ಲಿ ಸಮಾವೇಶದ ಆರಂಭದಲ್ಲಿ ಕುಳಿತಿದ್ದ ಜನಸಾಗರ ಅತ್ತಿತ್ತ ಹೊಯ್ದಾಡುವುದು ಕಾಣಿಸಿತು. ಜೈಕಾರ ಹಾಕುವ ಗದ್ದಲವೂ ಕೇಳಿಸಿತು. ಇಡೀ ಸಭಾಂಗಣ ಧಿಗ್ಗನೇ ಎದ್ದು ನಿಂತಿತು. ಏನಾಗುತ್ತಿದೆ ಎಂಬುದೇ ಗೊತ್ತಾಗದ ಅಯೋಮಯ ಸ್ಥಿತಿ. ಮಾಜಿ ಪ್ರಧಾನಿಗಳ ಕಾರೂ ವೇದಿಕೆಯತ್ತ ಬಂದಿಲ್ಲ. ಅದು ಯಾವ ಕಾರಣಕ್ಕೂ ಎಲ್ಲೂ ನಿಲ್ಲುವಂತೆಯೇ ಇಲ್ಲ. ಏನೋ ಅನಾಹುತವಾಗಿರಬೇಕು ಎಂದು ಎಲ್ಲರಿಗೂ ಅನ್ನಿಸಿತು.

> ಭಾನುವಾರ (ಮೇ 18) ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ 92ನೇ ವರ್ಷದ ಹುಟ್ಟುಹಬ್ಬ. ಈ ಸಂದರ್ಭದಲ್ಲಿ ಮೇರು ಜನನಾಯಕನ ವಿಶೇಷ ಪ್ರಸಂಗ ನಮ್ಮ ಓದುಗರಿಗಾಗಿ.

ಅತ್ತ ಕಂಟ್ರೋಲ್ ರೂಂ,

ಮಾಜಿ ಪ್ರಧಾನಿಗಳು ಸಭಾ ಮಧ್ಯದ ಪ್ಯಾಸೇಜಿನಲ್ಲಿ ನಡೆದುಕೊಂಡು ಮುಖ್ಯ ವೇದಿಕೆಯತ್ತ ಹೋಗ್ತಾ ಇದ್ದಾರೆ. ಆಫೀಸರ್ಸ್ ತಕ್ಷಣ ಅಲರ್ಟ್ ಆಗಿ. ಜನಗಳು ಮಾಜಿ ಪ್ರಧಾನಿಗಳ ಹತ್ತಿರ ಸುತ್ತುವರೆಯದಂತೆ ನೋಡಿಕೊಳ್ಳಿ. ತಕ್ಷಣ human barricade (ಮಾನವ ಸರಪಳಿ) ಮಾಡಿ ವಿವಿಐಪಿಯನ್ನು ಕವರ್ ಮಾಡಿ...? ಒಂದೇ ಸಮನೆ ಒರಲತೊಡಗಿತು.

ಆ ತತ್‌ಕ್ಷಣ ಮಾನವ ಸರಪಳಿ ರಚಿಸಿಕೊಂಡು ವಿವಿಐಪಿಯನ್ನು ಸುತ್ತುವರೆಯುವವರು ಯಾರು. ಅಸಲಿಗೆ ಅತಿಗಣ್ಯರು ಸಭಾ ದ್ವಾರದಿಂದ ನಡೆದು ಬರುತ್ತಾರೆಂಬ ಸಣ್ಣ ಸುಳಿವೂ ಅಲ್ಲಿದ್ದ ಅಧಿಕಾರಿಗಳಿಗೇ ಗೊತ್ತಿಲ್ಲ. ಇನ್ನು ಸಿಬ್ಬಂದಿಗೆ ಹೇಗೆ ತಾನೇ ತಿಳಿದಿದ್ದಾತು! ಇದೆಲ್ಲವೂ ಕ್ಷಣಾರ್ಧದಲ್ಲಿ ನಡೆದು ಹೋದ ಘಟನೆ.

ಮಾಜಿ ಪ್ರಧಾನಿಗಳ ಮೇಲೆ ಹಲ್ಲೆ ಮಾಡುವುದಿರಲಿ, ಅಭಿಮಾನಿಯೊಬ್ಬ ಮೈಮುಟ್ಟಿ ಎಳೆದಾಡಿದರೂ ಅದೇ ದೊಡ್ಡ ಭದ್ರತಾ ಲೋಪವೆನಿಸಿ, ಅನೇಕರ ತಲೆದಂಡವಾಗಿ ಬಿಡುತ್ತದೆ.

ವೇದಿಕೆಯ ಹತ್ತಿರವಿರುವ ಅಧಿಕಾರಿಗಳೆಲ್ಲ ಸೀದಾ ಮುಂದೆ ಹೋಗಿ ಅತಿಗಣ್ಯರನ್ನು ಕವರ್ ಮಾಡಿಕೊಂಡು ಬೆಂಗಾವಲಾಗಿ (escort) ಬನ್ನಿ ಎಂಬ ಆದೇಶ ಕಂಟ್ರೋಲ್ ರೂಮಿನಿಂದ ಬಂದಿತು. ವೇದಿಕೆ ಬಿಟ್ಟು ನಾವೆಲ್ಲರೂ ಮಾಜಿ ಪ್ರಧಾನಿಗಳು ಬರುತ್ತಿದ್ದ ಜಾಗಕ್ಕೆ ಓಡತೊಡಗಿದೆವು. ಅದು ಮುಖ್ಯ ವೇದಿಕೆಯಿಂದ ಎರಡು ಫರ್ಲಾಂಗ್ ದೂರದಲ್ಲಿತ್ತು.

ಅಷ್ಟರಲ್ಲಿ ಕಮೀಷನರ್ ಕೆಂಪಯ್ಯನವರ ಆದೇಶ ನೇರವಾಗಿ ವೈರ್‌ಲೆಸ್ಸಿನಲ್ಲಿ ಧ್ವನಿಸಿತು: “ವೇದಿಕೆಯಲ್ಲಿರುವ ಅಧಿಕಾರಿಗಳೆಲ್ಲರೂ ಒಮ್ಮೆಲೇ ಹೋಗಬೇಡಿ. 2+10 ಅಧಿಕಾರಿಗಳು (skeleton staff) ವ್ಯೆಂವ್ಯೆಲ್ಲಾ ಎಚ್ಚರವಾಗಿ ವೇದಿಕೆಯಲ್ಲೇ ಇರಲಿ. ಉಳಿದವರು ಮಾತ್ರ ಅತಿಗಣ್ಯರ ಬಳಿಗೆ ಹೋಗಿ. ಜನ ಜಂಗುಳಿಯ ಹದ ಕೆಡದಂತೆ ನಿಯಂತ್ರಿಸಿ!.

ಸಮಾವೇಶದಲ್ಲಿದ್ದ ಹಿರಿಯ ಕಿರಿಯ ಅಧಿಕಾರಿಗಳೆಲ್ಲರಿಗೂ ಯಾರು ಯಾವ ಕೆಲಸ ಮಾಡಬೇಕೆಂದು ಗೊತ್ತಾಗದ ದಿಙ್ಮೂಢತೆ!. ಏನೆಲ್ಲಾ ಪೂರ್ವಾಭ್ಯಾಸ ಮಾಡಿದ್ದರೂ ಈ ಗುರುತರ ಪ್ರಮಾದ ಹೇಗಾಯಿತು. ಹತ್ತಿರ ಹತ್ತಿರ ಅರವತ್ತು ಸಾವಿರ ಸೇರಿರುವ ಜನಸಂದಣಿಯಲ್ಲಿ ಯಾವ ಕ್ಷಣ ಏನು ಬೇಕಾದರೂ ಆಗಿಬಿಡಬಹುದು. ದುಷ್ಕರ್ಮಿಗಳು ಸೇರಿದ್ದರಂತೂ ಆಗಬಹುದಾದ ಅನಾಹುತವನ್ನು ಕಲ್ಪಿಸುವುದೇ ಬೇಡ.

ನಾವುಗಳು ಹೋಗುವಷ್ಟರಲ್ಲಿ ಮಾಜಿ ಪ್ರಧಾನಿಗಳು ಮುಗುಳ್ನಗುತ್ತಾ ಕೈ ಬೀಸುತ್ತಾ ಆನಂದವಾಗಿ ಪ್ಯಾಸೇಜಿನಲ್ಲಿ ಬರುತ್ತಿದ್ದಾರೆ!. ಒಂದಷ್ಟು ಸಿಬ್ಬಂದಿ ಅವರನ್ನು ಸುತ್ತುವರೆದು ಜನ ನುಗ್ಗದಂತೆ ಹರಸಾಹಸಪಡುತ್ತಿದ್ದಾರೆ. ಆ ಜನಜಂಗುಳಿಯಲ್ಲಿ ನಮಗ್ಯಾರಿಗೂ ಅತಿಗಣ್ಯರನ್ನು ಸಮೀಪಿಸಲು ಸಾಧ್ಯವೇ ಆಗದಾಯಿತು.

ಅಕಸ್ಮಾತ್ ಏನಾದರೂ ಸ್ಫೋಟವಾದರೆ ಎಂಬ ರಾಜೀವ್ ಗಾಂಧಿ ದುರಂತದ ನೆನಪು; ಅದೇ ಕಾಲಮಾನದಲ್ಲಿ ತೋಟಗಾರಿಕೆ ಸಚಿವ ಡಿ.ಟಿ.ಜಯಕುಮಾರ್ ಅವರ ಮೇಲೆ ನಡೆದಿದ್ದ ಹಲ್ಲೆಯೂ ನೆನಪಾಗುತ್ತಿತ್ತು. ಜನರಿಂದ ಅಹವಾಲು ಸ್ವೀಕರಿಸುತ್ತಿದ್ದ ಸಚಿವರಿಗೆ ಮನವಿ ಪತ್ರ ಕೊಟ್ಟವನೊಬ್ಬ, ದಿಢೀರನೆ ಕಪಾಳಮೋಕ್ಷ ಮಾಡಿದ್ದ!.

ಅಚಾನಕ್ಕಾಗಿ ಆ ಘಟನೆ ತುಂಬಿದ ಸಭೆಯಲ್ಲಿ ನಡೆದು ಹೋಗಿತ್ತು. ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ತೊಂದರೆ ಅನುಭವಿಸಿದ್ದರು. ಲೋಪ ಯಾರದೇ ಆಗಿರಲಿ, ಹೇಗೇ ಆಗಿರಲಿ ಹೊಣೆಗಾರಿಕೆಯ ಗೂಬೆ ಮಾತ್ರ ಪೊಲೀಸರ ಮೇಲೆ.


ಅಂತೂ ಮಾಜಿ ಪ್ರಧಾನಿಗಳು ಯಾವುದೇ ಅಡಚಣೆ ಇಲ್ಲದಂತೆ ವೇದಿಕೆ ಹತ್ತಿದರು. ಅವರಿಗೇನೂ ತೊಂದರೆಯಾಗಲಿಲ್ಲವೆಂದರೆ ಭದ್ರತಾಲೋಪವನ್ನು ಮಾಫ್ ಮಾಡಬಹುದು ಎಂದಲ್ಲ. ಎಡವಟ್ಟು ಮಾಡಿದ ಅಧಿಕಾರಿಗಳಿಗೆ ಶಿಕ್ಷೆಯೂ ಆಯಿತು.

ಆದದ್ದು ಇಷ್ಟೇ; ಕಾನ್‌ವಾಯ್ ವಾಹನಗಳು ಸಮಾವೇಶ ಚಪ್ಪರದ ಮುಂದಿನಿಂದ ಹಾದು ಹೋಗುವಾಗ, ಮುಖ್ಯ ದ್ವಾರದ ಮುಂದೆ ನಿಂತಿದ್ದ ಅನೇಕ ಮುಂದಾಳುಗಳು ದೇವೇಗೌಡರ ವಾಹನ ಬಂದಾಗ ಕೈ ತೋರಿಸಿ ಜೈಕಾರ ಹಾಕುತ್ತಾ ಮುತ್ತಿಗೆ ಹಾಕಿದ್ದಾರೆ. ಪಕ್ಷದ ಅಭಿಮಾನಿಗಳು ಎಂದು ಗೌಡರು ಕಾರಿನಿಂದ ಇಳಿದು ಕೈ ಮುಗಿದಿದ್ದಾರೆ. ಒಮ್ಮೆಲೇ ಆವರಿಸಿದ ಗುಂಪು ಅವರನ್ನು ಸಭಾಂಗಣದ ಮಧ್ಯಭಾಗದ ಪ್ಯಾಸೇಜಿನಲ್ಲಿ ಮೆರವಣಿಗೆ ಕರೆದುಕೊಂಡು ಹೊರಟಿದೆ.

ಬೆರಳೆಣಿಕೆಯಷ್ಟಿದ್ದ ಬೆಂಗಾವಲು ಪೊಲೀಸರಿಗೆ ತಾವು ಅತ್ತ ಹೋಗುವಂತಿಲ್ಲ. ಕಾರಿನಲ್ಲೇ ಹೋಗಬೇಕು ಎಂದು ಗೌಡರಿಗೆ ಹೇಳಲು ಧೈರ್ಯವೂ ಸಾಲದೆ, ಬೆಪ್ಪರಂತೆ ಹಿಂಬಾಲಿಸಿ ಬಿಟ್ಟಿದ್ದಾರೆ.

ಏನಾಗುತ್ತಿದೆ ಎಂದು ತಿಳಿಯುವುದರೊಳಗೆ ಜನ ಜಂಗುಳಿಯ ಜೈಕಾರದಲ್ಲಿ ಲೀನರಾಗಿ ಗೌಡರು ಬಿಜಯಂಗೈದಿದ್ದಾರೆ. ಅದೋ ಹೇಳಿ ಕೇಳಿ ಸಾವಿರಾರು ಜನರ ಸಮಾವೇಶ. ಉಗ್ರರೋ, ದುಷ್ಕರ್ಮಿಗಳೋ ಸೇರಿದ್ದರೆ ದುರ್ಘಟನೆಯೊಂದು ನಡೆದು ಬಿಡುತ್ತಿತ್ತು. ಪೊಲೀಸ್ ಕರ್ತವ್ಯವೆಂದರೆ ಹೇಗೋ ನಡೆಯುತ್ತದೆ ಎಂದು ಉದಾಸೀನವಾಗಿರಲಾಗದು. ಕೊಂಚ ಆಯ ತಪ್ಪಿದರೂ ಆಗಬಾರದ ಅನಾಹುತಕ್ಕೆ ಆಹ್ವಾನ ಕೊಟ್ಟಂತೆ.

ಇಡೀ ಸಮಾವೇಶದ ಜನರಿಗೆ, ಅಲ್ಲಿದ್ದ ರಾಜಕಾರಣಿ ಮಹೋದಯರಿಗೆ , ಯಾರಿಗೂ ಪೊಲೀಸರ ಪೇಚಾಟ, ತಲ್ಲಣ, ಶಿಕ್ಷೆ ಕಿಂಚಿತ್ತೂ ಅರಿವಿಗೆ ಬರಲಿಲ್ಲ. ಅದೇ ವಿಪರ್ಯಾಸ!



ಪ್ರಧಾನಿ ಮೋದಿಯೊಂದಿಗೆ ದೇವೇಗೌಡರು


ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು
ಮೊಬೈಲ್ ಸಂಖ್ಯೆ 9449010009

ಅಡ್ವಾನ್ಸ್ ಆಗಿ ದೇವೇಗೌಡರಿಗೆ ವಿಶ್ ಮಾಡಿದ ಗಗನಸಖಿಯರು!




ದೇಶ ಕಂಡ ರಾಜಕೀಯ ಮುತ್ಸದ್ದಿಗಳಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಕೂಡ ಒಬ್ಬರು. ಇದೇ ಮೇ 18ರಂದು ಅವರು 92ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಅವರು ಇತ್ತೀಚೆಗೆ ದೆಹಲಿಗೆ ಹೋಗಿದ್ದು ಮೇ 16ರಂದು ವಾಪಸ್ಸಾಗುವಾಗ ವಿಮಾನದ ಸಿಬ್ಬಂದಿ ಅವರನ್ನು ಗಮನಿಸಿ ಅವರ ಹುಟ್ಟುಹಬ್ಬವು ಹತ್ತಿರದಲ್ಲೇ ಇದೆ ಎಂಬುದನ್ನು ತಿಳಿದು ಅವರಿಗೆ ಅಡ್ವಾನ್ಸ್ ಆಗಿ ಹುಟ್ಟುಹಬ್ಬದ ಶುಭಾಶಯ ಹೇಳಿದ್ದಾರೆ. ವಿಮಾನ ಸಿಬ್ಬಂದಿಯಿಂದ ಅಚಾನಕ್ ಆಗಿ ಬಂದ ಹುಟ್ಟುಹಬ್ಬದ ಶುಭಾಶಯಗಳಿಂದ ಖುಷಿಯಾದ ಮಾಜಿ ಪ್ರಧಾನಿಗಳು ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಈ ಪ್ರಸಂಗವನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ದೇವೇಗೌಡರು, ಮೇ 16ರ ಸಂಜೆ ನಾನು ನವದೆಹಲಿಯಿಂದ ಬೆಂಗಳೂರಿಗೆ AI 2831 ವಿಮಾನದಲ್ಲಿ ಹಿಂತಿರುಗುತ್ತಿದ್ದಾಗ ಏರ್ ಇಂಡಿಯಾ ಸಿಬ್ಬಂದಿ ಎರಡು ದಿನಗಳ ಮುಂಚಿತವಾಗಿ ನನ್ನ ಹುಟ್ಟು ಹಬ್ಬಕ್ಕೆ ಶುಭ ಹಾರೈಸುವ ಮೂಲಕ ನನ್ನನ್ನು ಅಚ್ಚರಿಗೊಳಿಸಿದರು. ಸಿಬ್ಬಂದಿಗಳಾದ ಪ್ರಗತಿ ಮತ್ತು ಅಯಾಜ್ ಅವರ ಪ್ರೀತಿ ಮತ್ತು ಚಿಂತನಶೀಲತೆಗೆ ನಾನು ಧನ್ಯವಾದ ಗಳನ್ನು ಅರ್ಪಿಸುತ್ತೇನೆ ಎಂದು ಹೇಳಿದ್ದಾರೆ.

ದೇವೇಗೌಡರು ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಪ್ರಯಾಣ ಮಾಡುವ ವೇಳೆ, ವಿಮಾನದಲ್ಲಿಯೇ ಏರ್ ಇಂಡಿಯಾ ಸಿಬ್ಬಂದಿ ಕೇಕ್ ಕತ್ತರಿಸಿ, ಶುಭ ಕೋರಿದ್ದಾರೆ. ವಿಶೇಷವಾಗಿ ಹುಟ್ಟುಹಬ್ಬವನ್ನು ಆಚರಿಸಿದ್ದಾರೆ.

ದೇವೇಗೌಡರು ಮೇ 18 ರಂದು 92ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಹುಟ್ಟುಹಬ್ಬದ ಅಂಗವಾಗಿ, ಬೆಂಗಳೂರಿನಲ್ಲಿ ಜೆಡಿಎಸ್ ಹಾಗೂ ಮಹಿಳಾ ವಿಭಾಗದಿಂದ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ದೇವೇಗೌಡರ ಹೆಸರಿನಲ್ಲಿ ಪೂಜೆ ಏರ್ಪಡಿಸಲಾಗಿದೆ. ಮೃತ್ಯುಂಜಯ ಹೋಮವನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಪದಾಧಿಕಾರಿಗಳು, ವಿಧಾನಸಭಾ ಕ್ಷೇತ್ರದ ಅಧ್ಯಕ್ಷರು, ವಿವಿಧ ವಿಭಾಗಗಳ ಅಧ್ಯಕ್ಷರು, ವಾರ್ಡ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಜೆಡಿಎಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಹುಟ್ಟುಹಬ್ಬದ ಪ್ರಯುಕ್ತ ದೇವೇಗೌಡರು ಹಾಗೂ ಕುಟುಂಬದವರು ಮೇ 18 ರ ಬೆಳಗಿನ ಜಾವ ತಿರುಪತಿ ತಿಮ್ಮಪ್ಪನ ದರ್ಶನ ಪಡೆಯಲಿದ್ದಾರೆ. ಶನಿವಾರ ಸಂಜೆ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ದೇವೇಗೌಡರು ತಿರುಪತಿಗೆ ಪ್ರಯಾಣ ಬೆಳೆಸಿದ್ದಾರೆ. ಅವರ ಜೊತೆ ಪತ್ನಿ ಚನ್ನಮ್ಮ ದೇವೇಗೌಡರು ಸೇರಿದಂತೆ ಅವರ ಕುಟುಂಬದ 20ಕ್ಕೂ ಹೆಚ್ಚು ಮಂದಿ ತಿರುಪತಿಗೆ ತೆರಳಿದ್ದಾರೆ. ಶನಿವಾರ ರಾತ್ರಿ ತಿರುಮಲದಲ್ಲಿ ವಾಸ್ತವ್ಯ ಹೂಡಿರುವ ಗೌಡರು ಮತ್ತು ಕುಟುಂಬದವರು ಭಾನುವಾರ ಮುಂಜಾನೆ ತಿಮ್ಮಪ್ಪನ ದರ್ಶನ ಪಡೆಯಲಿದ್ದಾರೆ.



ವಾರಭವಿಷ್ಯ

18.05.2025 ರಿಂದ 24.05.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಷಭ, ಚಂದ್ರ–ಮಕರ, ಕುಂಭ–ಮೀನ, ಕುಜ–ಕಟಕ, ಬುಧ – ಮೇಷ, ವೃಷಭ, ಗುರು–ಮಿಥುನ, ಶುಕ್ರ–ಮೀನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಆದಾಯದ ಜೊತೆಗೆ ಖರ್ಚು ಹೆಚ್ಚಾಗುತ್ತಿದೆ. ನಿಮ್ಮ ಬದುಕಿಗೆ ತಿರುವು ನೀಡಲು ಗುರುವರ್ಯರೊಬ್ಬರ ಮಾರ್ಗದರ್ಶನದ ಅಗತ್ಯವಿದೆ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. 'ಮಾತೇ ಮುತ್ತು' ಯೋಚಿಸಿ ಮಾತನಾಡಿ, ಯೋಚಿಸಿದ್ದನ್ನೆಲ್ಲಾ ಮಾತನಾಡಬೇಡಿ. ಆರೋಗ್ಯ ಸಮರ್ಪಕವಾಗಿರದೆ ವೈದ್ಯರ ದರ್ಶನ. ಡ್ರೈವಿಂಗ್‌ನಲ್ಲಿ ಆತುರ ತೋರಬೇಡಿ.

ಶ್ರೀ ಗಣಪತಿ ಸೇವೆ, ಶುಭ ಸಂಖ್ಯೆ–3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಗುರುಗ್ರಹ ಶುಭಭಾವಕ್ಕೆ ಸ್ಥಾನಪಲ್ಲಟವಾಗಿದೆ. ಇದು ನಿಮ್ಮ ಜೀವನದಲ್ಲಿ ಹೊಸ ಅಧ್ಯಾಯದ ಆರಂಭಕ್ಕೆ ಕಾರಣವಾಗಲಿದೆ. ವ್ಯಾಪಾರ, ವ್ಯವಹಾರಗಳು ಚುರುಕು ಪಡೆದುಕೊಳ್ಳುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ಸಿದ್ಧತೆ. ಸುವರ್ಣ, ರಜತ ಪದಾರ್ಥಗಳ ಖರೀದಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಅಹಿತವೆನಿಸುವುದು. ವಿದ್ಯುಚ್ಛಕ್ತಿ ಕೆಲಸ ಮಾಡುವಾಗ ಜಾಗೃತರಾಗಿರಬೇಕು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಸ್ವಲ್ಪ ಹಣಕಾಸಿನ ಕೊರತೆ ಉಂಟಾಗಬಹುದು. ಅನಗತ್ಯ ವೆಚ್ಚಗಳು ಎದುರಾಗುವ ಸಾಧ್ಯತೆ ಇರುತ್ತದೆ. ಮೋಜು–ಮಸ್ತಿಗೆ ಇದು ಸಮಯವಲ್ಲ; ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಕಿರುಕುಳ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಹೆಚ್ಚುವರಿ ಶ್ರಮ ಪಡಬೇಕಾಗುತ್ತದೆ. ವಾರದ ಕಡೆಗೆ ಕೆಲವು ಶುಭ ಫಲಗಳು ಗೋಚರಿಸುತ್ತವೆ.

ಶ್ರೀ ಶ್ರೀಚಕ್ರ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ನಿಮ್ಮ ಜೀವನ ಸಂಗಾತಿಯನ್ನು ಸಂತೋಷಗೊಳಿಸಲು ಅಧಿಕ ಹಣವನ್ನು ವೆಚ್ಚ ಮಾಡುವಿರಿ. ಶ್ರೀ ಗುರು ಹನ್ನೆರಡನೇ ಭಾವದಲ್ಲಿದ್ದು, ದಾನ–ಧರ್ಮ ಬುದ್ಧಿ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಭಾಗಿಯಾಗುವಿರಿ. ನಿಮ್ಮ ವೃತ್ತಿಪರ ಕೆಲಸ ಕಾರ್ಯಗಳು ಉತ್ತಮ ಮತ್ತು ಸರಿದಾರಿಯಲ್ಲಿ ಸಾಗುತ್ತಿದೆ. ಹೆಚ್ಚಿನ ಹಣಕಾಸು ಕೈಸೇರಿದರೂ ಬರಿಗೈ ಆಗಲು ಕ್ಷಣ ಮಾತ್ರ. ಸಟ್ಟಾ ಜೂಜುಗಳಿಂದ ದೂರವಿದ್ದರೆ ಒಳಿತು.

ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ–5

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರ ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ ಎಂಬಂತೆ ಸಾಗುವುದು. ನಿಮ್ಮ ಹಿತಚಿಂತಕರೊಂದಿಗೆ ಭೇಟಿ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ಧನ–ಕನಕ, ದುಬಾರಿ ವಸ್ತು ಹೊಂದುವ ಅವಕಾಶವಿದೆ. ಉನ್ನತ ಶಿಕ್ಷಣಾಧಿಕಾರಿಗಳು ಹೊರ ದೇಶಕ್ಕೆ ತೆರಳಲು ಗುರುಕೃಪೆ ಇದೆ. ಅಷ್ಟಮ ಶನಿಯ ಕಾರಣ ಸಾರ್ವಜನಿಕರಿಂದ ವಿರೋಧವನ್ನು ಎದುರಿಸಬೇಕಾಗಬಹುದು. ದುಡುಕಿನಿಂದ ಕಾರ್ಯಗೇಡು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–6

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಅಧಿಕಾರಿಗಳ ಸಹಕಾರ ಹಾಗೂ ಅನುಕೂಲ ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ದೊಡ್ಡ ಆರ್ಡರ್ ದೊರಕುವುದು. ದ್ವಿದಳ ಧಾನ್ಯ ವ್ಯಾಪಾರಗಳು ಉತ್ತಮ ಗತಿಯಲ್ಲಿ ಸಾಗಿ ಹೇರಳ ಧನಲಾಭ. ನೆರೆಹೊರೆಯಲ್ಲಿ ವಿವಾದ, ಮನಸ್ತಾಪಗಳಿಂದ ಮನಃಶಾಂತಿಗೆ ಭಂಗ. ಪಾಲುದಾರಿಕೆ ವ್ಯವಹಾರಗಳಲ್ಲಿ ನಷ್ಟ ಉಂಟಾಗುವುದು. ಸಂಧಿವಾತ ಕಾಡುವುದು.

ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರದಲ್ಲಿ ಗುರು ನವಮ ಭಾಗ್ಯಸ್ಥಾನಕ್ಕೆ ಬಂದಿರುವ ಕಾರಣ ಭಾಗ್ಯದಲ್ಲಿ ವೃದ್ಧಿ. ಬೆಳ್ಳಿ, ಬಂಗಾರ ವ್ಯಾಪಾರ ಹೆಚ್ಚಳ. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯಾಗುವ ಸಂಭವವಿದೆ. ಮಕ್ಕಳ ಶ್ರೇಯಸ್ಸಿನಿಂದ ಮಾತಾ–ಪಿತರಿಗೆ ಹರುಷ. ಕೃಷಿಕರಿಗೆ ಉತ್ತಮ ಫಸಲು ಮತ್ತು ಬೆಲೆ ದೊರಕುವುದು. ದೀನರಿಗೆ ಸಹಾಯ ಮಾಡುವುದರಿಂದ ಧನ್ಯತಾ ಭಾವ. ದೂರ ಪ್ರಯಾಣಗಳನ್ನು ತ್ಯಜಿಸಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–4

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಈ ವಾರ ನಿಮಗೆ ಮಿಶ್ರಫಲದ ವಾರ. ಶ್ರೀಗುರು ಅಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ ಎಂದು ಮುಂದೆ ಸಾಗಿ ಸ್ತ್ರೀಯರೊಬ್ಬರ ಸಹಾಯದಿಂದ ವೈಯಕ್ತಿಕ ಸಮಸ್ಯೆ ಪರಿಹಾರವಾಗುವುದು. ನಿಮ್ಮ ಗುಪ್ತ ವಿಷಯಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ. ಕುಟುಂಬ ಸದಸ್ಯರಲ್ಲಿ ಅಪನಂಬಿಕೆ ಮೂಡುವುದರಿಂದ ಮನಸ್ಸಿಗೆ ಬೇಸರ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–1

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆರಂಭಕ್ಕೆ ಜವಳಿ ಹಾಗೂ ಅಲಂಕಾರ ವಸ್ತುಗಳ ವ್ಯಾಪಾರಗಳು ಭರಾಟೆಯಿಂದ ಸಾಗುವುದು. ವಿದೇಶ ಪ್ರಯಾಣಕ್ಕೆ ಪೂರ್ವ ಸಿದ್ಧತೆಗಳು ನಡೆದೀತು. ಕಲಾ ಕ್ಷೇತ್ರದವರಿಗೆ ಸನ್ಮಾನ–ಪ್ರಶಸ್ತಿಗಳು ದೊರೆಯಲಿದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವರ–ವಧು ದೊರೆಯಲು ಗುರುಬಲವಿದೆ. ಧರ್ಮ ಕಾರ್ಯದಲ್ಲಿ ಭಾಗವಹಿಸಿ ಜನಮನ್ನಣೆಗೆ ಪಾತ್ರರಾಗುವಿರಿ. ಉತ್ತಮ ಆಹಾರದಿಂದ ಆರೋಗ್ಯ ಕಾಪಾಡಿಕೊಳ್ಳಿ.

ಶ್ರೀ ದತ್ತಾತ್ರೇಯ ಉಪಾಸನೆ. ಶುಭ ಸಂಖ್ಯೆ–4

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಬೇಡದ ವರ ನೀಡಲು ನಿಮ್ಮ ರಾಶ್ಯಾಧಿಪತಿ ಶುಭ ಗೋಚರದಲ್ಲಿ ಇದ್ದಾರೆ. ನೌಕರ ವರ್ಗದವರಿಗೆ ಹಿರಿಯ ಅಧಿಕಾರಿಗಳ ಕೃಪಾಕಟಾಕ್ಷದಿಂದ ಬಡ್ತಿ ಹೊಂದುವ ಸಾಧ್ಯತೆ ಇದೆ. ಹೊಸ ವಾಹನ ಹೊಂದುವ ಕನಸು ನನಸಾಗಲಿದೆ. ಮಹಿಳಾ ಮಣಿಯರು ದುಂದುವೆಚ್ಚ ಮಾಡುವರು. ಕೈ ಹಾಕಿದ ಕೆಲಸಗಳು ಸುಲಲಿತವಾಗಿ ಸಾಗುವುದು. ವಾರದ ಕಡೆಗೆ ರಾಹು ಪ್ರಭಾವದಿಂದ ಭಾವೋದ್ವೇಗಕ್ಕೆ ಒಳಗಾಗುವಿರಿ.

ಶ್ರೀ ಶನಿದೇವನ ಪ್ರಾರ್ಥನೆ. ಶುಭ ಸಂಖ್ಯೆ–7

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಯತ್ನ ಕಾರ್ಯಗಳಿಗೆ ಸ್ನೇಹಿತರ ಸಹಾಯ ದೊರಕುವುದು. ನೂತನ ವಸ್ತ್ರ, ವಾಹನ ಪ್ರಾಪ್ತಿ. ಗುರುಗ್ರಹದ ಪ್ರಭಾವದಿಂದ ಆದಾಯ ಚೆನ್ನಾಗಿರುತ್ತದೆ. ಅರಸಿ ಬಂದುದನ್ನು ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ಖರ್ಚುಗಳು ಹೆಚ್ಚಾಯಿತೆಂದು ಕಳವಳ ಬೇಡ. ಆದಾಯವೂ ಚೆನ್ನಾಗಿರುತ್ತದೆ. ಸ್ಥಿರಾಸ್ತಿ ಖರೀದಿಸುವ ಉಮೇದು ಇದ್ದರೆ ದಾಖಲೆಗಳನ್ನು ಸೂಕ್ತವಾಗಿ ಪರಿಶೀಲಿಸಿ ಮುಂದುವರೆಯಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಗೃಹ ಸಂಬಂಧಿ ವಿಚಾರಗಳಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ನಿವಾರಣೆ ಆಗಲಿದೆ. ಹೈನುಗಾರಿಕೆಯಿಂದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಉಂಟಾಗುತ್ತದೆ. ಮಹತ್ವದ ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಅಪರಿಚಿತರೊಂದಿಗೆ ಹಣಕಾಸಿನ, ಬ್ಯಾಂಕಿನ ವ್ಯವಹಾರ ಬೇಡ. ವಾರದ ಕಡೆಗೆ ಶೀತ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ದೇವೀ ಸ್ತುತಿ. ಶುಭ ಸಂಖ್ಯೆ–2

ತಿ.ನರಸೀಪುರದಲ್ಲಿ ವೈಭವದ ಜಾನಪದ ಸಂಗಮ

ಗಮನ ಸೆಳೆದ ಎತ್ತಿನಗಾಡಿ ಮೆರವಣಿಗೆ, ವೀರಗಾಸೆ ಕುಣಿತ, ಸೀರೆ ಧರಿಸಿ ಕಳಸ ಹೊತ್ತ ಯುವತಿಯರು

ತಿ.ನರಸೀಪುರ ಮೇ 17(ಎಸ್‌ಕೆ)–ಎತ್ತಿನ ಗಾಡಿ ಮೂಲಕ ಮೆರವಣಿಗೆ, ವೀರಗಾಸೆ ಕುಣಿತ, ಸೀರೆ ಧರಿಸಿ ಕಳಸ ಹೊತ್ತ ಹೆಣ್ಣು ಮಕ್ಕಳು, ಬಿಳಿ ಪಚ್ಚೆ, ಶಲ್ಯ ಹಾಕಿಕೊಂಡು ಹೆಜ್ಜೆ ಹಾಕಿದ ವಿದ್ಯಾರ್ಥಿಗಳು...

ಇದು ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಜಾನಪದ ಸಂಗಮ ಹಾಗೂ ಸಾಂಸ್ಕೃತಿಕ, ಕ್ರೀಡೆ ರಾ.ಸೇ ಯೋಜನೆ, ರೇಂಜರ್ಸ್ ಮತ್ತು ರೋವರ್ಸ್ ಯೂತ್ ರೆಡ್ ಕ್ರಾಸ್ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಕಂಡು ಬಂದ ದೃಶ್ಯಗಳು.



ತಿ.ನರಸೀಪುರದಲ್ಲಿ ವೈಭವದಿಂದ ನಡೆದ ಜಾನಪದ ಸಂಗಮ ಸಾರ್ವಜನಿಕರ ಗಮನ ಸೆಳೆಯಿತು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹಾಗೂ ನಿವೃತ್ತ ವಾಣಿಜ್ಯ ತೆರಿಗೆ ಇಲಾಖೆ ಅಪರ ಆಯುಕ್ತರಾದ ಹೆಳವರಹುಂಡಿ ಸಿದ್ದಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ನಮ್ಮ ದೇಶದ ಸಂಸ್ಕೃತಿ ಶ್ರೀಮತಿಕೆಗೊಂಡಿದೆ, ವಿದ್ಯಾರ್ಥಿಗಳು ಜಾನಪದ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಜತೆಗೆ ಸಂಶೋಧನೆಯ ಕ್ರಿಯಾಶೀಲನೆ ಯಲ್ಲಿ ತೊಡಗಿಸಿಕೊಳ್ಳಬೇಕೆಂದರು.

ಭಾರತ ಹಾಗೂ ಪಾಕ್ ಯುದ್ಧ ಸಂದರ್ಭದಲ್ಲಿ ನಮ್ಮ ದೇಶದ ಪ್ರಮುಖ ಅಸ್ತ್ರಗಳಲ್ಲೊಂದಾದ ಬ್ರಹ್ಮೋಸ್ ಅನ್ನು ಭಾರತ ಮತ್ತು ರಷ್ಯಾ ಜಂಟಿಯಾಗಿ ಅಭಿವೃದ್ಧಿಪಡಿಸಿವೆ ಎನ್ನುವುದು ವಿಶೇಷ. ಭಾರತದ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ಇದನ್ನು ಮಾಡಿದೆ. ಇದು ನಮ್ಮಗೆ ಹೆಮ್ಮೆ ಎಂದರು.

ವಿದ್ಯಾರ್ಥಿಗಳು ಉದ್ಯೋಗದಾತರಾಗಿ ಕೆಲಸಗಳನ್ನು, ಈ ದೇಶದ ಅಭಿವೃದ್ಧಿಗೆ ಹೊಸ ವೈಜ್ಞಾನಿಕ ಸಂಶೋಧನ ಕಾರ್ಯಗಳನ್ನು ಮಾಡಬೇಕೆಂದು ತಿಳಿಸಿದರು.

ಇದಕ್ಕೂ ಮೊದಲು ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರಣಿಗೆಗೆ ಹೆಳವರಹುಂಡಿ ಸಿದ್ದಪ್ಪ ಎತ್ತಿನ ಗಾಡಿಗೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳನ್ನು ಎತ್ತಿನ ಗಾಡಿಯ ಮೂಲಕ ಕಾಲೇಜಿನ ಆವರಣದವರೆಗೂ ಕರೆತರಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಟಿ.ಬಿ ನಾಗೇಂದ್ರ ಪ್ರಸಾದ್, ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ವಿ ಉದಯಕುಮಾರ್ ಅಧ್ಯಕ್ಷತೆ ವಹಿಸಿದ್ದರು, ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರೊ.ದೇವರಾಜೇ ಗೌಡ, ಜಿ.ಎಸ್, ಡಾ.ಪುಟ್ಟಸ್ವಾಮಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಚಾಲಕ ಡಾ.ಮುತ್ತಮ್ಮ ಕೆ.ಕೆ, ಪ್ರೊ ಮಹೇಶ್, ಕ್ರೀಡಾ ಸಮಿತಿ ಸಂಚಾಲಕ ರಾಘವೇಂದ್ರಪ್ರಸಾದ್, ಎನ್, ಯೂತ್ ರೆಡ್‌ಕ್ರಾಸ್ ಸಂಚಾಲಕ ಪ್ರೋ. ರಾಮಮೂರ್ತಿ,ಬಿಎಂ, ಡಾ.ಕೆಂಪರಾಜು, ಆರ್, ಡಾ.ಕವಿತಾ.ಡಿ, ಐಕ್ಯೂಎಸಿ ಸಂಚಾಲಕ ಡಾ.ಅಮಿತ್, ಡಾ.ರೇಷ್ಮ ಚೆಂಗಪ್ಪ, ಹಾಗೂ ಇತರರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು,

ಸ್ಪರ್ಧಾತ್ಮಕ ಮನೋಭಾವವಿದ್ದರೆ ಸಾಧನೆ ಸಾಧ್ಯ

ತಿ.ನರಸೀಪುರ: ನಿರಂತರ ಕಲಿಕೆ, ಪರಿಶ್ರಮ, ನಿಗದಿತ ಗುರಿ ಜತೆಯಲ್ಲಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಇದ್ದರೆ ಜೀವನದಲ್ಲಿ ಸಾಧನೆ ಸಾಧ್ಯವಾಗುತ್ತದೆ ಎಂದು ನಿವೃತ್ತ ಆದಾಯ ತೆರಿಗೆ ಇಲಾಖೆಯ ಅಪರ ಆಯುಕ್ತ ಡಾ.ಹೆಳವರ ಹುಂಡಿ ಸಿದ್ದಪ್ಪ ಹೇಳಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಜನಪದ ಸಂಗಮ, ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ರೇಂಜ್ ಮತ್ತು ರೋವರ್ ಮತ್ತು ಯೂತ್ ರೆಡ್‌ಕ್ರಾಸ್ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮನ್ನು ತಾವು ಸ್ಪರ್ಧಾತ್ಮಕ ಜಗತ್ತಿಗೆ ಅರ್ಪಿಸಿಕೊಳ್ಳುವುದು, ಜೀವನದಲ್ಲಿನ ಒತ್ತಡಗಳನ್ನು ಮೆಟ್ಟಿ ನಿಲ್ಲುವ ಬಹುಮುಖ ಪ್ರತಿಭೆಯನ್ನಾಗಿ ರೂಪಿಸುವ ಹೊಣೆ ಶಿಕ್ಷಕರ ಮೇಲಿದೆ. ಜವಾಬ್ದಾರಿಯುತ ವಿದ್ಯಾರ್ಥಿಗಳು ಕೂಡ ತಮ್ಮ ಹೊಣೆಯನ್ನು ಅರಿತು ಅಂಕಗಳನ್ನು ಸಾಧನೆಯಾಗಿ ಪರಿವರ್ತಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸಬೇಕು ಎಂದರು. ಸರ್ಕಾರ ಉದ್ಯೋಗದಾತ ಹೌದು.



ಆದರೆ, ದೇಶದಲ್ಲಿರುವ ಎಲ್ಲ ವಿದ್ಯಾವಂತರಿಗೆ ಉದ್ಯೋಗ ನೀಡಲು ಸಾಧ್ಯವಿಲ್ಲ. ಕೃಷಿ, ಕರಕುಶಲ, ಗುಡಿ ಕೈಗಾರಿಕೆಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿ ಉದ್ಯೋಗ ಸೃಷ್ಟಿ ಸಿಕೊಳ್ಳುವ ಅವಕಾಶ ದೇಶದ ಎಲ್ಲ ವಿದ್ಯಾವಂತರಿಗೆ ಇದೆ. ಹಾಗಾಗಿ ವಿದ್ಯಾವಂತರು ಉದ್ಯೋಗಾರ್ಥಿಗಳಾಗದೆ ಉದ್ಯೋಗದಾತರಾಗಬೇಕು ಎಂದರು.

ಗ್ಯಾಸ್ ಸೋರಿಕೆ: ಐವರಿಗೆ ಗಾಯ

ಗ್ಯಾಸ್ ಸಿಲಿಂಡರ್ ಬದಲಾಯಿಸುವ ವೇಳೆ ಅವಘಡ

ಹುಣಸೂರು, ಮೇ 17(ಕೆಕೆ)– ಗ್ಯಾಸ್ ಸಿಲಿಂಡರ್ ಬದಲಾಯಿಸುವ ವೇಳೆ ಗ್ಯಾಸ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಐವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದ ಕಲ್ಕುಣಿಕೆಯಲ್ಲಿ ಸಂಭವಿಸಿದೆ.

ಹುಣಸೂರಿನ ಕಲ್ಕುಣಿಕೆಯ ಕುರ್ಜನ್ ಬೀದಿಯ ವಠಾರದ ನಿಂಗರಾಜು ಅವರ ಮನೆಯಲ್ಲಿ ಘಟನೆ ನಡೆದಿದ್ದು, ನಿಂಗರಾಜು ಹಾಗೂ ಪತ್ನಿ ಜ್ಯೋತಿ, ಪಕ್ಕದ ಮನೆಯ ರಾಣಿಯಮ್ಮ, ಶೀಲ, ನಾಗವ್ಮ ಗಾಯಗೊಂಡಿದ್ದು, ನಿಂಗರಾಜು, ಮಕ್ಕಳು ಅಜ್ಜಿಯ ಮನೆಗೆ ತೆರಳಿದ್ದರಿಂದ ಪಾರಾಗಿದ್ದಾರೆ.

ನಿಂಗರಾಜು ಅವರ ಮನೆಯಲ್ಲಿ ಸಿಲಿಂಡರ್ ಬದಲಾಯಿಸುವ ವೇಳೆ ಗ್ಯಾಸ್ ಸೋರಿಕೆಯಾಗಿ ದಂಪತಿಗೆ ಬೆಂಕಿ ಹೊತ್ತಿಕೊಂಡಿದೆ. ಜೋರಾದ ಶಬ್ದ ಕೇಳಿದ ಪಕ್ಕದ ಮನೆಯವರಾದ ರಾಣಿಯಮ್ಮ, ಶೀಲ, ನಾಗಮ್ಮರವರು ನೋಡಲು ಹೋಗುತ್ತಿದ್ದಂತೆ ಅವರ ಬಟ್ಟೆಗಳಿಗೆ ಬೆಂಕಿ ಹತ್ತಿಕೊಂಡಿದೆ.

ಕೂಗಾಟ ಕೇಳಿ ಸುತ್ತಮುತ್ತಲ ನಿವಾಸಿಗಳು ಓಡಿ ಬಂದು ನೀರು ಹಾಕಿ, ಗ್ಯಾಸ್ ಸೋರಿಕೆಯಾಗುತ್ತಿದ್ದ ಸಿಲಿಂಡರನ್ನು ಮನೆಯಿಂದ ಹೊರಗೆ ತಂದು ಬೆಂಕಿ ನಂದಿಸಿದ್ದರಿಂದಾಗಿ



ಗಾಯಾಳು ಕುಟುಂಬದವರಿಗೆ ಸಾಂತ್ವನ ಹೇಳುತ್ತಿರುವ ಶಾಸಕ ಹರೀಶ್ ಗೌಡ.

ಅಕ್ಕಪಕ್ಕದ ಮನೆಗಳಿಗೆ ಬೆಂಕಿ ಹರಡುವುದನ್ನು ತಪ್ಪಿಸಲಾಗಿದೆ. ತಕ್ಷಣವೇ ಗಾಯಾಳುಗಳನ್ನು ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಷಯ ತಿಳಿದ ಕೂಡಲೇ ಶಾಸಕ ಜಿ.ಡಿ. ಹರೀಶ್‌ಗೌಡ ಕಾವೇರಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಹೆಚ್ಚಿನ ಚಿಕಿತ್ಸೆಗೆ ಅಗತ್ಯವಿರುವವರನ್ನು ತಕ್ಷಣವೇ ಕೆಆರ್.ಆಸ್ಪತ್ರೆಗೆ ದಾಖಲಿಸಲು ಸೂಚಿಸಿ, ಎಲ್ಲ ಗಾಯಾಳುಗಳ ಚಿಕಿತ್ಸೆ ವೆಚ್ಚವನ್ನು ಭರಿಸುವುದಾಗಿ ಕುಟುಂಬದವರಿಗೆ ಭರವಸೆ ನೀಡಿದ್ದಾರೆ.

ಮೇ 23ಕ್ಕೆ ಸವಲತ್ತುಗಳ ವಿತರಣೆ, 400ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ



ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಿರುವ ಶಾಸಕ ರವಿಶಂಕರ್.

ಕೆ.ಆರ್.ನಗರ: ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ 20 ವರ್ಷಗಳ ನಂತರ ಸರ್ಕಾರದ ಸವಲತ್ತುಗಳ ವಿತರಣೆ ಮತ್ತು 400 ಕೋಟಿ ರೂ. ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಕಾರ್ಯಕ್ರಮ ಮೇ.23ರಂದು ಪಟ್ಟಣದ ಪುರಸಭೆಯ ಬಯಲು ರಂಗ ಮಂದಿರದಲ್ಲಿ ನಡೆಯಲಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದ್ದಾರೆ.

ಇಲ್ಲಿನ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ನಡೆದ ಸಮಾರಂಭದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಸಚಿವರುಗಳು ಆಗಮಿಸಲಿದ್ದು ಪಕ್ಷದ ಮುಖಂಡರುಗಳು ತಮ್ಮ ತಮ್ಮ ಗ್ರಾಮಗಳಿಂದ ಹೆಚ್ಚು ಜನರನ್ನು ಕರೆ ತಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು.

ಚುನಾವಣಾ ಪೂರ್ವದಲ್ಲಿ ಪಕ್ಷದ ವತಿಯಿಂದ ನಡೆಸಲಾದ ಜನಾಶೀರ್ವಾದ ಯಾತ್ರೆ ಸಂದರ್ಭದಲ್ಲಿ ಕ್ಷೇತ್ರದ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಲು ನಾನು ಬದ್ದನಾಗಿದ್ದು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಅಭಿಪ್ರಾಯ ಪಡೆದು ಎಲ್ಲಾ ಗ್ರಾಮಗಳಿಗೆ ಅನುದಾನ ಹಂಚಿಕೆ ಮಾಡುವುದರ ಜತೆಗೆ ಸಾಲಿಗ್ರಾಮ ತಾಲೂಕನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಹೃದಯಾಘಾತ ಯುವಕ ಸಾವು



ಹುಣಸೂರು, ಮೇ 17– ಹುಣಸೂರಿನ ಹೌಸಿಂಗ್‌ಬೋರ್ಡ್–3ನೇ ಹಂತದ ನಿವಾಸಿ, ನಿವೃತ್ತ ಸಬ್ ಇನ್ಸ್‌ಪೆಕ್ಟರ್ ರಾಮನಾಯಕರ ಪುತ್ರ ರಾಜೇಶ್ವರ್ ಅಲಿಯಾಸ್ ರಾಜಿ(24) ಹೃದಯಾಘಾತದಿಂದ ನಿಧನರಾಗಿದ್ದಾರೆ. ದಿವಂಗತರು ತಂದೆ–ತಾಯಿ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಹುಣಸೂರಿನಲ್ಲಿ ನಡೆಯಿತು.

ಶುಕ್ರವಾರ ರಾತ್ರಿ ಸಹೋದರಿ ಮನೆಯಲ್ಲಿ ಊಟ ಮಾಡಿ ಬಂದು ರೂಮಿನಲ್ಲಿ ಮಲಗಿದ್ದ ವೇಳೆ ಎದೆ ನೋವಿನಿಂದ ಬಳಲುತ್ತಿದ್ದಾತನನ್ನು ನಗರದ ಖಾಸಗಿ ಆಸ್ಪತ್ರೆಗೆ ಸಾಗಿಸುವ ವೇಳೆಗಾಗಲೇ ಸಾವನ್ನಪ್ಪಿದ್ದರು. ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಂತರ ಅಂತ್ಯ ಸಂಸ್ಕಾರ ನಡೆಯಿತು.

ಹುಣಸೂರು ಬಸ್ ನಿಲ್ದಾಣದಲ್ಲಿ ಕಡ್ಲೆಕಾಯಿ, ಸೌತೆಕಾಯಿ ಮಾರಾಟಕ್ಕೆ ನಿರ್ಬಂಧ

ನಗರಸಭಾ ಅಧ್ಯಕ್ಷರ ನೇತೃತ್ವದಲ್ಲಿ ಪ್ರತಿಭಟನೆ



ಹುಣಸೂರು ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆ ನಡೆಸುತ್ತಿರುವುದು.

ಹುಣಸೂರು, ಮೇ 17– ನಗರದ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಡ್ಲೆಕಾಯಿ, ಸೌತೆಕಾಯಿ ಸೇರಿದಂತೆ ಇತರೆ ವ್ಯಾಪಾರ ಮಾಡದಂತೆ ನಿರ್ಬಂಧ ವಿಧಿಸಿರುವುದನ್ನು ಖಂಡಿಸಿ ಬಸ್ ನಿಲ್ದಾಣದ ಮುಖ್ಯದ್ವಾರದಲ್ಲಿ ನಗರಸಭಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ನೇತೃತ್ವದಲ್ಲಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಧರಣಿಯಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ನಗರಸಭಾ ಸದಸ್ಯರು ದೇವರಾಜು, ರಮೇಶ್, ಸತೀಶ್ ಯೂನಸ್ ಹರೀಶ್ ಕುಮಾರ್, ಶ್ರೀನಾಥ್, ಕೃಷ್ಣನಾಯಕ್, ದೇವರಾಜ್ ನಾಯಕ್ ಬೆಂಬಲ ನೀಡಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಕ್ರಮದ ವಿರುದ್ಧ ಘೋಷಣೆ ಕೂಗಿ ಬೀದಿಬದಿ ವ್ಯಾಪಾರಿಗಳ ಜೀವನ ನಿರ್ವಹಣೆಗೆ ಅಡ್ಡಿಪಡಿಸಿರುವುದನ್ನು ಖಂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗಣೇಶ್ ಕುಮಾರಸ್ವಾಮಿ ಬೀದಿಬದಿ ವ್ಯಾಪಾರಿಗಳಿಗೆ ಬಸ್‌ಸ್ಟ್ಯಾಂಡ್‌ನಲ್ಲಿ ವ್ಯಾಪಾರಕ್ಕೆ ಅವಕಾಶ ನೀಡಬೇಕೆಂದು ಆಗ್ರಹಿಸಿದರಲ್ಲದೆ, ಅಧಿಕಾರಿಗಳು ನಿರ್ಲಕ್ಷಿಸಿದರೆ ಪೊಲೀಸರ ಅನುಮತಿ ಪಡೆದು ಬಸ್ ತಡೆ ಮಾಡುವುದಾಗಿ ಎಚ್ಚರಿಸಿದರು.

ಮಳೆಯಲ್ಲಿಯೂ ಧರಣಿ ನಡೆಸುತ್ತಿರುವುದನ್ನು ಗಮನಿಸಿದ ಅಧಿಕಾರಿಗಳು ಮುಂದಿನ ಸೋಮವಾರ ಕೆಎಸ್‌ಆರ್‌ಟಿಸಿ ಡಿಸಿ ಭೇಟಿ ನೀಡಿ ಪರಿಶೀಲನೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವರು. ಅಲ್ಲಿಯತನಕ ಬೀದಿಬದಿ ವ್ಯಾಪಾರಿಗಳಿಗೆ ಬಸ್ ಸ್ಟ್ಯಾಂಡ್‌ನಲ್ಲಿ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದೆಂದು ಭರವಸೆ ನೀಡಿದ್ದರಿಂದ ಧರಣಿ ಕೈ ಬಿಡಲಾಯಿತು.

ಸರಗೂರಲ್ಲಿ ವಿಜೃಂಭಣೆಯ ಶ್ರೀ ಚೌಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ



ಸರಗೂರು(ನಾಗೇಶ್): ಸರಗೂರು ಪಟ್ಟಣದಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 85ನೇ ಜ್ಯೋತಿ ಪೂಜಾ ಮಹೋತ್ಸವವನ್ನು ವಿಜೃಂಭಣೆಯಿಂದ, ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು,

ದೊಡ್ಡಬಳ್ಳಾಪುರ ಪುಷ್ಪಾಂಡಜಾ ಮಹರ್ಷಿ ಆಶ್ರಮ ತಪಸಿಹಳ್ಳಿ ಶ್ರೀ ದಿವ್ಯ ಜ್ಞಾನಂದಗಿರಿ ಸ್ವಾಮೀಜಿ ಅವರ ದಿವ್ಯ ಕೃಪಾಶಿರ್ವಾದದೊಂದಿಗೆ ಶ್ರೀ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 85ನೇ ಜ್ಯೋತಿ ಪೂಜಾ ಮಹೋತ್ಸವ ನಡೆಯಿತು.

ಪಟ್ಟಣವನ್ನು ತಳಿರು ತೋರಣ ಕಟ್ಟಿ, ರಂಗೋಲಿ ಬಿಡಿಸಿ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಬೆಳಗಿನ ಜಾವದಿಂದ ಹೋಮ, ಹವನ ನಡೆಸಿ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ಪೂಜಾ ಕೈಂಕರ್ಯಗಳು ಜರುಗಿದವು.

ಶ್ರೀ ಚೌಡೇಶ್ವರಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವನ್ನು ಜ್ಯೋತಿ ಸಮೇತವಾಗಿ ಮಂಗಳ ವಾದ್ಯದೊಡನೆ ಕಪಿಲಾ ನದಿಗೆ ತಂದು ಗಂಗೆ ಪೂಜೆ ನಡೆಸಿ ಹರಕೆ ಹೊತ್ತ ಭಕ್ತರು ಬಾಯಿಬೀಗ, ಅಲಗುಸೇವೆ, ಸ್ತೋತ್ರಪಠಣ, ಖಡ್ಗಸ್ತೋತ್ರ ಪಠಣ, ಭಜನೆ ಮೂಲಕ ಪೂರ್ಣ ಕುಂಭ ಕಳಸದೊಂದಿಗೆ ಪ್ರಮುಖ ರಸ್ತೆ ಮುಖಾಂತರ ಮಂಗಳವಾದ್ಯ, ಸತ್ತಿಗೆ, ವೀರಗಾಸೆ ಕುಣಿತ ಹಾಗೂ ಕಲಾತಂಡಗಳ ಜೊತೆಯಲ್ಲಿ ಮೆರವಣಿಗೆ ನಡೆಸಲಾಯಿತು.

ಉತ್ಸವವು ದೇವಾಲಯಕ್ಕೆ ತಲುಪಿ ನಂತರ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಪಟ್ಟಣದ ನೇಕಾರ ತೊಗಟವೀರ ಕ್ಷತ್ರೀಯ ಸಮಾಜ ವತಿಯಿಂದ ಈ ಪೂಜಾ ಕೈಂಕರ್ಯ ನಡೆಸಲಾಯಿತು, ನಂತರ ಎಲ್ಲಾ ಭಕ್ತಾದಿಗಳಿಗೂ ಅನ್ನ ಸಂತರ್ಪಣೆ ನಡೆಸಲಾಯಿತು.

ಬಾಲಗಂಗಾಧರನಾಥ ಶ್ರೀಗಳ ಕನಸು ನನಸು ಮಾಡಿದ ವಿದ್ಯಾರ್ಥಿಗಳು

ಹೆಚ್.ಡಿ.ಕೋಟೆ, ಮೇ17(ಮಂಜು)– ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು, ಅನೇಕ ಕನಸುಗಳನ್ನು ಇಟ್ಟುಕೊಂಡು ಹೆಚ್.ಡಿ.ಕೋಟೆಯಲ್ಲಿ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದು, ಅವರ ಆಸೆ ಆಕಾಂಕ್ಷೆಗಳನ್ನು, ನಮ್ಮ ವಿದ್ಯಾರ್ಥಿಗಳು ಚಿನ್ನದ ಪದಕ ಪಡೆಯುವ ಮೂಲಕ ಈಡೇರಿಸಿದ್ದಾರೆ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಬಿಜಿಎಸ್ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ ಮತ್ತು ತೃತೀಯ ಬಿ.ಎ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಸಾಕಷ್ಟು ಬಡ ಕುಟುಂಬದ ಮಕ್ಕಳಿದ್ದು, ಅವರ ವಿದ್ಯಾಭ್ಯಾಸದ ದೃಷ್ಟಿಯಿಂದ ಬಾಲಗಂಗಾಧರನಾಥ ಸ್ವಾಮೀಜಿಯವರು ಹಾಗೂ ತಾಲೂಕಿನ ಪ್ರಮುಖ ಹಿರಿಯ ಮುಖಂಡರುಗಳು ಜೊತೆಗೂಡಿ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಇಂದು ನಮ್ಮ ಸಂಸ್ಥೆಯಲ್ಲಿ, ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಆಗುವ ಮೂಲಕ



ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಅಭಿನಂಧಿಸಲಾಯಿತು.

ಚಿನ್ನದ ಪದಕ ಪಡೆದು ಬಾಲಗಂಗಾಧರನಾಥ ಸ್ವಾಮೀಜಿಯವರ ಕನಸನ್ನು ನನಸು ಮಾಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಮೈಸೂರು ವಿಶ್ವ ವಿದ್ಯಾನಿಲಯದ ಗಾಂಧಿ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ ಪ್ರತಿಭೆ, ಯಶಸ್ಸು ಹಾಗೂ ಕೀರ್ತಿ ಯಾರ ಮನೆಯ ಸ್ವತ್ತಲ್ಲ. ವರ್ಣ, ಜಾತಿ ಭೇಧವಿಲ್ಲದೆ ಈ ಮೂರನ್ನು ಯಾರು ಬೇಕಾದರೂ ಗಳಿಸಬಹುದು, ಆದಿಚುಂಚನಗಿರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಲ್ಲಿ ಬಹುತೇಕ ವಿದ್ಯಾರ್ಥಿನಿಯರು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ದೇಶದಲ್ಲಿ, ಜಾತಿ, ಧರ್ಮ, ಅಜ್ಞಾನ, ಅನಾಗರೀಕತೆ, ಅನಾಚರಗಳು ತಾಂಡವವಾಡುತ್ತಿದೆ, ಆದರೆ ವಿದ್ಯಾರ್ಥಿಗಳಾದ ನೀವು ಇವೆಲ್ಲವನ್ನು ಮೆಟ್ಟಿನಿಂತು ಭವ್ಯ ಭಾರತವನ್ನು ನಿರ್ಮಾಣ ಮಾಡುವ ಜವಬ್ದಾರಿ ತಮ್ಮ ಮೇಲಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕನ್ನಡ ಭಾಷಾ ವಿಷಯದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ನಾಗ್ಮಾ ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು. ಜೊತೆಗೆ ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಸಹ ಅಭಿನಂಧಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವ ವಿದ್ಯಾಲಯದ ಉಪ ಕುಲಸಚಿವ ಕೆ.ಎನ್. ಮಂಜುನಾಥ್, ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಚಂದ್ರೇಗೌಡ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜಿಎನ್.ವೆಂಕಟೇಶ್, ವಿವಿಧ ಕಾಲೇಜಿನ ಪ್ರಾಂಶುಪಾಲರಾದ ಸಂತೋಷ್, ಗುರುಸಿದ್ಧ, ಪೂರ್ಣತೇಜಸ್ವಿ, ಬಿ.ಭೈರೇಗೌಡ, ಎ.ಸಿ. ಭೈರಪ್ಪ, ಮುಖಂಡರಾದ ಕೃಷ್ಣೇಗೌಡ, ಸುರೇಂದ್ರ ಡಿ.ಗೌಡ, ಕಾಳೇಗೌಡ, ನರಸಿಂಹೇಗೌಡ, ಉಪನ್ಯಾಸಕರಾದ ಕಲ್ಲೇಶ್ ಗೌಡ, ರಾಮಚಂದ್ರ, ಚನ್ನಕೇಶವ, ಮಹೇಂದ್ರ ಸಿದ್ದೇಗೌಡ, ಚಂದನ, ಅವೀನಾ, ಚಿಕ್ಕದೇವಿ, ಸಂಗೀತ, ಚೈತ್ರ, ಶಾಂಭಾವಿ, ಪ್ರೀತಿ, ರಾಜೇಶ್ ಇದ್ದರು.

ಚಿಕ್ಕ ಲಕ್ಷ್ಮೀಪುರದಲ್ಲಿ ಅಂಗನವಾಡಿ ಕೇಂದ್ರ ಉದ್ಘಾಟನೆ

ತಿ.ನರಸೀಪುರ ಮೇ 17(ಎಸ್‌ಕೆ)–ತಾಲೂಕಿನ ಚಿಕ್ಕ ಲಕ್ಷ್ಮೀಪುರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಅಂಗನವಾಡಿ ಕೇಂದ್ರವನ್ನು ಸಂಸದ ಸುನಿಲ್ ಬೋಸ್ ಉದ್ಘಾಟಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 5 ಲಕ್ಷ ರೂ. ಮತ್ತು ನರೇಗಾ ಯೋಜನೆಯಡಿ 3 ಲಕ್ಷ ರೂ. ಗಳ ಅನುದಾನದಲ್ಲಿ ನಿರ್ಮಾಣಗೊಂಡಿದ್ದ ಅಂಗನವಾಡಿ ಕೇಂದ್ರವನ್ನು ಸಂಸದರು ಲೋಕಾರ್ಪಣೆ ಮಾಡಿದರು. ಬಳಿಕ ಮಾತನಾಡಿದ ಸಂಸದರು, ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಗುಣಮಟ್ಟ ಚೆನ್ನಾಗಿದ್ದರೆ ಮಕ್ಕಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬಲ್ಲರು. ಹಾಗಾಗಿ ರಾಜ್ಯ, ಕೇಂದ್ರ ಸರ್ಕಾರಗಳು ಮಕ್ಕಳ ಅಭಿವೃದ್ಧಿಗೆ ಸಾಕಷ್ಟು ಅನುದಾನವನ್ನು ಮೀಸಲಿಡುತ್ತಿವೆ.



ಅಂಗನವಾಡಿ ಕೇಂದ್ರ ಉದ್ಘಾಟನೆ ವೇಳೆ ಸಂಸದ ಸುನಿಲ್ ಬೋಸ್ ಅವರನ್ನು ಸನ್ಮಾನಿಸಲಾಯಿತು.

ಪೋಷಕರು ಕೂಡ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಜಾಗ್ರತೆಯಿಂದ ನಿರ್ಧಾರಗಳನ್ನು ಕೈಗೊಂಡು ಅವರ ಭವಿಷ್ಯವನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಬಸವಣ್ಣನವರ ತತ್ವ, ಸಂದೇಶಗಳು ವಿಶ್ವ ಭ್ರಾತೃತ್ವಕ್ಕೆ ದಾರಿ

ತಿ.ನರಸೀಪುರ, ಮೇ 17(ಎಸ್‌ಕೆ)– ಜಾತಿ–ಧರ್ಮದ ಬೇಧವಿಲ್ಲದೆ ಸಮಾನತೆಯ ಸಮಾಜ ನಿರ್ಮಿಸಲು ಹೋರಾಡಿದ ಬಸವಣ್ಣನವರ ತತ್ವಗಳು ಇಂದಿಗೂ ಪ್ರಸ್ತುತ. ಅವರು ನೀಡಿದ ಸಂದೇಶಗಳು ನಾವು ವಿಶ್ವಭ್ರಾತೃತ್ವದ ದಾರಿಗೆ ನಡೆಯಲು ದಿಕ್ಕು ತೋರಿಸುತ್ತವೆ ಎಂದು ಅರೆ ಬೊಮ್ಮನಹಳ್ಳಿ ಪಾರಮಾರ್ಥಿಕ ಮಠದ ಪೀಠಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹೇಳಿದರು.

ತಾಲೂಕಿನ ಹಲವಾರ ಗ್ರಾಮದಲ್ಲಿ ಶ್ರೀ ಬಸವೇಶ್ವರ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಅನಿಷ್ಠ ಪದ್ಧತಿಗಳು ಆಚರಣೆಯಲ್ಲಿದ್ದ ಕಾಲದಲ್ಲಿ ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಸುಧಾರಣೆಗಳನ್ನು ತಂದವರು ಬಸವಣ್ಣನವರು. ಕಾಯಕವೇ ಕೈಲಾಸ ಎಂದು ಕಲಿಸಿಕೊಟ್ಟ ವಿಶ್ವ ಗುರು ಬಸವಣ್ಣನವರ ತತ್ವ ಆದರ್ಶಗಳು, ಚಿಂತನೆಗಳು ಇಂದಿಗೂ ನಮಗೆಲ್ಲರಿಗೂ ಪಾಠ, ಬದುಕಿಗೆ ದಾರಿಯಾಗಿದೆ ಎಂದರು.



ತಿ.ನರಸೀಪುರ ತಾಲೂಕು ಹಲವಾರ ಗ್ರಾಮದಲ್ಲಿ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣರವರ ಮೂರ್ತಿಗೆ ಪೂಜ್ಯರು ಹಾಗೂ ಮುಖಂಡರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಮುಡುಕನಪುರ ಹಲವಾರ ಮಠದ ಶ್ರೀ ಷಡಕ್ಷರ ದೇಶೀಕೇಂದ್ರ ಸ್ವಾಮಿ ಮಾತನಾಡಿ ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ, ಅಸ್ಪೃಶ್ಯತೆ, ಜಾತೀಯತೆ, ಸ್ತ್ರೀ ಅಸಮಾನತೆಯ ಕತ್ತಲೆ ಯನ್ನು ದೂರಮಾಡಿದ್ದರು. ಅವರ ಕಲ್ಯಾಣ ರಾಜ್ಯ ಇಂದಿಗೂ ಆದರ್ಶವಾಗಿದೆ. ಪ್ರಜಾಪ್ರಭುತ್ವದ ಪಿತಾಮಹರಾದ ಬಸವಣ್ಣನವರು ಸಮಾನತೆ, ಶಿಕ್ಷಣ, ನ್ಯಾಯಕ್ಕಾಗಿ ಹೋರಾಡಿದ ಧೀಮಂತ ವ್ಯಕ್ತಿ. ಎಲ್ಲರೂ ಕಾಯಕ ಮಾಡಿದರೆ ಬದುಕು ಸುಂದರವಾಗುತ್ತದೆ ಎಂದರು.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಚಿದರವಳ್ಳಿ, ಹಲವಾರ, ಮುಡುಕನಪುರ ಗ್ರಾಮಸ್ಥರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಎಂಎಲ್ ಹುಂಡಿ ಮಠದ ಗೌರಿಶಂಕರ ಸ್ವಾಮೀಜಿ, ಕಳ್ಳೀಪುರ ಮಠದ ಗುರುಪಾದ ಶಿವಾಚಾರ್ಯ ಸ್ವಾಮಿ, ನೆರಗ್ಯಾತನಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಆರ್.ಪ್ರಕಾಶ್, ಬಸವ ಕೇಂದ್ರದ ಅಧ್ಯಕ್ಷ ಪರಮೇಶ್ ಪಟೇಲ್, ಸುಗಂಧರಾಜು, ವಕೀಲ ಪರಮೇಶ್, ಕೆಇಬಿ ಸಿದ್ದಲಿಂಗಸ್ವಾಮಿ, ಪ್ರಕಾಶ್, ತೊಂಟೇಶ್, ಶೇಖರಪ್ಪ, ಮಹದೇವಸ್ವಾಮಿ, ಕೃಷಿಕ ಸಮಾಜದ ಅಧ್ಯಕ್ಷ ಶಿವಮಲ್ಲಪ್ಪ,ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ರವಿ ತೊಟ್ಟವಾಡಿ, ದೊಡ್ಡನಹುಂಡಿ ನಂಜುಂಡಸ್ವಾಮಿ, ಚಂದ್ರಧರ, ಶಿವಕುಮಾರ ಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಹೋಟೆಲ್ ರಾಜಣ್ಣ, ಜಗದೀಶ್, ಚಿದರಹಳ್ಳಿ ನವೀನ್, ಉಪನ್ಯಾಸಕ ಮಹದೇವಸ್ವಾಮಿ, ಪಟೇಲ್ ಮರಿಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ, ಪಟೇಲ್ ಗಿರೀಶ್, ಪಟೇಲ್ ಮಹದೇವಸ್ವಾಮಿ, ಪಿ. ಮಹೇಶ್, ಪಾಲಾಕ್ಷ, ನೆರೆಗ್ಯಾತನಹಳ್ಳಿ ಕುಮಾರಸ್ವಾಮಿ, ಪಟೇಲ್ ಗುರುಸ್ವಾಮಿ, ಡೈರಿ ಗುರುಮೂರ್ತಿ, ಪರಮೇಶ್, ಅಭಿ, ಚೇರ್ಮನ್ ಶಿವಸ್ವಾಮಿ, ಡೇರಿ ಅಧ್ಯಕ್ಷ ಚಿನ್ನಸ್ವಾಮಿ, ಮಲ್ಲಪ್ಪನ ಮಹದೇವಸ್ವಾಮಿ, ಸೊಸೈಟಿ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಹದೇವ ಪ್ರಸಾದ್, ಬಸವರಾಜು, ಮಲ್ಲಿಕಾರ್ಜುನ ಸ್ವಾಮಿ, ಮಹದೇವ ಪ್ರಸಾದ್, ನಂಜುಂಡಸ್ವಾಮಿ, ಮಹೇಶ್, ಗ್ರಾಮ ಪಂಚಾಯಿತಿ ಸದಸ್ಯ ಮಾದೇಶ್ ಸೇರಿದಂತೆ ಬಸವೇಶ್ವರ ಗೆಳೆಯರ ಬಳಗದ ಸದಸ್ಯರು, ಹಲವಾರ ಗ್ರಾಮಸ್ಥರು ಉಪಸ್ಥಿತರಿದ್ದರು.

ಭಾರೀ ಮಳೆ: ಆಸ್ಪತ್ರೆ ಆವರಣ ಜಲಾವೃತ

ಹೆಚ್.ಡಿ.ಕೋಟೆ, ಮೇ 17– ಪಟ್ಟಣದಲ್ಲಿ ಗುರುವಾರ ಸಂಜೆ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಯಿತು.

ಭಾರೀ ಮಳೆಗೆ ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆ, ಆಯುರ್ವೇದಿಕ್ ಆಸ್ಪತ್ರೆ, ಆಸ್ಪತ್ರೆ ಸಿಬ್ಬಂದಿಗಳ ವಸತಿ ಗೃಹಗಳ ಸುತ್ತಮುತ್ತಲ ಪ್ರದೇಶ ಜಲಾವೃತ್ತಗೊಂಡಿತ್ತು. ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮುಂಭಾಗ ಚರಂಡಿ ವ್ಯವಸ್ಥೆ ಇಲ್ಲದ ಪರಿಣಾಮ ಮಳೆ ನೀರು ಆಸ್ಪತ್ರೆ ಗೇಟ್ ಮೂಲಕ ಒಳನುಗ್ಗಿದ್ದು, ಆವರಣ ಸಂಪೂರ್ಣ ಮಳೆ ನೀರಿನಿಂದ ಜಲಾವೃತ್ತಗೊಂಡಿತ್ತು. ಇದರಿಂದಾಗಿ ರೋಗಿಗಳು ಆಸ್ಪತ್ರೆಗೆ ತೆರಳಲು ಪರದಾಡುವಂತಾಯಿತು.

ಆಸ್ಪತ್ರೆ ಬಡಾವಣೆ ನಿವಾಸಿ ರಮ್ಯಾ ಮಾತನಾಡಿ, ಆಸ್ಪತ್ರೆ ಸುತ್ತಮುತ್ತ ಚರಂಡಿ ವ್ಯವಸ್ಥೆ, ಡಕ್ ವ್ಯವಸ್ಥೆಗಳಿಲ್ಲದ ಕಾರಣ ಮಳೆ ನೀರು ಆಸ್ಪತ್ರೆ ಸುತ್ತಮುತ್ತ ನಿಂತು ರೋಗಿಗಳ ಓಡಾಟಕ್ಕೆ ತೊಂದರೆ ಉಂಡು ಮಾಡಿದೆ.



ಸತತವಾಗಿ ಒಂದು ಗಂಟೆ ಸುರಿದ ಮಳೆ ನೀರು, ಆಸ್ಪತ್ರೆ ಆವರಣಕ್ಕೆ ನುಗ್ಗಿದೆ. ಇನ್ನು ಮುಂದೆ ಅತಿ ಹೆಚ್ಚು ಮಳೆ ಬೀಳುವ ಸಾಧ್ಯತೆ ಇರುವ ಕಾರಣ ಆಸ್ಪತ್ರೆ ಒಳಗೆ ನೀರು ನುಗ್ಗುವ ಸಾಧ್ಯತೆಗಳಿವೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಆಸ್ಪತ್ರೆ ಆಡಳಿತ ಅಧಿಕಾರಿಗಳು ಇತ್ತ ಗಮನಹರಿಸಿ ಮುಂದಾಗುವ ಅನಾಹುತ ತಪ್ಪಿಸಬೇಕು ಎಂದರು.

ವಿನೋದಮ್ಮ ನಿಧನ



ಹುಣಸೂರು, ಮೇ 17–ತಾಲೂಕಿನ ಹನಗೋಡು ಗ್ರಾಮದ ಮಿಲ್ ರಾಜಣ್ಣರ ಪತ್ನಿ ವಿನೋದಮ್ಮ(69) ಅನಾರೋಗ್ಯದಿಂದ ನಿಧನರಾದರು, ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶನಿವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.

ಮೈಸೂರು ಮಿತ್ರ

ಭಾನುವಾರ 18 ಮೇ 2025

ಬೃಹತ್ ರಕ್ತದಾನ ಶಿಬಿರದಲ್ಲಿ 501 ಮಂದಿ ರಕ್ತದಾನ

● ನನಗೆ ದೇಶ ಮೊದಲು, ಸೈನಿಕರ ಜೊತೆ ನಾನಿದ್ದೀನಿ, ದೇಶದ ಪ್ರಗತಿ ಬಗ್ಗೆ ಹೆಮ್ಮೆ ಇದೆ ● ರಕ್ತದಾನ ಮಾಡಿ ಸೈನಿಕರೊಂದಿಗೆ ನಾವಿದ್ದೇವೆ ಎಂಬ ಘೋಷಣೆ

ಮೈಸೂರು, ಮೇ17(ಜಿಎ)–'ದೇಶದ ಸೈನಿಕರೊಂದಿಗೆ ದೇಶವಾಸಿಗಳು' ಧ್ಯೇಯವಾಕ್ಯದೊಂದಿಗೆ ಅಜೀಜ್ ಸೇಠ್ ಜೋಡಿ ರಸ್ತೆಯಲ್ಲಿರುವ ಕೇಂದ್ರ ಬೀಡಿ ಕಾರ್ಮಿಕರ ಆಸ್ಪತ್ರೆಯಲ್ಲಿ ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಜೀವಧಾರ ಬ್ಲಡ್ ಬ್ಯಾಂಕ್ ಹಾಗೂ ಇತರೆ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡು ದೇಶಪ್ರೇಮ ಮೆರೆದರು.

ವಿವಿಧ ಸಂಘ–ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ 18 ರಿಂದ 48 ವರ್ಷ ವಯಸ್ಸಿನವರು ಸ್ವಯಂಪ್ರೇರಣೆಯಿಂದ ಭಾಗವಹಿಸಿ, ಸೈನಿಕರೊಂದಿಗೆ ನಾವಿದ್ದೇವೆ ಎಂದು ಘೋಷಣೆ ಕೂಗಿದರು.

ಬೃಹತ್ ರಕ್ತದಾನ ಶಿಬಿರದಲ್ಲಿ 1 ಸಾವಿರ ಯೂನಿಟ್(1 ಯೂನಿಟ್ 450 ಎಂಎಲ್ ಇರಲಿದೆ) ರಕ್ತ ಸಂಗ್ರಹ ಮಾಡುವ ಗುರಿಯಿಂದ ಒಂದೂವರೆ ಸಾವಿರ ಯೂನಿಟ್ ರಕ್ತ ಸಂಗ್ರಹಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಹಾಸಿಗೆ ವ್ಯವಸ್ಥೆ ಮಾಡಲಾಗಿತ್ತು. 50 ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ರಕ್ತದಾನ ಮಾಡಿದವರಿಗೆ ಪ್ರಮಾಣ ಪತ್ರ, ಹಣ್ಣು–ಹಂಪಲು ಹಾಗೂ ಉಪಾಹಾರದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮೈಸೂರಿನ ಕೆ.ಆರ್.ಆಸ್ಪತ್ರೆ, ಜೀವಧಾರ ಬ್ಲಡ್ ಬ್ಯಾಂಕ್‌ನವರು ರಕ್ತ ಸಂಗ್ರಹಣೆ ಮಾಡಿಕೊಂಡರು. ಅವರಿಗೆ ನಾರಾಯಣ ಆಸ್ಪತ್ರೆ, ಆಲ್ಫಾ ಆಸ್ಪತ್ರೆ ಹಾಗೂ ಎಐ ಅನ್ಸಾರಿ ಆಸ್ಪತ್ರೆಯ ಸಿಬ್ಬಂದಿಗಳು ರಕ್ತದಾನ ಮಾಡುವ ದಾನಿಗಳಿಗೆ ಪ್ರಾಥಮಿಕ ತಪಾಸಣೆ ಮಾಡುವ ಮೂಲಕ ಸಹಾಯ ಮಾಡಿದರು.

ಈ ವೇಳೆ ಶಾಸಕ ಮತ್ತು ಮಾಜಿ ಸಚಿವ ತನ್ವೀರ್ ಸೇಠ್ ಮಾಧ್ಯಮಗಳೊಂದಿಗೆ ಮಾತನಾಡಿ, ದೇಶದ ಭದ್ರತೆ ವಿಚಾರ ಬಂದಾಗ ಪ್ರತಿಯೊಬ್ಬರು ಬದ್ಧತೆ ತೋರಬೇಕು. ಭಾರತೀಯ ಸೇನೆ, ದೇಶದ ಪರ ಸದಾ ನಾನು ನಿಲ್ಲುತ್ತೇನೆ. ನಾವು ಗಡಿಗೆ ತೆರಳಿ ಯುದ್ಧ ಮಾಡಲು ಸಾಧ್ಯವಿಲ್ಲ. ನಮ್ಮಿಂದ ಆಗುವ ಅಳಿಲು ಸೇವೆ ಮಾಡುವುದು ಆದ್ಯ ಕರ್ತವ್ಯ.ಹಾಗಾಗಿ ಸೈನಿಕರಿಗಾಗಿ ರಕ್ತದಾನ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಸೇನೆ, ದೇಶದ ವಿಚಾರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ. ದೇಶದ ಪರ ಎಲ್ಲರೂ ಕೂಡ ನಿಲ್ಲಬೇಕು ಎಂಬುದು ನಮ್ಮ ಆಶಯ. ಕೇಂದ್ರ ಸರ್ಕಾರ ಯುದ್ಧದ ಸಂಪೂರ್ಣ ಮಾಹಿತಿ ನೀಡಬೇಕಿತ್ತು ಅನ್ನೋದು ಜನರ ಅಭಿಪ್ರಾಯ. ಸರಿ ಇದ್ದರೆ ಅದನ್ನು ಸ್ಪಷ್ಟವಾಗಿ ಹೇಳಬೇಕು. ಪಹಲ್ಗಾಮ್ ಇಂಟೆಲಿಜೆನ್ಸ್ ಫೇಲ್ ಆಗಿದೆ. ಆಪರೇಷನ್ ಸಿಂಧೂರ ವಿಚಾರದ ಕುರಿತು ಮಾಹಿತಿ ನೀಡಬೇಕು. ಮಾಹಿತಿ ನೀಡುವುದು ಅಧಿಕಾರದ ಚುಕ್ಕಾಣಿ ಹಿಡಿದವರು. ಅಧಿಕಾರದಲ್ಲಿ ಇರುವವರು ಮಾಹಿತಿ ನೀಡಬೇಕು. ಜವಾಬ್ದಾರಿ ಸ್ಥಾನದಲ್ಲಿ ಇರುವವರನ್ನು ನಾವು ಕೇಳ್ತೀವಿ. ಸತ್ಯವನ್ನು ಬಹಿರಂಗಪಡಿಸಿದ್ದರೆ ನಾವು ಪ್ರಶಂಸೆ ಮಾಡುತ್ತೇವೆ. ಆದರೆ ಎಲ್ಲವನ್ನೂ ಮುಚ್ಚಿಡುವುದು ಏಕೆ? ನನಗೆ ಯಾರು ಏನೇ ಹೇಳಲಿ ನನಗೆ ಮಾತ್ರ ದೇಶ ಮೊದಲು ನಮ್ಮ ದೇಶದ ಪ್ರಗತಿಯ ಬಗ್ಗೆ ಹೆಮ್ಮೆ ಪಡಬೇಕು. ಪ್ರತಿಯೊಬ್ಬ ಸೈನಿಕನ ಜೊತೆ ನಾನಿದ್ದೀನಿ"ಭಾರತೀಯ ನಾಗರಿಕನಾಗಿ ನಾನು ಸೇವೆಗೆ ಸಿದ್ಧ ಎಂದು ತಿಳಿಸಿದರು.

ಶುಭ ಗಳಿಗೆ, ಶುಭ ಮುಹೂರ್ತ ಬರುತ್ತೆ ಎಂಬ ಡಿಕೆಶಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಸಂಕಷ್ಟದ ಸಮಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದು ಡಿ.ಕೆ. ಶಿವಕುಮಾರ್. ಹಾಗಾಗಿ ಶುಭ ಗಳಿಗೆ ಬರುತ್ತೆ ಅಂತ ಹೇಳಿದ್ದಾರೆ. ಕೆಲವು ಸಚಿವರಿಗೆ ಕೊಕ್ ನೀಡುವುದು ಖಚಿತ. ಆದರೆ, ನಾಳೆ ಏನಾಗಲಿದೆ ಎಂಬುದು ಗೊತ್ತಿಲ್ಲ. ನನಗೆ ಜವಾಬ್ದಾರಿ ನಿರ್ವಹಿಸುವ ಆಸೆ ಇದೆ. ನನ್ನ ತಾಳ್ಮೆ, ವಿಶ್ವಾಸ ನನಗೆ ಸಚಿವ ಸ್ಥಾನ ದೊರಕಿಸಿಕೊಡುವ ವಿಚಾರದಲ್ಲಿ ವರಿಷ್ಠರ ಮೇಲೆ ವಿಶ್ವಾಸ ಇದೆ. ನನಗೆ ಸಚಿವ ಸ್ಥಾನ ಸಿಕ್ಕೇ ಸಿಗುವ ವಿಶ್ವಾಸ ಇದೆ. ಸಚಿವ ಸ್ಥಾನದ ಮೇಲೆ ಆಸೆ ಇಟ್ಟುಕೊಳ್ಳುವುದು ತಪ್ಪಲ್ಲ. ಕೆಲವರಿಗೆ ಕೊಕ್ ಕೊಟ್ಟು ಮತ್ತಷ್ಟು ಜನರಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಡಿಕೆ ಶಿವಕುಮಾರ್‌ಗೆ ಅಲ್ಲ. ಇನ್ನೂ ಅನೇಕರಿಗೆ ಶುಭ ಗಳಿಗೆ ಶುಭ ಮುಹೂರ್ತ ಬರಬಹುದು ಎಂದು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಸೈನಿಕ ಶ್ರೀಧರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ರಾರ್, ಪಾಲಿಕೆ ಮಾಜಿ ಸದಸ್ಯ ಕೆ.ಸಿ.ಶೌಕತ್ ಪಾಷ, ಶೌಕತ್ ಅಲಿಖಾನ್, ಜಿ.ಎನ್. ಮಂಜುನಾಥ್, ಶೈನ್ ಶಾ, ಇಲಿಸ್ ಬಾಬು, ಮಹ್ಮದ್ ರಫಿ, ಅಫ್ರೋಜ್ ಖಾನ್, ರೂಸೋಲ್, ಕೈಸರ್ ಅಹ್ಮದ್ ಮತ್ತಿತರರು ಉಪಸ್ಥಿತರಿದ್ದರು.



'ದೇಶದ ಸೈನಿಕರೊಂದಿಗೆ ದೇಶವಾಸಿಗಳು' ಧ್ಯೇಯವಾಕ್ಯದೊಂದಿಗೆ ಅಜೀಜ್ ಸೇಠ್ ಜೋಡಿ ರಸ್ತೆಯಲ್ಲಿರುವ ಕೇಂದ್ರ ಬೀಡಿ ಕಾರ್ಮಿಕರ ಆಸ್ಪತ್ರೆಯಲ್ಲಿ ಶಾಸಕ ತನ್ವೀರ್‌ಸೇಠ್ ನೇತೃತ್ವದಲ್ಲಿ ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಜೀವಧಾರ ಬ್ಲಡ್ ಬ್ಯಾಂಕ್ ಹಾಗೂ ಇತರೆ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡು ದೇಶಪ್ರೇಮ ಮೆರೆದರು.

ಎಸ್.ಎಂ.ಕೃಷ್ಣ ದತ್ತಿ ನಿಧಿ ಸ್ಥಾಪನೆ

ಮೈಸೂರು ವಿವಿಗೆ 10 ಲಕ್ಷ, ಶ್ರೀ ರಾಮಕೃಷ್ಣ ಆಶ್ರಮಕ್ಕೆ 5 ಲಕ್ಷ ರೂ. ಡಿಡಿ ಹಸ್ತಾಂತರ



ಮದ್ದೂರು ಶಾಸಕ ಕೆ.ಎಂ.ಉದಯ್ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್‌ರಿಗೆ 10 ಲಕ್ಷ ರೂ. ಹಾಗೂ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಸ್ವಾಮಿ ಮುಕ್ತಿದಾನಂದ ಜೀ ಅವರಿಗೆ 5ಲಕ್ಷ ರೂ.ಗಳ ಡಿಡಿಯನ್ನು ಹಸ್ತಾಂತರಿಸಿದರು.

ಮೈಸೂರು, ಮೇ17(ಆರ್‌ಕೆ)– ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣರವರ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸಲಾಗಿದೆ.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಇಂದು ಸರಳ ಸಮಾರಂಭದಲ್ಲಿ ಮದ್ದೂರು ಶಾಸಕ ಕೆ.ಎಂ.ಉದಯ್ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ 10ಲಕ್ಷ ರೂ. ಹಾಗೂ ಶ್ರೀ ರಾಮಕೃಷ್ಣ ಆಶ್ರಮಕ್ಕೆ 5ಲಕ್ಷ ರೂಗಳ ಡಿಡಿಯನ್ನು ಹಸ್ತಾಂತರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಇಬ್ಬರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಲು 10 ಲಕ್ಷ ರೂ. ಡಿಡಿಯನ್ನು ವಿವಿ ಕುಲಪತಿ ಪ್ರೊ ಎನ್.ಕೆ.ಲೋಕನಾಥ್ ಅವರಿಗೆ ಹಾಗೂ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡಲು 5 ಲಕ್ಷ ರೂ. ಡಿಡಿಯನ್ನು ಸ್ವಾಮಿ ಮುಕ್ತಿದಾನಂದಜೀ ಅವರಿಗೆ ನೀಡ ಲಾಗಿದೆ. ಈ ವೇಳೆ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರು, ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಹೆಚ್.ಎ. ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಪಾಕಿಸ್ತಾನ ಮಾತ್ರ ನಮ್ಮ ಶತ್ರುವಲ್ಲ, ಟೈಮ್ ಬಾಂಬ್‌ನಂತಹ ಕೆಲ ಹಿತಶತ್ರುಗಳು ನಮ್ಮ ಜೊತೆಯಲ್ಲೇ ಇದ್ದಾರೆ

ಕಾಂಗ್ರೆಸ್ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ಪರೋಕ್ಷ ವಾಗ್ದಾಳಿ



ಪ್ರತಾಪ್ ಸಿಂಹ

ಮೈಸೂರು, ಮೇ17(ಬಿಎಲ್‌ಯು)– ಪಾಕಿಸ್ತಾನ ಮಾತ್ರ ನಮ್ಮ ಶತ್ರು ಅಲ್ಲ, ಕೆಲವು ಹಿತಶತ್ರುಗಳು ನಮ್ಮ ಜೊತೆಯಲ್ಲೇ ಟೈಮ್‌ಬಾಂಬ್ ನಂತೆ ಇದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ, ಕಾಂಗ್ರೆಸ್ ನಾಯಕರ ವಿರುದ್ಧ ಪರೋಕ್ಷ ವಾಗ್ದಾಳಿ ಮಾಡಿದ್ದಾರೆ.

ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆ ಮಾಡಿರುವ ಪ್ರಧಾಮಂತ್ರಿ ನರೇಂದ್ರ ಮೋದಿ ಸುಪ್ರೀಂ ಎಂಬಂತೆ ವರ್ತಿಸುತ್ತಿದ್ದಾರೆ ಎಂಬ ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆಗೆ ತಿರುಗೇಟು ನೀಡಿದರು.

ಕರ್ನಾಟಕದ ಇಬ್ಬರು ಸಚಿವರು ದಿನ ಬೆಳಗಾದರೆ ಕಾಗೆ ಥರ ಕಾಕಾ ಎಂದು ಮಾತನಾಡುತ್ತಾರೆ. ತಾವು ಏನು ಮಾತನಾಡುತ್ತಿದ್ದೇವೆ ಎಂಬ ಕನಿಷ್ಠ ಜ್ಞಾನ ಇಲ್ಲದೆ ಮಾತನಾಡುತ್ತಾರೆ. ಮೋದಿ ಬಗ್ಗೆ ಮಾತನಾಡದಿದ್ದರೆ ಇವರಿಗೆ ತಿಂದಿದ್ದು ಕರಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮರಾಠ ಸಮುದಾಯದ ಸಂತೋಷ್ ಲಾಡ್ ಶಿವಾಜಿ ಮಹಾರಾಜ್‌ರಂತೆ ಮಾತನಾಡದೆ ಅಬ್ದುಲ್ ಖಾನ್ ರೀತಿ ಮಾತನಾಡುತ್ತಿದ್ದಾರೆ. ತಾನು ಬಹಳ ಮೇಧಾವಿ ಎಂದು ತಿಳಿದಿದ್ದಾರೆ. ಆದರೆ ಅವರು ಹೇಳಿದ ಮಾತೂ ಅವರಿಗೆ ಅರ್ಥ ಆಗುವುದಿಲ್ಲ ಎಂದರು.

ನೇಹಾ ಹತ್ಯೆ ಬಗ್ಗೆ ಪತ್ರಕರ್ತರು ಪ್ರಶ್ನಿಸಿದರೆ ಮೋದಿ ಕೇಳಿ ಎಂಬ ಬಾಲಿಶ ಹೇಳಿಕೆ ನೀಡುತ್ತಾರೆ. ನೇಹಾ ಹತ್ಯೆಗೆ ನ್ಯಾಯ ದೊರಕಿಸಲು ಮೋದಿ ಅನುಮತಿ ಏಕೆ ಬೇಕು ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಮೋದಿ ಅವರಿಗೆ ಸಲಹೆ ನೀಡುವಷ್ಟು ಬುದ್ಧಿವಂತರೇ ನೀವು ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಪಹಲ್ಗಾಮ್‌ನಿಂದ ಕನ್ನಡಿಗರನ್ನು ರಾಜ್ಯಕ್ಕೆ ಕಳುಹಿಸಲು ಎಲ್ಲಾ ವ್ಯವಸ್ಥೆ ಮಾಡಿದ್ದು ಕೇಂದ್ರ ಸರ್ಕಾರವೇ ಹೊರತು ನೀವಲ್ಲ ಎಂದು ತಿರುಗೇಟು ನೀಡಿದರು.

ಆದರೆ ನಿಮ್ಮ ಅನಿಷ್ಟಕ್ಕೆಲ್ಲಾ ಮೋದಿ ಕಾರಣ ಎಂಬಂತೆ ಮಾತನಾಡುತ್ತೀರಾ. ಮೊದಲು ನಿಮ್ಮ ಕಾರ್ಮಿಕ ಇಲಾಖೆಯ ಹೆಲ್ತ್ ಕಿಟ್ ಹಗರಣದ ಕಥೆ ಏನಾಯಿತು ಎಂದು ರಾಜ್ಯದ ಜನತೆಗೆ ತಿಳಿಸಿ ಎಂದು ಸವಾಲು ಹಾಕಿದರು.

ಸಂತೋಷ್ ಲಾಡ್‌ಗೆ ಮೈತುಂಬಾ ಗಣಿ ಹಣ ಅಂಟಿಕೊಂಡಿದೆ. ಆದರೆ ಹೊರಗಡೆ ತಾನು ಬಹಳ ಸಾಚಾ ಎಂಬಂತೆ ಬಿಂಬಿಸಿಕೊಳ್ಳುತ್ತಾರೆ. ಹಣದ ಮದದಿಂದ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಇವರಿಗೆ ದುಡ್ಡು ಇರಬಹುದು, ಆದರೆ ಪತ್ರಕರ್ತರಿಗೆ ನೈತಿಕತೆ ಇದೆ ಎಂದು ಪ್ರತಾಪ್ ಸಿಂಹ ಸಂತೋಷ್ ಲಾಡ್ ವಿರುದ್ಧ ಕಿಡಿಕಾರಿದರು.

ತಮ್ಮ ರಾಷ್ಟ್ರದ ಮೇಲೆ ದಾಳಿಯಾಗಿದೆ ಎಂದು ಸ್ವತಃ ಪಾಕಿಸ್ತಾನವೇ ಒಪ್ಪಿಕೊಂಡಿದೆ. ಆದರೆ ಕಾಂಗ್ರೆಸ್‌ನವರು ಮಾತ್ರ ಇದನ್ನು ಒಪ್ಪಿಕೊಳ್ಳದೆ ಇಲ್ಲದ ತಕರಾರು ತೆಗೆಯುತ್ತಿದ್ದಾರೆ. ಕಾಂಗ್ರೆಸ್‌ನವರಿಗೆ ಪಾಕಿಸ್ತಾನದ ಮೇಲೆ ಪ್ರೀತಿ ಇರುವ ಕಾರಣ ಇಂತಹ ಹೇಳಿಕೆ ನೀಡುತ್ತಾರೆ ಎಂದರು.

ಭಾರತೀಯ ಸೇನೆಯ ದಾಳಿಯನ್ನು ಲೇವಡಿ ಮಾಡಿದ ಶಾಸಕ ಕೊತ್ತೂರು ಮಂಜುನಾಥ್ ವಿರುದ್ಧ ಕೂಡ ಆಕ್ರೋಶ ವ್ಯಕ್ತಪಡಿಸಿದ ಪ್ರತಾಪ್ ಸಿಂಹ, ಕೊತ್ತೂರು ಮಂಜುನಾಥ್‌ಗೆ ಸಿಂಧ್‌ಊರಕ್ಕೂ ಸಿಂಧೂರಿಗೂ ವ್ಯತ್ಯಾಸವೇ ಗೊತ್ತಿಲ್ಲ. ಎರಡರ ಅರ್ಥ ಅರಿಯದೆ ಏನೇನೋ ಕನವರಿಸಿಕೊಂಡು ಮಾತನಾಡುತ್ತಾರೆ. ರಿಯಲ್ ಎಸ್ಟೇಟ್ ವ್ಯವಹಾರ ಮಾತ್ರ ತಿಳಿದಿರುವ ಇವರಿಗೆ ದೇಶ, ಯುದ್ಧ ಇದೆಲ್ಲಾ ಅರ್ಥ ಆಗೋಲ್ಲ ಎಂದು ಪ್ರತಾಪ್ ಸಿಂಹ ಲೇವಡಿ ಮಾಡಿದರು.

ಮೇ 20 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 17– ಮೇ 20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಕೀಳನಪುರ, ಸಿದ್ದರಾಮನಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮಿ ಪುರ, ಪಿ.ಜಿ ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೇಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್ ಇಂಡಸ್ಟ್ರೀಸ್, ಜಾಗ್ವರಿ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೇ 31ಕ್ಕೆ ಬೃಹತ್ ಉದ್ಯೋಗ ಮೇಳ

ಮೈಸೂರು, ಮೇ 17(ಎಂಟಿವೈ)– ಮೈಸೂರಿನ ಟಿ.ನರಸೀಪುರ ರಸ್ತೆಯಲ್ಲಿರುವ ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಆವರಣದಲ್ಲಿ ಮೇ 31ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ಎಂ.ಎಸ್. ಪ್ರಭುಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜು ಆವರಣದಲ್ಲಿ ಇದುವರೆಗೂ ನಾಲ್ಕು ಉದ್ಯೋಗ ಮೇಳ ನಡೆಸಲಾಗಿದ್ದು, ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಇದೀಗ ಬೃಹತ್ ಉದ್ಯೋಗ ಮೇಳ ಏರ್ಪಡಿಸಲಾಗಿದೆ ಎಂದರು. ಲೀಡ್ ಟ್ರೈನಿಂಗ್ ಅಂಡ್ ಕಾರ್ಪೊರೇಟ್ ಸಲ್ಯೂಷನ್ಸ್ ಸಂಸ್ಥೆಯ ಸಿಇಓ ಎಂ.ಆರ್.ವಿದ್ಯಾ ಮಾತನಾಡಿ, ಉದ್ಯೋಗ ಮೇಳದಲ್ಲಿ ಬಿಎ, ಬಿಕಾಂ, ಬಿಸಿಎ, ಬಿಬಿಎ, ಬಿಎಸ್ಸಿ, ಎಂಬಿಎ, ಎಸ್ಸೆಸ್ಸೆಲ್ಸಿ, ಪಿಯುಸಿ, ಬಿಇ, ಬಿಟೆಕ್, ಡಿಪ್ಲೊಮಾ, ಐಟಿಐ ವ್ಯಾಸಂಗ ಮಾಡಿದವರು ಪಾಲ್ಗೊಳ್ಳಬಹುದು. ಸುಮಾರು 50ಕ್ಕೂ ಹೆಚ್ಚು ಕಂಪನಿಗಳು ಈ ಮೇಳದಲ್ಲಿ ಪಾಲ್ಗೊಳ್ಳುತ್ತಿದ್ದು, ಈ ಮೇಳವನ್ನು ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸಲಿದ್ದಾರೆ. ಮೇಳದಲ್ಲಿ ಪಾಲ್ಗೊಳ್ಳುವವರಿಗೆ ಪ್ರವೇಶ ಉಚಿತವಿದೆ. ಹೆಚ್ಚಿನ ಮಾಹಿತಿಗೆ ಅಭ್ಯರ್ಥಿಗಳು ಮೊ. 8951745556, 96069 90745 ಸಂಪರ್ಕಿಸುವಂತೆ ಕೋರಿದರು.

ಪ್ರೊ.ಸಿದ್ದಲಿಂಗಯ್ಯ ಸಾಹಿತ್ಯ ವಲಯದಲ್ಲಿ ಒಂಟಿಸಲಗವಾಗಿದ್ದರು!

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬಣ್ಣನೆ

ಮೈಸೂರು, ಮೇ17(ಬಿಎಲ್‌ಯು)– ಸಾಹಿತ್ಯ ವಲಯದ ಯಾವುದೇ ಪಂಥಕ್ಕೆ ಸೇರದ ಪ್ರೊ. ಜಿ.ಎಸ್.ಸಿದ್ದಲಿಂಗಯ್ಯ ಅವರನ್ನು ಸಾಹಿತ್ಯ ಕ್ಷೇತ್ರದ ಒಂಟಿಸಲಗ ಎಂದೇ ಕರೆಯಲಾಗುತ್ತಿತ್ತು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ತಿಳಿಸಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾ ಭವನದಲ್ಲಿ ಇಂದು ಆಯೋಜಿಸಿದ್ದ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 95 ವರ್ಷಗಳ ಸಾರ್ಥಕ ಬದುಕು ಸವೆಸಿದ ಪ್ರೊಜಿ.ಎಸ್. ಸಿದ್ದಲಿಂಗಯ್ಯ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು.

ಮಾತು ಮತ್ತು ನಡೆಗೆ ಎಂದೂ ಅಶೌಚಕ್ಕೆ ಆಸ್ಪದ ನೀಡದ ಪ್ರೊ.ಸಿದ್ದಲಿಂಗಯ್ಯ ಅವರು ವಿವಾದರಹಿತ ಬದುಕು ಸಾಗಿಸಿದರು. ನೇರ–ನಡೆ ನುಡಿ ವ್ಯಕ್ತಿತ್ವದ ಪ್ರೊ.ಸಿದ್ದಲಿಂಗಯ್ಯ ಅವರಿಂದ ತ್ರಿಕರಣ ಶುದ್ಧಿಯನ್ನು ಕಲಿಯಬೇಕು ಎಂದು ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ತುಮಕೂರಿನ ಮಧುಗಿರಿಯಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದ ಪ್ರೊ.ಸಿದ್ದಲಿಂಗಯ್ಯ ಅವರಿಗೆ ಅಖಿಲ ಭಾರತ ಮಟ್ಟದ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಪದವಿ ಸಲ್ಲದಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಕಾಲೇಜು ಅಧ್ಯಾಪಕರಾಗಿ 30 ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿದ ಪ್ರೊ. ಸಿದ್ದಲಿಂಗಯ್ಯ, 80ಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದ್ದಾರೆ. ಈ ಮೂಲಕ ಸೃಜನಶೀಲ ಬರವಣಿಗೆಯಿಂದ ಸಾಹಿತ್ಯಾಸಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದರು ಎಂದು ಹೇಳಿದರು.

ಸಾಹಿತಿ, ವಿಮರ್ಶಕರಾಗಿದ್ದ ಸಿದ್ದಲಿಂಗಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದರು. ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವಕ್ಕೆ ಪಾತ್ರರಾಗಿದ್ದರು. ರಾಜ್ಯೋತ್ಸವ ಪ್ರಶಸ್ತಿ, ಬಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗೆ ಭಾಜನರಾಗಿದ್ದರು ಎಂದು ಡಾ.ಸಿ.ಪಿ.ಕೃಷ್ಣಕುಮಾರ್ ತಿಳಿಸಿದರು.

ಈ ವೇಳೆ ಮಾತನಾಡಿದ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಪ್ರೊ.ಸಿದ್ದಲಿಂಗಯ್ಯ ಅವರು ಕನ್ನಡ ಭಾಷೆಯ ಸೊಗಡನ್ನು ಪಸರಿಸಿದರು. ಕುವೆಂಪು ಅವರ ಶಿಷ್ಯರಲ್ಲಿ ಒಬ್ಬರಾದ ಪ್ರೊ.ಸಿದ್ದಲಿಂಗಯ್ಯ ಅವರು ಕಾವ್ಯ, ವಿಮರ್ಶೆ, ಅನುವಾದ ಸೇರಿದಂತೆ ಹಲವು ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಪ್ರೊ.ಸಿದ್ದಲಿಂಗಯ್ಯ ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಲೋಕದ ಕೊಂಡಿಯೊಂದು ಕಳಚಿದೆ ಎಂದು ಹೇಳಿದರು.

ನಂತರ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರು, ಪ್ರೊ.ಸಿದ್ದಲಿಂಗಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಆಯ್ಕೆಗೊಂಡ ಸಂದರ್ಭದಲ್ಲಿ ಪರಿಷತ್ ಸಂದಿಗ್ಧ ಪರಿಸ್ಥಿತಿಯಲ್ಲಿತ್ತು. ಹಲವು ಸವಾಲುಗಳನ್ನು ಎದುರಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಪರಿಷತ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ವೇಳೆ ಮಾತನಾಡಿದ ಪ್ರೊ.ಸಿದ್ದಲಿಂಗಯ್ಯ ಅವರು, ಈ ಕ್ಷಣದ ತನಕ ನಾನು ಶುದ್ಧ ವ್ಯಕ್ತಿಯಾಗಿ ನಡೆದುಕೊಂಡು ಬಂದಿದ್ದೆ. ಇನ್ನು ಮುಂದೆ ಕೂಡ ಆ ದೇವರೆ ಬಂದರೂ ನನ್ನನ್ನು ಭ್ರಷ್ಟನಾಗಿ ಮಾಡಲಾರ ಎಂಬ ಘೋಷಣೆ ಮೊಳಗಿಸಿದರು ಎಂದರು.

ತರುವಾಯ ಮಾತನಾಡಿದ ಲೇಖಕ ಪ್ರೊ.ಸಿ.ನಾಗಣ್ಣ, ಸಿದ್ದಲಿಂಗಯ್ಯ ಅವರು ನುಡಿದಂತೆ ನಡೆಯುವ ಶರಣ ಪ್ರಜ್ಞೆ ಮೈಗೂಡಿಸಿಕೊಂಡ ವಿಶಿಷ್ಟ ವ್ಯಕ್ತಿತ್ವದ ಸಾಹಿತಿ. ಯಾವುದೇ ಪ್ರಭಾವ ಹಾಗೂ ಶಿಫಾರಸು ಇಲ್ಲದೆ ಸ್ವಸಾಮರ್ಥ್ಯದಿಂದಲೇ ಎಲ್ಲಾ ಹುದ್ದೆಗಳನ್ನು ಪಡೆದವರು ಎಂದು ಹೇಳಿದರು.

ಸಾಹಿತ್ಯ ಪ್ರೇಮಿಗಳಾದ ಡಾ.ವೈ.ಡಿ.ರಾಜಣ್ಣ ಲೋಕಪ್ಪ ಕೆಂಪಣ್ಣ, ಸೋಮಶೇಖರ್, ಡಾ.ಟಿ.ತ್ಯಾಗರಾಜ್, ಎ.ಸಿ.ಮಂಜುನಾಥ್, ಮೂಗೂರು ನಂಜುಂಡ ಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾ ಭವನದಲ್ಲಿ ಶನಿವಾರ ಆಯೋಜಿಸಿದ್ದ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು ಪ್ರೊ.ಸಿದ್ದಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶ್ರದ್ಧಾಂಜಲಿ ಅರ್ಪಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿಷನ್ ಇಂಪಾಸಿಬಲ್ (ಇಂ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಿಟ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೀ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬಳಿ ಶ್ರೀ ವಾಲ್ಮೀಕಿ ಭವನ ನಿರ್ಮಾಣಕ್ಕೆ ಜಾಗ ಮಂಜೂರು

ಕರ್ನಾಟಕ ನಾಯಕ ಜನಾಂಗದ ಹಿತರಕ್ಷಣಾ ಸಮಿತಿಯಿಂದ ಅಭಿನಂದನೆ

ಮೈಸೂರು, ಮೇ17(ಜಿಎ)–ಶ್ರೀ ವಾಲ್ಮೀಕಿ ಮಹರ್ಷಿ ಭವನ ನಿರ್ಮಾಣಕ್ಕೆ ಸ್ಥಳ ಮಂಜೂರಾದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಜಿಲ್ಲಾಡಳಿತ ಮತ್ತು ಸಹಕಾರ ನೀಡಿದವರಿಗೆ ಕರ್ನಾಟಕ ನಾಯಕ ಜನಾಂಗದ ಹಿತರಕ್ಷಣಾ ಸಮಿತಿಯು ಧನ್ಯವಾದ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಈ ಕುರಿತು ಸಮಿತಿಯ ಅಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿ, ಮೈಸೂರು ತಾಲೂಕಿನ ಕಸಬಾ ಹೋಬಳಿ ಸರ್ವೇ ನಂ.92ರಲ್ಲಿ ಶ್ರೀ ವಾಲ್ಮೀಕಿ ಮಹರ್ಷಿ ಭವನ ನಿರ್ಮಾಣಕ್ಕೆ 12 ಕುಂಟೆ ಜಮೀನು ಮಂಜೂರಾಗಿದ್ದು, ನಾಯಕ ಸಮುದಾಯದವರಲ್ಲಿ ಸಂತಸ ತಂದಿದೆ. ಈ ಕಾರ್ಯಕ್ಕೆ ನೆರವಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಡಳಿತ ಮತ್ತು ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಸಮುದಾಯದ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇವೆ ಎಂದರು.

ಮೈಸೂರಿನಲ್ಲಿ ಶ್ರೀ ವಾಲ್ಮೀಕಿ ಸಮುದಾಯ ಭವನ ನಿರ್ಮಾಣವಾಗುವುದರಿಂದ ನಮ್ಮ ಸಮುದಾಯದವರು ಶುಭ ಸಮಾರಂಭ ನಡೆಸಲು, ಸಂಘಟನಾ ಕಾರ್ಯಕ್ರಮಗಳು ಮತ್ತು ಸಮುದಾಯದ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಲು ಅನುಕೂಲವಾಗಲಿದೆ ಎಂದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಶೀಘ್ರವಾಗಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಅಗತ್ಯವಾದ ಅನುದಾನ, ಮತ್ತಿತರರು ನೆರವು ನೀಡಬೇಕು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವಸೇನೆಯ ರಾಜ್ಯಾಧ್ಯಕ್ಷ ದೇವರಾಜು ಟಿ.ಕಾಟೂರು, ಶ್ರೀರಾಮುಲು ಅಭಿಮಾನಿಗಳ ಸಂಘದ ರಾಜ್ಯಧ್ಯಕ್ಷ ಪ್ರಭಾಕರ್, ಮಹಿಳಾ ಘಟಕದ ಅಧ್ಯಕ್ಷರಾದ ರಾಜೇಶ್ವರಿ, ಕರ್ನಾಟಕ ವೀರಕೇಸರಿ ಪಡೆ ಸಂಘದ ಅಧ್ಯಕ್ಷ ವಧುವನ ಚಂದ್ರ, ಉಪಾಧ್ಯಕ್ಷ ಎಂ.ಕುಮಾರ, ಕಾರ್ಯದರ್ಶಿ ಮಹಾದೇವು, ಗೌರವ ಸಲಹೆಗಾರ ಆಲಗೂಡು ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಕಾಳಿದಾಸ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 17– ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕದ ಗುರುಪೀಠದ ವತಿಯಿಂದ ನಡೆಸಲಾಗುತ್ತಿರುವ ಕೆ.ಆರ್.ನಗರದ ಸಾರ್ವಜನಿಕ ಕಾಳಿದಾಸ ವಿದ್ಯಾರ್ಥಿ ನಿಲಯಕ್ಕೆ 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448403940 ಸಂಪರ್ಕಿಸಬಹುದು.

ಕುತ್ತಿಗೆ, ಭುಜದ ನೋವು ಚಿಕಿತ್ಸಾ ಶಿಬಿರ

ಮೈಸೂರು, ಮೇ 17 – ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 19 ರಿಂದ 31 ರವರೆಗೆ ಕುತ್ತಿಗೆ, ಭುಜದ ನೋವು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9844136277, 0821–2548231 ಸಂಪರ್ಕಿಸಬಹುದು.


ದೇಶದ ಪ್ರಧಾನ ಮಂತ್ರಿಯಾಗಿ
ಕರ್ನಾಟಕ, ಕನ್ನಡದ ಕೀರ್ತಿ ಪತಾಕೆಯ
ದೆಹಲಿಯಲ್ಲಿ ಮೆರೆಸಿದ ಹೆಮ್ಮೆಯ ಮಣ್ಣಿನ ಮಗ
ಹೆಚ್.ಡಿ.ದೇವೇಗೌಡರ
ಹುಟ್ಟುಹಬ್ಬದ ವೇಳೆ ಅವರು ಶತಾಯುಷಿಗಳಾಗಿ
ನಮ್ಮೆಲ್ಲರ ಮಾರ್ಗದರ್ಶಕರಾಗಿರಲು ಜಗನ್ಮಾತೆ
ಚಾಮುಂಡೇಶ್ವರಿ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.
ಪ್ರಕಟಣೆ: ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯರು